* **ಶ್ರೀ ಬಿ. ಹುಚ್ಚೇಗೌಡರು.**—ಸ್ವಾಮಿ, ಈ ಸಭೆ ಯಲ್ಲಿ ಶ್ರೀಮನ್ಮಹಾರಾಜರವರು ಮಾಡಿದ ಭಾಷಣದ ಮೇಲೆ ಒಂದು ನಿರ್ಣಯವನ್ನು ಕಳುಹಿಸತಕ್ಕ ಹಕ್ಕು ಈ ಸಭೆಗೆ ಇದೇ ಮೊದಲನೆಯದಾಗಿ ಬಂದಿದೆ. ಈಗ ನಾನು ಸರ್ಕಾರದ ನೀತಿಯ ವಿಚಾರವಾಗಿ ಒಂದೆರಡು ವಿಚಾರಗಳನ್ನು ಮಾತ್ರ ಮಾತನಾಡುತ್ತೇನೆ. ಈಗ ತಾನೆ ನ್ಯಾಯಾಂಗ ಸಚಿವರು ಈಗಿನ ಸರ್ಕಾರದ ಆಡಳಿತ ನೀತಿಯನ್ನು ಹೀಗೆಲ್ಲಾ ಟೀಕಿಸುತ್ತೀರಲ್ಲಾ ಎಂದು ಹೇಳಿದರು. ಅವರಿಗೆ ನಾನು ಹೇಳುವುದು ಇಷ್ಟೆ. ಇದರಲ್ಲಿ ನಾವು ಅವರು ಮಾಡದೇ ಇರತಕ್ಕದ್ದನ್ನು ಸೂಚಿಸುವುದಕ್ಕೆ ಮಾತ್ರ ಅವಕಾಶವಿದೆಯೇ ಹೊರತು ಅವರ ನೀತಿ ಏನು, ಹೇಗೆ ಮಾಡಬೇಕಾಗಿತ್ತು ಎಂಬು ದನ್ನು ಹೇಳುವುದಕ್ಕೆ ಅವಕಾಶವಿಲ್ಲ. ವಿದ್ಯುಚ್ಛಕ್ತಿಯ ವಿಚಾರದಲ್ಲಿ ಅಷ್ಟು ಮಾಡಿದ್ದೇವೆ, ಇಷ್ಟು ಮಾಡಿ ದ್ದೇವೆ ಎಂದು ಹೇಳಿದರು. ಅದರಲ್ಲೂ ಶೇಕಡ 20ರಷ್ಟು ಲಾಭ ಬರುತ್ತದೆ ಎಂದು ಹೇಳಿದರು. ಒಂದು ಮಾತು ಹೇಳುವುದಾದರೆ ಒಂದು ಯೂನಿ ಟ್‌ಗೆ 2 ಕಾಸು ಆಗುವಾಗ ನಾಲ್ಕು ಆಣೆ ಹಾಕಿ ದರೆ ಶೇಕಡ 20 ಅಲ್ಲ 50 ಆದರೂ ಬರಬಹುದು. ಇವತ್ತು ಆ ಪರಿಸ್ಥಿತಿ ಇದೆ. ಸಾರ್ವಜನಿಕ ಸಂಸ್ಥೆಗಳಿಗೆ ಎಷ್ಟುಮಟ್ಟಿಗೆ ತೆರಿಗೆಯನ್ನು ವಿಧಿಸುತ್ತೀರೋ ಅದ ರಂತೆಯೇ ಲಾಭ ಸಂಪಾದಿಸತಕ್ಕ ಸಂಸ್ಥೆಗಳಿಗೂ ಹಾಕ ಬೇಕಾಗಿತ್ತು. ಇವೆಲ್ಲವನ್ನೂ ಯಾವ ತತ್ವದಮೇಲೆ ಮಾಡುತ್ತೀರಿ ಎಂಬುದನ್ನು ಅವರು ವಿಶದಮಾಡಬೇಕಾ ಗಿತ್ತು. ಆ ಮೇಲೆ ಇರಿಗೇಷನ್ ಫಂಡ್ ವಿಚಾರ ಹೇಳಿ ದರು. ನಮ್ಮ ದೇಶದಲ್ಲಿರತಕ್ಕ ಜಮೀನುಗಳಿಗೆ ಸರಿ ಯಾಗಿ ನೀರಾವರಿ ಸರಬರಾಜು ಆಗುವುದಿಲ್ಲ. ಒಂದು ತಿಂಗಳಿನಲ್ಲಿ 15 ದಿನದ ಮಟ್ಟಿಗೆ ಮಾತ್ರ ಸರಬರಾಜು ಆಗುತ್ತದೆ. ಅದಕ್ಕೋಸ್ಕರವೇ ಈ ನೀತಿಯನ್ನು ಬದ ಲಾಯಿಸಿ ತಕ್ಷಣವೇ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಲಾರಿಗಳ ಮೇಲೆ ಪಂಪುಗಳನ್ನು ಸಾಗಿಸಿ, ವಿದ್ಯುಚ್ಛಕ್ತಿ ಯನ್ನು ಒದಗಿಸಿ ಪಂಪುಗಳನ್ನು ಕೊಟ್ಟು ವ್ಯವಸಾಯ ಮಾಡಿಸಿದರೆ ಚೆನ್ನಾಗಿ ಫಸಲು ಬರುತ್ತದೆ. ಇದಕ್ಕಾಗಿ ನೂರಾರು ಜನ ರೈತರು ಬಂದು ಸರ್ಕಾರದವರ ಹತ್ತಿರ ಎಷ್ಟು ಕೇಳಿಕೊಂಡರೂ ಏನೂ ಆಗಲಿಲ್ಲ. ನಮ್ಮ ಹಳ್ಳಿಯಲ್ಲೂ ಅದೇ ರೀತಿ ಮಾಡಿದರು. ಊರಿಂದ ಊರಿಗೆ ತಿರುಗಿಸಿದರು. ಇದು ಹೆಚ್ಚು ಆಹಾರ ಬೆಳೆ ಬೆಳೆಯುವ ನೀತಿ ಅಲ್ಲ. ಇದು ನಿಮ್ಮ ನೀತಿಗೆ ಸರಿ ಹೋಗುವುದಿಲ್ಲ. ಆಹಾರದ ಕೊರತೆ ನಮ್ಮ ದೇಶದಲ್ಲಿ 10 ವರ್ಷದಿಂದಲೂ ಇದೆ. ಅದು ಇವತ್ತಿನದಲ್ಲ. ಹೀಗಿರುವಾಗ ಇದುವರೆಗೂ ಎಂದರೆ ಈಗ ಎರಡು ವರ್ಷಗಳಿಂದಲೂ ಹೆಚ್ಚು ಆಹಾರ ಬೆಳೆ ಬೆಳೆಯುವ ವಿಷಯದಲ್ಲಿ ಮಾಡದೇ ಇರುವುದನ್ನು ಇನ್ನುಮುಂದೆ ಮಾಡುತ್ತೇವೆ ಎಂದರೆ ಏನು ಅರ್ಥ? ಅದಕ್ಕೆ ಬದ ಲಾಗಿ ಈಗ ಎರಡು ವರ್ಷದಿಂದ ಒಂದು ಓಪನ್ ರೇಷನ್ ಜಾಸ್ತಿ ಕೊಡುತ್ತಿದ್ದೇವೆ, ಅದು ನಮ್ಮ ಪ್ರೋಗ್ರೆಸೀವ್ ಪಾಲಿಸಿ ಎಂದು ಹೇಳಿದ್ದರೆ ಅಭಿ ನಂದಿಸಬಹುದಾಗಿತ್ತು. ಅಲ್ಲದೆ ಆರೋಗ್ಯದ ವಿಚಾ ರದಲ್ಲಿ ಗ್ರಾಮಗಳ ಕಡೆಗೆ ಏನಾದರೂ ಹೆಚ್ಚು ಆಸ್ಪತ್ರೆವಗ್ಗೈರೆಗಳನ್ನು ಕೊಡುವ ವಿಚಾರದಲ್ಲಿ ಈ ಭಾಷಣದಲ್ಲಿ ಏನನ್ನೂ ಹೇಳಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ಜನ ಜೀವನದ ಮಟ್ಟ ಹೆಚ್ಚಬೇಕು. ನಾವು ಹೆಚ್ಚು ಬೆಳೆ ಬೆಳೆಯಬೇಕು. ಆದ್ದರಿಂದ ಮುಖ್ಯ ವಾಗಿ ನಮ್ಮ ಆರೋಗ್ಯವನ್ನು ದೃಢವಾಗಿಟ್ಟುಕೊಂಡು ನಮ್ಮ ದೇಶ ಪ್ರಗತಿ ಮಾರ್ಗಕ್ಕೆ ಬರಬೇಕಾದರೆ ನಮ್ಮ ಜೀವನದ ಮಟ್ಟ ಹೆಚ್ಚಬೇಕು. ಜನ ಜೀವನದ ಮಟ್ಟ ಹೆಚ್ಚಬೇಕಾದರೆ ಜನರಿಗೆ ವಿದ್ಯಾಭ್ಯಾಸ ಬೇಕು. ಈ ಸರ್ಕಾರ ಬಂದ ದಿನ ಮೂರು ವರ್ಷದಲ್ಲಿ ಕಡ್ಡಾಯ ವಾಗಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಜಾರಿಗೆ ತರು ತ್ತೇವೆಂದು ಹೇಳಿದರು. ನಮ್ಮ ದೇಶದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕೊಡಬೇಕಾದ ಅವಶ್ಯಕತೆ ಎಷ್ಟು ಮಟ್ಟಿಗಿದೆ ಎಂಬುದನ್ನು ಈ ಭಾಷಣದಲ್ಲಿ ಹೇಳಿಲ್ಲ ಹೀಗೆ ನಾವು ಹಿಂದೆ ಹೆಜ್ಜೆ ಇಟ್ಟಿದ್ದೇವೆಯೇ ಹೊರತು ಮುಂದೆ ಹೋಗಿಲ್ಲ. ಸಾಮಾನ್ಯವಾಗಿ ವಿದ್ಯೆ ಇಲ್ಲದವರಿ ವಿದ್ಯೆಯನ್ನು ಕಲಿಸಲು ಪ್ರಯತ್ನಪಟ್ಟಿಲ್ಲ. ಅದಕ್ಕೆಬದ ಲಾಗಿ ಯಾರು ಹೆಚ್ಚು ವಿದ್ಯೆ ಕಲಿತಿದ್ದಾರೋ ಅವರಿ ಡಿಗ್ರಿಗಳನ್ನು ಕೊಡಲು ಹೆಚ್ಚು ಖರ್ಚು ಮಾಡುತ್ತಿದ್ದೀರಿ ಈ ರೀತಿ ಪ್ರತಿಯೊಂದರಲ್ಲೂ ಸಹ ಹಿಂದೆ ನೀವು ಯಾ ನೀತಿಯನ್ನು ಪ್ರತಿಪಾದಿಸುತ್ತಾ ಇದ್ದಿರೋ ಅದನ್ನು ಸ್ವಲ್ಪಮಟ್ಟಿಗೂ ಮುಂದುವರಿಸಿಲ್ಲ. ಆದ್ದರಿಂದರೆ ಈ ರೀತಿ ಆಗುತ್ತಾ ಇದೆ. ಕಡ್ಡಾಯ ಪ್ರಾಥಮಿ ವಿದ್ಯಾಭ್ಯಾಸ ಕ್ರಮ ಈ ವರ್ಷದೊಳಗೆ ಜಾರಿಗೆ ಬ ಬೇಕೆಂದು ಅಸೆಂಬ್ಲಿಯಲ್ಲಿ ಘಂಟಾಘೋಷವಾಗಿ ನಿರ್ಣಯ ಮಾಡಿದ್ದೇವೆ. ಕಾಂಗ್ರೆಸ್ ಪಕ್ಷದವರೂ ಅದನ್ನು ಅಂಗೀಕಾರ ಮಾಡಿದ್ದಾರೆ. ಆ ವಿಚಾರದಲ್ಲಿ ಏನ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ಈ

ಾಷಣದಲ್ಲಿ ಏನೂ ಹೇಳಿಲ್ಲ. ಪ್ರತಿಯೊಬ್ಬನಿಗೂ ಓನಾಮ ಲಿಸಬೇಕಾದ್ದು ಸರ್ಕಾರದವರ ಕರ್ತವ್ಯ. ಈಗ ಾವು ಮಾಡಿರತಕ್ಕದ್ದನ್ನು ಎಷ್ಟು ಮಾತ್ರವೂ ಪ್ರೊಗ್ರೆಸಿವ್ ಎಂದು ಹೇಳುವುದಕ್ಕಾಗುವುದಿಲ್ಲ.

"It is obvious that during the next two or three years, we have to concentrate more on qualitative reform rather than on merely quantitative expansion"

ಎಂದು ಹೇಳಿದ್ದಾರೆ. Qualitative ಏನೆಂಬುದು ಗೊತ್ತಾದರೂ quantitative ಏನು ಎಂಬುದು ಗೊತ್ತಾಗುವುದಿಲ್ಲ. ಇನ್ನು ಮೂರು ವರ್ಷ ಪ್ರೊಗ್ರೆಸ್ ಇಲ್ಲ ಎಂದು ಹೇಳಿದರೆ ಎಷ್ಟುಮಟ್ಟಿಗೆ ನಿರಾಶಾದಾಯಕವಾಗಿದೆ ಎಂಬುದನ್ನು ಹೇಳಬೇಕಾಗಿಲ್ಲ. ಈ ಭಾಷಣದಲ್ಲಿ ಏನಾದರೂ ನಿರೀಕ್ಷಣೆಮಾಡುವುದು ಇದ್ದರೆ ಕಡ್ಡಾಯ ಪ್ರಾಥಮಿಕ ವಿದ್ಯಾಭ್ಯಾಸವನ್ನೂ ಸಾರ್ವತ್ರಿಕವಾಗಿ ಜಾರಿಗೆ ತರಬೇಕಾದ ವಿಚಾರ ಶ್ರೀಮನ್ಮಹಾರಾಜರವರ ಭಾಷಣದ ಕೊನೆಯಲ್ಲಿ "Justice, social, economic and political Equality of status and of opportunity" ಎಂದು ಹೇಳಿದ್ದಾರೆ. ಹೀಗಿರುವಾಗ ದೇಶಾದ್ಯಂತ 80 ಲಕ್ಷ ಜನರಿಗೂ ಅನುಕೂಲವಾಗತಕ್ಕ ಯಾವ ನೀತಿಯನ್ನು ಅನುಸರಿಸಿದ್ದೀರಿ ?

ಇನ್ನೊಂದು ವಿಷಯ, ಪಾನನಿರೋಧಕ್ಕೆ ಸಂಬಂಧಪಟ್ಟದ್ದು. ಹಿಂದೆ ತಾವು ಈ ಕುಡಿತವನ್ನು ನಿಲ್ಲಿಸಬೇಕೆಂದು ಬಹುಮಟ್ಟಿಗೆ ಒತ್ತಾಯಪಡಿಸುತ್ತಿದ್ದೀರಿ. ಅದನ್ನು ಹಿಂದಿನ ಸರ್ಕಾರದವರಿಗೆ ನಾವೆಲ್ಲರೂ ಒತ್ತಾಯಮಾಡುತ್ತಾ ಇದ್ದೆವು. ಆಗ ಎರಡು ತಾಲ್ಲೂಕುಗಳಲ್ಲಿ ಇತ್ತು. ಅದನ್ನು 5 ವರ್ಷದಲ್ಲಿ ಸಂಪೂರ್ಣವಾಗಿ ಜಾರಿಗೆ ತರುತ್ತೇವೆಂದು ಹೇಳಿದಾಗ ಆಗ ತೀವ್ರವಾಗಿ ವಿರೋಧಿಸಿದರು. ಅದೇ ರೀತಿ ಮುಂದುವರಿಸಿಕೊಂಡು ಹೋದರೆ ಕುಡಿಯುವುದು ಕಮ್ಮಿ ಆಗುವುದಿಲ್ಲ ಎಂದು ಹೇಳಿದರು. ಅದೇ ಈಗಿನ ಸರ್ಕಾರ ಬಂದ ಮೇಲೆ 1947ರಲ್ಲಿ ಪ್ರಾರಂಭವಾದದ್ದು 1950ಕ್ಕೆ ನಿಂತು ಹೋಗಬೇಕಾಗಿತ್ತು. ಆ ರೀತಿ ಆಗಿಲ್ಲ. ಈಗ ನಮ್ಮ ಡಿಸ್ಟ್ರಿಕ್ಟ್‌ನಲ್ಲಿ ಏನಾಗಿದೆ ? ಅಲ್ಲಿ ಪಾನನಿರೋದವನ್ನು ಜಾರಿಗೆ ತಂದಿದ್ದಾರೆ. ನಮ್ಮ ಡಿಸ್ಟ್ರಿಕ್ಟ್‌ನ ಪಕ್ಕದಲ್ಲಿ ಒಂದು ಹಳ್ಳಿ ಇದೆ. ಅಲ್ಲಿಗೆ ಇವತ್ತು ನೂರಾರು ಜನ ಕುಡಿಯುವುದಕ್ಕೆ ಹೋಗುತ್ತಾರೆ. ಹಿಂದೆ ತಿಂಗಳಿಗೆ 120 ಗ್ಯಾಲನ್ ಖರ್ಚಾಗುತ್ತಾ ಇದ್ದದ್ದು ಇವತ್ತು 600 ಗ್ಯಾಲನ್ ಖರ್ಚಾಗುತ್ತಾ ಇದೆ. ಅಲ್ಲಿಗೆ ರೈಲಿನಲ್ಲಿ ಬಸ್ಸುಗಳಲ್ಲಿ ಅನೇಕ ಜನ ಗುಂಪುಗುಂಪಾಗಿ ಹೋಗುತ್ತಾರೆ.

ಹೀಗೆ ಕುಡಿಯುವುದಕ್ಕಾಗಿ ಜನರು ಎಲ್ಲೆಲ್ಲಿಂದ ಬಸ್ಸುಗಳಲ್ಲಿ,ರೈಲಿನಲ್ಲಿ ದುಡ್ಡುಕೊಟ್ಟುಕೊಂಡು ಬರುತ್ತಿದ್ದಾರೆ ! ಎಲ್ಲೆಲ್ಲಿ ಕುಡಿಯುವ ಅನುಕೂಲತೆಗಳನ್ನಿಟ್ಟುಕೊಂಡಿದ್ದಾರೋ, ಅಲ್ಲೆಲ್ಲ ಹೊಡೆದಾಟ, ವ್ಯಾಜ್ಯ ಇವುಗಳು ಹೇಳತೀರದಷ್ಟಿವೆ. ಹೀಗೆ ಆ ಬಡವರಿಂದ ತಾವು ಸಂಪಾದಿಸುತ್ತಿರುವುದು ಕಲುಷಿತವಾದ ಹಣ ಅಂಥಾ ದುಡ್ಡನ್ನು ತೆಗೆದುಕೊಂಡು ತಾವು ಹೇಗೆ ಸರ್ಕಾರವನ್ನು ನಡೆಸುತ್ತಿದ್ದೀರೋ ಅದು ನನಗೆ ಹೊಳೆಯದಾಗಿದೆ. ನಾನು ಇದಕ್ಕೆ ಏನು ಹೇಳಲಿ ? ಹೀಗೆಲ್ಲ ಮಾಡುತ್ತಾ ಹೋದರೆ ಕುಡಿತವನ್ನು ತಪ್ಪಿಸಿದಂತಾಯಿತೇ ! ಐದು ಜಿಲ್ಲೆಗಳಲ್ಲಿ ಈಗಾಗಲೇ ಈ ಪಾನನಿರೋಧ ಜಾರಿಗೆ ತಂದಿರುತ್ತೇವೆಂದು ತಾವು ಹೇಳಬಹುದು. ಆದರೆ ವಸ್ತುತಃ ನಿಜಾಂಶವೇನಿರುತ್ತೆಂಬುದು ನಿಮಗೆ ಹೊಳೆದಿಲ್ಲ. ನೀವು ಹಿಂದೆ ಸೇಲ್ಸ್ ಟ್ಯಾಕ್ಸ್ ಹಾಕತಕ್ಕ ಕಾಲದಲ್ಲಿ ಈ ಕುಡಿತವನ್ನು ಸಂಪೂರ್ಣವಾಗಿ ನಿಲ್ಲಿಸುತ್ತೇವೆಂದು ಹೇಳಿದ್ದ ಕಾರಣ ಆಗ ನಾವೆಲ್ಲರೂ ಆ ಸುಂಕ ತೆರಲು ಒಪ್ಪಿಕೊಂಡಿದ್ದಾಯಿತು. ಆದರೆ ಹಾಗೆ ಆ ಕುಡಿತವನ್ನು ತಪ್ಪಿಸದೆ ಈ ದಿವಸ ನೀವು ಈ ಸೇಲ್ಸ್ ಟ್ಯಾಕ್ಸ್ ಹಾಕಲು ನಿಮಗೆ ನ್ಯಾಯದ ದೃಷ್ಟಿಯಾದರೂ ಇದೆಯೇ ? ನೀವು ಆಡಿದ ಪ್ರಕಾರ ನಿಮ್ಮ ನೀತಿ ವಿಚಾರದಲ್ಲಿ ನೀವು ತಪ್ಪದಂತೆ ನಡೆದುಕೊಳ್ಳಬೇಕಾದುದು ನಿಮ್ಮ ಕರ್ತವ್ಯ.

* ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ತಾವು ಇಷ್ಟುಹೇಳುತ್ತಿದ್ದೀರಲ್ಲಾ. ನೀವು ಎಲ್ಲಾದರೂ ಹೀಗೆ ಹೇಳಿ ಒಂದು ಸ್ಥಳದಲ್ಲಾದರೂ ಆ ರೀತಿ ಕುಡಿಯುವುದನ್ನು ತಪ್ಪಿಸಿದ್ದೀರಾ ? ಹಾಗೆ ಮಾಡಿದ್ದರೆ, ತಿಳಿಸಿ, ನೋಡೋಣ.

ಶ್ರೀ ಬಿ. ಹುಚ್ಚೇಗೌಡರು.—ಆದರೆ ನಾನು ಈ ವಿಚಾರವಾಗಿ ಅವರಿಗೆ ಸಮರ್ಥನೆ ಮಾಡಬೇಕಾದ್ದಿಲ್ಲ. ನಮ್ಮ ಗ್ರಾಮದಲ್ಲಿ ತಾವು ಈ ಪಾನನಿರೋಧವನ್ನು ಜಾರಿಗೆ ತರುವ 3 ವರ್ಷಗಳ ಮುನ್ನವೇ ನಾನು ಇದನ್ನು ತಪ್ಪಿಸಿದ್ದೆನು. ಆದರೆ ಶ್ರೀ ರಂಗರಾಮಯ್ಯನವರು ಎಷ್ಟು ಗ್ರಾಮಗಳಲ್ಲಿ ಹೀಗೆ ನಿಲ್ಲಿಸಿದ್ದಾರೋ ನನಗಂತೂ ತಿಳಿಯದು. ಈ ಕುಡಿತದಿಂದ ಬಡಬಗ್ಗರು ಹಾಳಾಗಿ ಹೋಗುತ್ತಿದ್ದಾರೆ. ಅವರ ಸಂಸಾರಗಳೆಲ್ಲ ಹಾಳಾಗುತ್ತಿವೆ. ಶ್ರೀಮಂತರು ಬೇಕಾದರೆ ಕುಡಿಯಲಿ, ನಾನು ಬೇಡವೆಂದು ಹೇಳುವುದಿಲ್ಲ. ಈ ಪಿಡುಗಿನಿಂದ ಬಡಬಗ್ಗರನ್ನುಪಾರುಮಾಡದಿದ್ದರೆ ದೇಶವೇ ಹಾಳಾಗಿ ಹೋಗುತ್ತದೆ. ತಾವು ಹೇಳಿದಂತೆ ಕುಡಿತವನ್ನು ತಪ್ಪಿಸದೆ ತಾವು ಈ ಸೇಲ್ಸ್ ಟ್ಯಾಕ್ಸ್ ವಸೂಲುಮಾಡಲು ತಮಗೆ ಈ ದಿವಸ ಅವಕಾಶವಿದೆಯೇ ಎಂದು ನಾನು ಕೇಳಬೇಕಾಗಿದೆ.

ಆದರೆ ನಿನ್ನೆಯ ದಿವಸ ಶ್ರೀ ಸುಬ್ರಹ್ಮಣ್ಯರವರು ಕೊಂಚ ಜಂಭವಾಗಿಯೇ ಮಾತನಾಡಿದರು. ಅವರು ಯಾವ ಭಾವನೆಯಿಂದ ಹಾಗೆ ಮಾತನಾಡಿದ್ದರೆಂದರೆ— ಇಲ್ಲಿ ಮೈನಾರಿಟಿ ಪಕ್ಷಕ್ಕೆ ಸೇರಿರತಕ್ಕ ನಾವುಗಳು ಎಲ್ಲೋ ಕೇವಲ 4-5 ಮಂದಿ ಇರುವೆವೆಂಬ ಒಂದು ತಾತ್ಸಾರ ಮನೋಭಾವನೆಯಿಂದ ಹಾಗೆ ಮಾತನಾಡಿರಬಹುದು. ನಮ್ಮನ್ನು ಕಸದ ಕಡ್ಡಿಗಿಂತಲೂ ತೃಣವಾಗಿ ಭಾವಿಸಿ, ನಮ್ಮನ್ನು ಹೆದರಿಸುವಷ್ಟು ಮಟ್ಟಿಗೂ ಸಹ ಮಾತನಾಡಿರುತ್ತಾರೆ. ನಾವು ಮೊನ್ನೆ ಈ ಅಧಿವೇಶನಕ್ಕಾಗಿ ಇಲ್ಲಿಗೆ 15ನೆಯ ತಾರೀಖು ಬಂದೆವು. ಆದರೆ ಅದಕ್ಕೆ ಒಂದು ದಿವಸ ಹಿಂದೆಯೇ ಅಂದರೆ 14ನೆಯ ತಾರೀಖಿನ ದಿವಸ ಶ್ರೀ ಸುಬ್ರಹ್ಮಣ್ಯರವರು ಒಂದು ಸಮ್ಮೇಳನದಲ್ಲಿ ಕುಳಿತು ಮಾತನಾಡುತ್ತಾ, "ನಾಳೆ ಲೆಜಿಸ್ಲೇಟೀವ್ ಅಸೆಂಬ್ಲಿ" ನಡೆಯುತ್ತದೆ. ಅಲ್ಲಿಗೆ ಹೋಗಿ ಇದನ್ನು ಸಭೆಯಲ್ಲಿ ಮಂಡಿಸಿ, ಅದರ ಬೆಂಬಲಪಡೆದು ಮುಂದೆ ಇದನ್ನು ಕಾರ್ಯರೂಪಕ್ಕೆ ತರುವಂತೆ ಮಾಡುತ್ತೇನೆ" ಎಂಬುದಾಗಿ ಹೇಳಿ ಬಂದಿದ್ದಾರೆ. ಆದರೆ ಹಾಗೆ ಒಂದು ಮ್ಯಾನ್‌ಡೇಟ್ ಕೊಡಲು ಅವರಿಗೆ ಒಪ್ಪಿಗೆಯಿತ್ತೋ ಅಥವಾ ಇರಲಿಲ್ಲವೋ ಆ ಸಂಗತಿ ನನಗೆ ತಿಳಿಯದು. ಆದರೆ ಇವರು ಒಂದು ಮ್ಯಾಂಡೇಟ್ ಕೇಳಿದರು. ಅದಕ್ಕೆ ಅವರು ಒಂದು ಮ್ಯಾಂಡೇಟ್ ಕೊಟ್ಟರು, ಅಷ್ಟೆ. ಆದರೆ ಇದು ಎಷ್ಟರಮಟ್ಟಿಗೆ ನೆರವೇರುತ್ತದೆಂಬುದನ್ನು ನಾನು ಕಾದು ನೋಡಬೇಕಾಗಿದೆ.

[ಅನೇಕರು ಸಭೆಯಲ್ಲಿ ಅದೇನು ವಿಚಾರ ! ಮಾನ್ಯ ಸದಸ್ಯರು ಎಲ್ಲವನ್ನೂ ಮುಗಂ ಆಗಿ ಮಾತನಾಡುತ್ತಿದ್ದಾರೆ ಎಂಬುದಾಗಿ ಧ್ವನಿಗೈಯುತ್ತಿದ್ದರು].

ಅಧ್ಯಕ್ಷರು.—ಅವರು ಮುಂದೇನು ಮಾಡುತ್ತಾರೆಂಬುದನ್ನು ಕಾದು ನೋಡುತ್ತೇನೆ ಎಂಬುದಾಗಿ ಹೇಳಿದರು.

ಶ್ರೀ ಬಿ. ಹುಚ್ಚೇಗೌಡರು.—ಮೊನ್ನೆ ತಾನೆ ಕೇವಲ ಪ್ರಜಾಸತ್ತಾತ್ಮಕ ಸರ್ಕಾರ ಜಾರಿಯಲ್ಲಿರುವ ರಷ್ಯಾ ದೇಶದಲ್ಲಿ ಕೂಡಾ ಚುನಾವಣೆಗಳಾದವು. ಆದರೆ ಅಂಥಾ ಪ್ರಜಾಸತ್ತಾತ್ಮಕ ರಾಜ್ಯವೆಂದು ಹೇಳಿಕೊಳ್ಳುತ್ತಿರುವ ನೀವು ಏಕೆ ಇನ್ನೂ ಆ ಚುನಾವಣೆಗಳನ್ನು ಮಾಡದೆ ಸುಮ್ಮನಿದ್ದೀರೋ ನನಗದು ತಿಳಿಯದಾಗಿದೆ. ಹೀಗಿರುವಾಗ ಇದನ್ನು ಪ್ರಜಾಸತ್ತಾತ್ಮಕ ಸರ್ಕಾರವೆಂದು ಹೇಗೆ ಕರೆಯುವುದು? ಇಂಗ್ಲೆಂಡಿನಲ್ಲಿರುವ ಲೇಬರ್ ಪಕ್ಷ ಕೇವಲ 5 ಓಟುಗಳಿಲ್ಲದೆ ಬಿದ್ದುಹೋಯಿತು. ತಮಗೆ 40 ಜನಗಳಿದ್ದೇವೆಂಬ ಭರವಸೆ ತಮಗಿರಬಹುದು. ಆದರೆ ನಿಮ್ಮ ಪರಾಜಯಕ್ಕೆ 4 ಓಟುಗಳು ಕಡಿಮೆಯಾದರೂ ಸಾಕೇ ಸಾಕು. ಈ ಅಂಶವನ್ನು ತಿಳಿದುಕೊಳ್ಳಬಲ್ಲ ವಿದ್ವನ್ಮಣಿಗಳು ತಮ್ಮಲ್ಲಿದ್ದಾಗ್ಯೂ ಏಕೆ ಹಾಗೆ ಮಾತನಾಡಿದರೋ ಗೊತ್ತಾಗಲಿಲ್ಲ. ಅವರು ತಿಳಿದೂ ತಿಳಿದವರಾಗಿ ಹಾಗೆ ಮಾತನಾಡಿದ್ದಕ್ಕೆ ನಾನೇನು ಹೇಳಲಿ! ಪ್ರಜಾಸತ್ತಾತ್ಮಕದ ರೂಢಮೂಲಗಳನ್ನು ತಾವು ನಿಜವಾಗಿಯೂ ತಿಳಿದುಕೊಂಡಿದ್ದರೆ ಈ ಕೂಡಲೇ ತಾವೆಲ್ಲರೂ ರಾಜೀನಾಮೆಯನ್ನು ತಮ್ಮ ತಮ್ಮ ಸ್ಥಾನಗಳಿಗೆ ಕೊಟ್ಟು ಪರೀಕ್ಷೆಗಾಗಿ ಚುನಾವಣೆಗೆ ನಿಲ್ಲಿ ಅಥವಾ ಪರೀಕ್ಷಾರ್ಥವಾಗಿಯಾದರೂ ತಾವು ಒಂದು ಚುನಾವಣಾ ಕ್ಷೇತ್ರದಲ್ಲಾದರೂ ಹಾಗೆ ಮಾಡಿ ನೋಡೋಣ.

Sri T. SUBRAMANYA.—Is it a challenge to me I want to know? I want to know if Sri Hutche Gowda throws it out as a challenge to me. Let him resign to-day. (Laughter.)

Sri B. HUTCHE GOWDA.—Yes. I am ready to offer my resignation. (Laughter)

ಸುಮ್ಮನೆ ಮಾತು ಮಾತಿಗೂ ನೀವು ನಿಮ್ಮೆಲ್ಲರ ಸಹಕಾರನೀಡಬೇಕು ಎಂದು ಮಾತೆತ್ತಿದರೆ ಇದನ್ನು ಹಾಡುತ್ತಿದ್ದೀರಿ. ವಿಚಾರಗಳನ್ನು ನಮಗೆ ಸರಿಯಾಗಿ ಮನವರಿಕೆಯಾಗುವಂತೆ ತಿಳಿಸದೆ ಸುಮ್ಮನೆ ಸಹಕಾರ ನೀಡಿ ಎಂದು ಕೇಳಿದರೆ ಅದು ಹೇಗೆ ಸಾಧ್ಯವಾಗುತ್ತದೆ? ಬಹುಮತದ ಪಕ್ಷದವರೆಂದು ತಾವು ಪರೋಕ್ಷವಾಗಿ ಏನೇನೋ ಹೇಳುತ್ತಿದ್ದೀರಿ. ಆದರೆ ಹಾಗೆ ಮಾಡುವುದು ಸರಿಯಾದ್ದಲ್ಲ.

ನಂತರ ಡಿಪ್ರೆಸ್ಡ್ ಕ್ಲಾಸಿನವರ ವಿಚಾರವಾಗಿ ಏನೇನೋ ಸಹಾಯಗಳನ್ನು ಮಾಡಿರುವುದಾಗಿ ತಿಳಿಸಿದರು. ಲೇಬರ್ ಕ್ಲಾಸಿನವರ ನಷ್ಟಗಳಂತೂ ಹೇಳತೀರದಾಗಿದೆ. ಅಗ್ರಿಕಲ್ಚರಲ್ ಲೇಬರ್ಸ್ ವಿಚಾರದಲ್ಲೇನೋ ಇಂಡಿಯಾ ಸರ್ಕಾರದವರು ಈ ವಿಚಾರಗಳನ್ನು ಪರಿಶೀಲಿಸಲು ಒಬ್ಬ ಅಧಿಕಾರಿಗಳನ್ನು ಕಳುಹಿಸಿಕೊಟ್ಟಿದ್ದಾರೆ. ಇದರ ಬಗ್ಗೆ ಅವರು ಕೊಂಚ ಕಾರ್ಯಾಚರಣೆ ನಡೆಸಬಹುದು. ಆದರೆ ತಾವು ಮಾಡಿರುವುದು ಏನೇನೂ ಪ್ರಯೋಜನವಾಗಲಿಲ್ಲ,

ಇನ್ನು ಗ್ರಾಮಾಭಿವೃದ್ಧಿಯ ವಿಷಯವಾಗಿ ಹಿಂದೆಯೆ ಸರ್ ಎಂ. ವಿಶ್ವೇಶ್ವರಯ್ಯನವರು ಇದಕ್ಕೆ ಎಲ್ಲಾ ಏರ್ಪಾಡುಗಳನ್ನು ನಿಗದಿಮಾಡಿದ್ದರು. ಅದೀಗ ಕೊಂಚ ಕೊಂಚ ಜಾರಿಗೆ ಬರುತ್ತಿದೆ. ತಾವು ಯಾವ ಯೋಜನೆಯನ್ನೇ ಮಾಡಿ, ಅದಕ್ಕೆ originality ಬೇಡವೇ? ಕೇಂದ್ರ ಸರ್ಕಾರದವರು ಪಾನ ನಿರೋಧ ಕ್ರಮವನ್ನು ಜಾರಿಗೆ ತಂದು ಅದಕ್ಕನುಗುಣವಾಗಿ ಈಗಾಗಲೇ ಬೊಂಬಾಯಿ ಮತ್ತು ಮದರಾಸ್ ಸರ್ಕಾರಗಳು ಇದನ್ನು ಸಂಪೂರ್ಣವಾಗಿ ಕೈಗೊಂಡು ಅಲ್ಲೇ ಪೂರ್ಣ ಪಾನನಿರೋಧ ಈಗಾಗಲೇ ಜಾರಿಗೆ ಬಂದು ಹೋಗಿದೆ, ಅದೇ ರೀತಿ ಇಲ್ಲಿ ತಾವೂ ಸಹ ಹೇಳಿದಂತೆ ನಡೆದುಕೊಳ್ಳಬಾರದೇ?

ಇನ್ನು ಸೊಸೈಟಿಗಳ ವಿಚಾರವಾಗಿ ಬಹಳಪ್ರಸ್ತಾಪ ಮಾಡಿದ್ದಾರೆ. ಆದರೆ ಅವರು ತಿಳಿಸಿದಂತೆ ದುಡ್ಡನ್ನೇನೋ ಕೆಲವು ಕಡೆ ವಸೂಲುಮಾಡಿದ್ದಾರೆ ನಿಜ. ಆದರೆ ಹಾಗೆ ವಸೂಲು ಮಾಡಿರುವುದನ್ನು ಹೇಗೆ ಮಾಡಿದರು ಮತ್ತು ಯಾವ ರೀತಿಯಲ್ಲಿ ಮಾಡಿದರು ಎಂಬುದು ಮುಖ್ಯವಾದ ವಿಷಯ. ಏನೋ ಈಗ ಕಂಟ್ರೋಲು ಜಾರಿಯಲ್ಲಿರುವುದರಿಂದ ಅಲ್ಲಲ್ಲಿ ಈ ಕೆಲವು ಸೊಸೈಟಿಗಳು ನಡೆಯುತ್ತಿವೆ. ಲಾಭವೂ ಸಹ ಅಷ್ಟಿಷ್ಟು ಬರಬಹುದು. ಆದರೆ ವಸ್ತುಸ್ಥಿತಿ ಹೇಗಿದೆಯೆಂಬುದು ತಿಳಿಯಕೊಳ್ಳಬೇಕಾಗಿದ್ದರೆ, ಈ ಮಾನ್ಯ ಸಭೆಯ ಒಬ್ಬೊಬ್ಬ ಸದಸ್ಯರು ಪ್ರತ್ಯಕ್ಷವಾಗಿ ಹೋಗಿ ನೋಡಿದರೆ ಅದು ಗೊತ್ತಾಗುತ್ತದಯೇ ಹೊರತು ಸುಮ್ಮನೆ ಇಲ್ಲಿ ಭಾಷಣಮಾಡಿದರೆ ಅದು ಅರ್ಥವಾಗುವುದಿಲ್ಲ.

ಇನ್ನು ಕುಡಿಯುವ ನೀರಿನ ತೊಂದರೆಯಂತೂ ಹೇಳತೀರದಾಗಿದೆ. ಹೊಟ್ಟೆಗೆ ಆಹಾರವೇ ಸರಿಯಾಗಿ ಸಿಕ್ಕುತ್ತಿಲ್ಲ. ಆದ್ದರಿಂದ ಈ ಕುಡಿಯುವ ನೀರಿನ್ನೇತಕ್ಕೆ ಎಂಬುದಾಗಿ ಭಾವಿಸಿ ಇವರು ಇದನ್ನು ಸಹ ಕೈಬಿಟ್ಟಿರುವಂತೆ ಕಾಣುತ್ತದೆ! ಮೊದಲು ಕುಡಿಯುವ ನೀರಿನ ಭಾವಿಗಳನ್ನು ಒದಗಿಸಲು 5 ವರ್ಷದ ಒಂದು ಯೋಜನೆಯನ್ನು ಹಾಕಿಕೊಂಡಿದ್ದರು. ಈಗ ಮತ್ತೆ ಅದನ್ನು 3 ವರ್ಷಕ್ಕೆ ಹೆಚ್ಚಿಸಿಕೊಂಡು ಹೋಗಿದ್ದಾರೆ. ಇಲ್ಲಿಯವರೆಗೂ ತಾವು ಇದನ್ನು ಮಾಡದೆ ಕೈಬಿಟ್ಟಿರುವುದರಿಂದ ನೀರಿಗಾಗಿ ಹಳ್ಳಿಯ ಕಡೆಗಳಲ್ಲಿ 2–3 ಮೈಲಿ ಫಾಸಲೆ ಹೋಗಬೇಕಾಗಿರುತ್ತೆ.

ಇನ್ನು ದೊಡ್ಡ ದೊಡ್ಡ ಕೆರೆಗಳ ಮತ್ತು ಸಾಮಾನ್ಯ ಸಣ್ಣ ಕೆರೆಗಳ ದುರಸ್ತಿಕೆಲಸ, ಕೆರೆಕಾಮಗಾರಿ, ತೂಬು, ಕೋಡಿ ಇತ್ಯಾದಿಗಳ ದುರಸ್ತಿಯಂತೂ ಏನೇನೂ ನಡೆದಿಲ್ಲ. ಮೈನರ್ ಕೆರೆಗಳ ದುರಸ್ತಿ ವಿಚಾರದಲ್ಲಿ ಏನು ಮಾಡುತ್ತಾರೋ ಅಥವ ಎಂದಿಗೆ ಮಾಡುತ್ತಾರೋ ನನಗೆ ಗೊತ್ತಾಗುತ್ತಿಲ್ಲ.

ನೀವು ಎಷ್ಟು ಮೈನರ್ ಕೆರೆಗಳನ್ನು ದುರಸ್ತು ಮಾಡುವ ಏರ್ಪಾಡು ಮಾಡಿದ್ದೀರಿ? ಹಾಗೆಯೇ ಲಕ್ಕವಳ್ಳಿ ಪ್ರಾಜೆಕ್ಟ್ ವಿಚಾರ ಹೇಳಿದರು. ಇದು ಪೂರ್ತಿಯಾಗಲು ಇನ್ನೆಷ್ಟು ವರ್ಷಗಳಾಗುತ್ತವೋ ಗೊತ್ತಿಲ್ಲ. ಇದಕ್ಕಾಗಿ 21 ಕೋಟಿ ರೂಪಾಯಿಗಳು ಖರ್ಚಾಗುತ್ತವೆಂದು ಅಂದಾಜು ಮಾಡಿ ವರ್ಷೆ ವರ್ಷೆ 30 ಲಕ್ಷ ರೂಪಾಯಿಗಳನ್ನು ಒದಗಿಸುತ್ತಿದ್ದೀರಿ. ಅಂದರೆ ಇದು ಪೂರೈಸಲು 70 ವರ್ಷಗಳು ಬೇಕಾಗುತ್ತವೆ. ಆದ್ದರಿಂದ ಇಂಥವುಗಳಿಂದ ನಮ್ಮ ಈಗಿನ ಆಹಾರ ಸಮಸ್ಯೆ ಪರಿಹಾರವಾಗುವುದಿಲ್ಲ. ಇಂಥ ಮುಖ್ಯ ವಿಷಯಗಳಲ್ಲಿ ನಾವೂ ನೀವೂ ಸಹಕರಿಸಿ ನಡೆಯುವುದನ್ನು ಪ್ರಯತ್ನ ಮಾಡಬೇಕು. ಪಾನ ನಿರೋಧದ ವಿಚಾರ, ಪ್ರಾಥಮಿಕ ವಿದ್ಯಾಭ್ಯಾಸದ ವಿಚಾರ–ಇಂಥವುಗಳಲ್ಲಿ ನಮಗೂ ನಿಮಗೂ ಭಿನ್ನಾಭಿಪ್ರಾಯವಿಲ್ಲ. ಕೆರೆ ಕಟ್ಟೆಗಳನ್ನು ದುರಸ್ತಿ ಮಾಡಿಸುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಕುಡಿತಕ್ಕೆ ಬದಲಾಗಿ ಸೇಲ್ಸ್ ಟ್ಯಾಕ್ಸ್ ಹಾಕುವುದಕ್ಕೆ ನಾವೆಲ್ಲರೂ ಒಪ್ಪಲಿಲ್ಲವೇ? ಎಲ್ಲಿಯವರೆಗೆ ದೇಶದ ಪ್ರಜೆಗಳ ಮೇಲ್ಮೆಗಾಗಿ ತಾವು ಹಣವನ್ನು ಖರ್ಚು ಮಾಡುತ್ತೀರೋ ಅಲ್ಲಿಯವರೆಗೂ ಇಂಥಾ ತೆರಿಗೆಗಳನ್ನು ವಿಧಾಯಕ ಮಾಡುವುದನು ನಾವು ವಿರೋಧಿಸುವುದಿಲ್ಲ. ಆದ್ದರಿಂದ ತಮ್ಮ ಕಾರ್ಯ ಯಶಸ್ವಿಯಾಗಲು progressive policy ಅನುಸರಿಸಬೇಕಾದುದು ಮುಖ್ಯವಾದ್ದು. ಈಗ ನೋಡಿದರೆ, ಯಾವ ಟೀಕೆ ಟಿಪ್ಪಣಿ

ಗಳನ್ನು ಹಿಂದೆ ನಾವು ಮಾಡುತ್ತಿದ್ದೆವೋ ಈಗಲೂ ಅವನ್ನೇ ಮಾಡುತ್ತಿದ್ದೇವೆ ಎಂದರೆ ಅದು ಬಹಳ ವಿಷಾದಕರ.

ಇನ್ನೇನೂ ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ಒಂದು ವಿಚಾರವನ್ನು ಸರ್ಕಾರದವರು ಮನಸ್ಸಿನಲ್ಲಿಡಬೇಕು. ಯಾವ ತತ್ವಗಳ ಸಾಧನೆಗಾಗಿ ನಾವು ತನುಮನಧನಗಳನ್ನು ಕೊಟ್ಟೆವೋ, ಈಗ ಆ ತತ್ವಗಳನ್ನು ಕಾರ್ಯತಃ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಬೇಕು. ಅದು ಬಿಟ್ಟು ಬರೀ ಘೋಷಣೆಗಳನ್ನು ಮಾಡುವುದರಿಂದ ಪ್ರಯೋಜನವಿಲ್ಲ. ಇಂದು ಒಂದು ಯೋಜನೆಯನ್ನು ಸಾರುವುದು, ನಾಳೆ ಅಂಥಾದ್ದೇನೂ ಇಲ್ಲವೆಂದೇ ಹೇಳುವುದು ಬೇಡ. ಹಿಂದಿನ ದಿವಸ ಹಾಕಿಕೊಂಡ ಕಾರ್ಯನೀತಿಯನ್ನು ಮಾರುದಿನ ತೆಗೆಯುವುದು ಬೇಡ. ಹೆಚ್ಚು ಆಹಾರ ಬೆಳೆಯುವ ವಿಚಾರದಲ್ಲಿ ಒಂದು ಕಾರ್ಯನೀತಿಯನ್ನು ಹಾಕಿಕೊಂಡು ಮೂರುವರ್ಷವಾಯಿತು. ಇನ್ನೂ ಅದರಿಂದ ನಮಗೆ ಹೆಚ್ಚಿನ ಫಲ ದೊರಕಿಲ್ಲ. ಆದ್ದರಿಂದ ಇಂಥ ಮುಖ್ಯವಾದ ವಿಷಯಗಳಲ್ಲಿ ಎಲ್ಲರ ಸಹಕಾರ ತೆಗೆದುಕೊಂಡು ಮುಂದುವರಿಯಬೇಕು. ಇಂಥ ವಿಷಯಗಳಲ್ಲಿ ಯಾರೂ ಸಹಕಾರ ನೀಡುತ್ತಿಲ್ಲವೆಂದರೇನರ್ಥ!! ಜನರೇಕೆ ಸಹಕಾರ ನೀಡುವುದಿಲ್ಲ!! ಎಲ್ಲಿಯವರೆಗೆ ನೀವು ಮಾಡುತ್ತಿರುವುದು ಅವರುಗಳ ಕ್ಷೇಮಕ್ಕಾಗಿಯೇ ಎಂಬ ನಂಬಿಕೆಯಿರುತ್ತದೋ ಅಲ್ಲಿಯವರೆಗೂ ಖಂಡಿತ ತಮಗೆ ಅವರ ಸಹಕಾರ ಇದ್ದೇ ಇದೆ. ನೀವು ಹೊರಗಡೆ ಮಾಡುವ ನಿರ್ಣಯಗಳಂತೆ ನಡೆದುಕೊಂಡರೆ ಅವರೇಕೆ ತಮ್ಮನ್ನು ನಂಬುವುದಿಲ್ಲ!! ಸುಮ್ಮನೆ ನಿಷ್ಠುರ ಮಾಡಿ ಒಬ್ಬರಮೇಲೊಬ್ಬರ ಮೇಲೆ ದೂರು ಹಾಕುವುದರಿಂದ ಹೇಶಕ್ಕೆ ಅಭ್ಯುದಯವಿಲ್ಲ. ಆದ್ದರಿಂದ ತಾವು ಒಂದು ಸರಿಯಾದ ಕಾರ್ಯನೀತಿಯನ್ನು ಹಾಕಿಕೊಂಡು ಕಡ್ಡಾಯವಾಗಿ ಅದರಂತೆ ನಡೆಯಬೇಕೆಂದು ಹೇಳುತ್ತೇನೆ.

**Sri T. SUBRAMANYA.**—Sir, I wish to offer a personal explanation. ಇಬ್ಬರು ಮಾನ್ಯ ಸದಸ್ಯರು ನಾನೊಂದು ಬೆದರಿಕೆಯನ್ನು ಹಾಕಿದ್ದೇನೆಂದು ಹೇಳಿದರು. ನಾನು ಮಾಡಿದ ಭಾಷಣವನ್ನು ಅವರು ಗಮನದಲ್ಲಿಟ್ಟಿದ್ದರೆ ಅವರು ಖಂಡಿತ ಹಾಗೆ ಹೇಳುತ್ತಿರಲಿಲ್ಲ. ಅವರ ಮನಸ್ಸಿನಲ್ಲಿರುವ ತಪ್ಪು ಅಭಿಪ್ರಾಯವನ್ನು ಸರಿಪಡಿಸುವುದಕ್ಕಾಗಿ ನಾನು ಮಾಡಿದ ಭಾಷಣದ ಕೊನೆ 3-4 ವಾಕ್ಯಗಳನ್ನು ಓದುತ್ತೇನೆ.

..............."I do not think any authorisation is necessary for the Hon'ble Speaker to send it on to His Highness the Maharaja. It is provided under the rules. In fact there is no controversial matter in this speech. I do not expect any amendments to be brought in. Even if any amendments are brought in, I hope they will be withdrawn. If not, I think, they may be thrown out.

Mushir-ul-mulk J. MAHOMED IMAM.—That is presuming too much.

Sri T. SUBRAMANYA,—I am certain that if any amendment is brought in, it will be thrown out after it is answered by me."

It is not because of numbers but because of the explanation I will give. It was not a threat and I am sorry that some Hon'ble Members have interpreted it as a threat.

ಶ್ರೀ ಎಚ್. ಎಂ. ಚನ್ನಬಸಪ್ಪನವರು. (ಮೈಸೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಶ್ರೀಮನ್ಮಹಾರಾಜರವರು ಹೊಸರಾಜ್ಯಾಂಗದ 175ನೆಯ ಕಲಮಿನ ಪ್ರಕಾರ ಸರ್ಕಾರದವರು ಕರೆದಿರುವ ಈ ಅಧಿವೇಶನದ ಉದ್ದೇಶವನ್ನು ತಿಳಿಸುತ್ತಾ ಸರ್ಕಾರದ ನೀತಿಯನ್ನು ಸೂಕ್ಷ್ಮವಾಗಿ ತಿಳಿಸಿದ್ದಾರೆ. ಅವರ ಭಾಷಣದಲ್ಲಿ ಉಲ್ಲೇಖಿಸಲ್ಪಟ್ಟಿರುವ ಸರ್ಕಾರದ ನೀತಿಗಳನ್ನು ಸೂಕ್ಷ್ಮವಾಗಿ ಪ್ರಸ್ತಾಪಿಸಿ ಅವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸಬೇಕೆಂದು ಶ್ರೀಮಾನ್ ಸುಬ್ರಹ್ಮಣ್ಯರವರು ಒಂದು ಅಭಿನಂದನಾ ನಿರ್ಣಯವನ್ನು ಸಭೆಯ ಮುಂದಿಟ್ಟಿದ್ದಾರೆ. ಈ ಅಭಿನಂದನಾ ಸೂಚನೆಯು ಸರ್ಕಾರದ ಪ್ರಗತಿಕಾರಕ ನೀತಿಗಳಿಗೋಸ್ಕರವೆಂದರೆ ಅದು ತಪ್ಪಲ್ಲ. ಸಾಮಾನ್ಯವಾಗಿ ಸರ್ಕಾರದ ನೀತಿಯ ವಿಷಯವಾಗಿ ಜನಗಳ ಅಭಿಪ್ರಾಯವೇನಿದೆಯೆಂಬುದನ್ನು ವ್ಯಕ್ತಪಡಿಸುವುದರ ಮೂಲಕ ಸರ್ಕಾರದ ವಿಷಯದಲ್ಲಿ ವಿಶ್ವಾಸ ಅಥವಾ ಅವಿಶ್ವಾಸವನ್ನು ವ್ಯಕ್ತಪಡಿಸುವುದು ಒಂದು ಸಂಪ್ರದಾಯ. ಸರ್ಕಾರದವರು ಯಾವ ಕಾರ್ಯನೀತಿಯನ್ನು ಹಾಕಿಕೊಂಡಿದ್ದಾರೋ ಆ ನೀತಿ ಸರಿಯಾಗಿದೆಯೇ ಇಲ್ಲವೇ ಎಂಬ ವಿಚಾರದಲ್ಲಿ ನಿರ್ದಿಷ್ಟವಾದ ಅಭಿಪ್ರಾಯವನ್ನು ಈ ಸಭೆಯು ವ್ಯಕ್ತಪಡಿಸುವುದು ಈ ಚರ್ಚೆಯ ಉದ್ದೇಶ. ವಿರೋಧಪಕ್ಷದವರು ಈ ಸಂದರ್ಭವನ್ನು ಉಪಯೋಗಿಸಿಕೊಂಡು ಜನಜೀವನವನ್ನು ಉತ್ತಮಪಡಿಸಲು ಅವಶ್ಯಕವಾದ ನೀತಿಗಳನ್ನೇನಾದರೂ ಕೈಬಿಟ್ಟಿದ್ದರೆ ಅದನ್ನು ಪ್ರತಿಪಾದಿಸಿ ಸರ್ಕಾರದ ಕಾರ್ಯನೀತಿಯಲ್ಲಿ ತಮಗೆ ವಿಶ್ವಾಸವಿಲ್ಲವೆಂದು ಹೇಳುವುದು ಸಂಪ್ರದಾಯ. ಇದುವರೆಗೆ ಮಾಡಿದ ಭಾಷಣಗಳನ್ನು ನೋಡಿದರೆ ಬಡ್ಜೆಟ್ ಭಾಷಣಗಳಂತೆ ತೋರುತ್ತಿದೆ. ಶ್ರೀಮನ್ಮಹಾರಾಜರವರು ಇಲ್ಲಿ ಪ್ರಸ್ತಾಪಿಸಿರುವ ಕಾರ್ಯನೀತಿಗಳನ್ನು ಅನುಷ್ಠಾನಕ್ಕೆ ತರತಕ್ಕ ಕಾಲದಲ್ಲಿ, ಕಾರ್ಯಕ್ರಮದ ವಿವರಗಳಲ್ಲಿ ಲೋಪದೋಷಗಳಿದ್ದರೆ ಅವುಗಳನ್ನು ಬಡ್ಜೆಟ್ ಭಾಷಣದಲ್ಲಿ ಟೀಕೆ ಮಾಡಿತೋರಿಸಿ ರಚನಾತ್ಮಕ ಸಲಹೆಗಳನ್ನು ಮಾಡುವುದು ಸರಿಯೇ ಹೊರತು ಈ ಸಂದರ್ಭದಲ್ಲಿ ಹೇಳುವುದು ಸರಿಯಲ್ಲ. ಈಗ ಮಾನ್ಯಸದಸ್ಯರು ಹೇಳಿರುವುದರಲ್ಲಿ ಸರ್ಕಾರದ ನೀತಿಗಳಲ್ಲಿ ಏನು ಲೋಪದೋಷಗಳಿವೆಯೆಂಬುದನ್ನು ಯಾರೂ ಹೇಳಲಿಲ್ಲ. ಮಹಾರಾಜರ ಭಾಷಣದಲ್ಲಿ ಸೂಚಿತವಾಗಿರುವ ನೀತಿಗಳಲ್ಲಿ ಯಾವುದು ತಾನೆ ಸರಿಯಾಗಿಲ್ಲ? ಆರ್ಥಿಕ, ಕಾರ್ಮಿಕ, ವ್ಯವಸಾಯ, ಕೈಗಾರಿಕಾನೀತಿಗಳೇ ಮೊದಲಾದ ಯಾವ ನೀತಿಯನ್ನು ತೆಗೆದುಕೊಂಡರೂ ಅದು ಸರಿಯಾಗಿಲ್ಲವೆಂದು ಹೇಳುವಂತಿಲ್ಲ. ಯಾವುದಾದರೂ ಪ್ರಸ್ತಾಪನೆಯನ್ನು ಕೈಬಿಟ್ಟಿದ್ದರೆ ಅದನ್ನು ಯಾರೂ ಸೂಚಿಸಿಲ್ಲ. ಇವೆರಡೂ ಬಿಟ್ಟು ಜನಜೀವನವನ್ನು ಉತ್ತಮ ಮಾಡುವ ಯಾವ ಯೋಜನೆಯನ್ನೂ ಮತ್ತು ಕಾರ್ಯಕ್ರಮವನ್ನೂ ಕೈಗೊಂಡಿಲ್ಲವೆಂದು ಹೇಳುವುದು ಸರಿಯಲ್ಲ. ಸರ್ಕಾರದ ಯೋಜನೆಗಳೆಲ್ಲವನ್ನೂ ಶ್ರೀಮನ್ಮಹಾರಾಜರವರ ಭಾಷಣದಲ್ಲಿ ಅಡಕಮಾಡುವುದಕ್ಕೆ ಸಾಧ್ಯವಿಲ್ಲ. ಬಡ್ಜೆಟ್ ಭಾಷಣದಲ್ಲಿ ಕಾರ್ಯನೀತಿಯನ್ನು ಟೀಕೆಮಾಡುವುದಕ್ಕೆ ಬೇಕಾದಷ್ಟು ಅವಕಾಶವಿದೆ. ಆಗ್ಗೆ ಸಲಹೆಗಳನ್ನು ಕೂಡ ಕೊಡಬಹುದು. ಈಗ ಸೂಚಿತವಾಗಿರುವ ತಿದ್ದುಪಡಿಗಳಲ್ಲಿ ತಿರುಳೂ ಸಹ ಕಂಡುಬರುವುದಿಲ್ಲ. ಆ ತಿದ್ದುಪಡಿಗಳು ಕ್ರಮಬದ್ಧವೂ ಸಹ ಆಗಿಲ್ಲವೆಂದೇ ಹೇಳಬಹುದು. ಏಕೆಂದರೆ........................................

ಅಧ್ಯಕ್ಷರು.—ಕ್ರಮಬದ್ಧವಾಗಿಲ್ಲವೆಂದು ತಾವು ಹೇಳುವುದಕ್ಕೆ ಅವಕಾಶವಿಲ್ಲ. Hon'ble Member cannot raise that point now.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ನಾನು ಕ್ರಮಬದ್ಧವಾಗಿಲ್ಲವೆಂದೂ ಹೇಳಿದ್ದೇನೆ. ಅದು ಸರಿಯೇ ಇಲ್ಲವೇ ಎಂದು ಹೇಳುವುದನ್ನು ತಮಗೇ ಬಿಟ್ಟಿದ್ದೇನೆ.

ಭಾಷಣಮಾಡುವಾಗ ಶ್ರೀಮಾನ್ ಗುಂಡಪ್ಪಗೌಡರು ಕೆಲವು ಮಾತುಗಳನ್ನು ಹೇಳಿದರು. ಅವುಗಳಲ್ಲಿ ಸ್ವಲ್ಪ ಮಟ್ಟಿನ ಸತ್ಯಾಂಶವಿದೆ, ಅವು ನ್ಯಾಯವಾಗಿಯೂ ಕಾಣುತ್ತವೆ. ಪಾನನಿರೋಧದ ವಿಚಾರದಲ್ಲಿ ನಾವು ಅನುಸರಿಸುತ್ತಿರತಕ್ಕ ನೀತಿ ಸರಿಯಾಗಿಲ್ಲವೆಂದು ನಾನೂ ಸಹ ಅಭಿಪ್ರಾಯಪಡುತ್ತೇನೆ. ಅವರು ಪಾನನಿರೋಧ ನೀತಿ ಸರಿಯಲ್ಲವೆಂದು ಹೇಳಲಿಲ್ಲ, ಅದನ್ನು ಕಾರ್ಯರೂಪಕ್ಕೆ ತರುತ್ತಿರುವ ಕ್ರಮ ಸರಿಯಲ್ಲವೆಂದು ಹೇಳಿದರು, ಅಷ್ಟೆ.

ಗ್ರಾಮಾಭಿವೃದ್ಧಿಯ ನೀತಿಯು ಸರಿಯಾಗಿಲ್ಲವೆಂದು ಮಿತ್ರರೊಬ್ಬರು ಹೇಳಿದರು. ಎಡರುಗಳಿಗೆ ಪರಿಹಾರ ಮಾರ್ಗವನ್ನು ಹುಡುಕಿ ಕೆಲಸವನ್ನು ಮಾಡುವುದು ಕೆಲಸಗಾರರ ಲಕ್ಷಣವೇ ಹೊರತು ಯಾವುದಾದರೂ ಕಾರ್ಯಕ್ರಮವನ್ನು ಕೈಗೊಂಡು ಪ್ರತಿಬಂಧಕ ಯಾವುದು ಬಂದರೂ ನೋಡದೆ ಮುಂದುವರಿಯುವುದು ಕಾರ್ಯಕರ್ತರ ನೀತಿಯಲ್ಲವೆಂದು ಶ್ರೀ ಗುಂಡಪ್ಪಗೌಡರಿಗೆ ಉತ್ತರವಾಗಿ ಹೇಳಬೇಕಾಗಿದೆ.

ಮತ್ತೊಂದು ವಿಷಯವನ್ನು ನಮ್ಮ ಮಿತ್ರರು ಪ್ರಸ್ತಾಪಿಸಿದರು. ರಕ್ಷಣೆಯ ಸಂಬಂಧದಲ್ಲಿ ಸರಿಯಾದ ನೀತಿಯನ್ನು ಅನುಸರಿಸುತ್ತಿಲ್ಲವೆಂದು ಅವರು ತಿಳಿಸಿದರು. ಅದರಲ್ಲಿ ಸ್ವಲ್ಪ ಮಟ್ಟಿಗೆ ಸತ್ಯಾಂಶವಿದೆಯೆಂದು ನನಗೂ ಅನ್ನಿಸುತ್ತದೆ. ಇಂದಿನ ಪರಿಸ್ಥಿತಿಗೆ ಹೊಂದಿಕೆಯಾಗುವಂತೆ ರಕ್ಷಣಾ ನೀತಿಯಿರಬೇಕು. ಈ ಜವಾಬ್ದಾರಿ ಇಂಡಿಯಾ ಸರ್ಕಾರದವರ ಕೈಲಿದೆ. ಆದರೂ ಅವರಿಗೆ ಸಲಹೆ ಮಾಡುವ ಅಧಿಕಾರ ನಮಗಿದೆ. ಹಾಗೆ ಮಾಡುವಾಗ ನಮ್ಮ ಅಭಿಪ್ರಾಯವನ್ನು ನಿರ್ದಾಕ್ಷಿಣ್ಯವಾಗಿ ತಿಳಿಸಬೇಕೆಂದು ಹೇಳಿದರು. ವಾಸ್ತವವಾಗಿಯೂ ನಾವು ಈಗ ಹೋಗುತ್ತಿರುವ ರೀತಿಯಲ್ಲಿಯೇ ಮುಂದುವರಿದರೆ ಕಷ್ಟನಷ್ಟಗಳಾಗುತ್ತವೆ. ಆದ್ದರಿಂದ ಇಂದಿನ ನೀತಿಯನ್ನು ಬದಲಾಯಿಸಬೇಕೆಂದು ಸಲಹೆ ಮಾಡಿರುವುದಕ್ಕಾಗಿ ನಮ್ಮ ಮಿತ್ರರಿಗೆ ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ.

ಮೊದಲೇ ಹೇಳಿದಂತೆ ಶ್ರೀಮನ್ಮಹಾರಾಜರು ಸರ್ಕಾರದ ಕೆಲವು ನೀತಿಗಳನ್ನು ಸೂಕ್ಷ್ಮವಾಗಿ ಪರಿಚಯ ಮಾಡಿಕೊಟ್ಟಿದ್ದಾರೆ. ಆಹಾರ ನೀತಿಯು ಸರಿಯಾಗಿಲ್ಲವೆಂದು ಅನೇಕರು ಉಗ್ರಟೀಕೆ ಮಾಡಿದರು. ಮೈಸೂರು ಸಂಸ್ಥಾನದಲ್ಲಿ ಹೆಚ್ಚು ಆಹಾರ ದವಸವನ್ನು ಬೆಳೆದು ಬಹಳ ಬೇಗ ಸ್ವಪರಿಪೂರ್ಣತೆ ಸಾಧಿಸುವುದಕ್ಕೆ ಸರ್ಕಾರದವರು ತಕ್ಕ ಪ್ರಯತ್ನಮಾಡುವರೆಂಬ ಭರವಸೆಯನ್ನು ಮಹಾರಾಜರು ತಮ್ಮ ಭಾಷಣದಲ್ಲಿ ಕೊಟ್ಟಿದ್ದಾರೆ. ಇದುವರೆಗೆ ಟೀಕೆ ಮಾಡಿದವರು ಲೋಪದೋಷಗಳನ್ನು ಎತ್ತಿತೋರಿಸಿದರೇ ಹೊರತು ಆಹಾರ ಉತ್ಪನ್ನ ಮಾಡುವ ನೀತಿಯಲ್ಲಿ ಏನು ಬದಲಾವಣೆ ಬೇಕೆಂಬುದನ್ನು ಯಾರೂ ಸಲಹೆ ಮಾಡಲಿಲ್ಲ. ಆಹಾರವನ್ನು ಹೆಚ್ಚಾಗಿ ಬೆಳೆಯಲು ನಾವೇನು ಮಾಡಬೇಕೆಂಬುದನ್ನು ರಚನಾತ್ಮಕವಾಗಿ ಯಾರೂ ತಿಳಿಸಲಿಲ್ಲ. ಸರ್ಕಾರದ ನೀತಿ ಸರಿಯಲ್ಲವೆಂದು ಕೂಡ ಯಾರೂ ಹೇಳಲಿಲ್ಲ.

ಕೈಗಾರಿಕೆಗಳನ್ನು ನಮ್ಮ ದೇಶದಲ್ಲಿ ವೃದ್ಧಿಪಡಿಸಿ, ಅವಶ್ಯಕವಾದ ಸಾಮಾನುಗಳನ್ನು ಆದಷ್ಟು ಬೇಗ ಒದಗಿಕೊಳ್ಳುವುದಕ್ಕೆ ತಕ್ಕ ಏರ್ಪಾಡು ಮಾಡಬೇಕು ಎಂದು ಕೆಲವರು ಹೇಳಿದರು. ಈ ನೀತಿಯನ್ನು ಸಾಧಿಸಿ, ಜನಜೀವನದ ಮಟ್ಟವನ್ನು ಉತ್ತಮಪಡಿಸಬೇಕಾದರೆ ಅದು ನಾಲ್ಕಾರು ತಿಂಗಳುಗಳಲ್ಲಿ ಸಾಧ್ಯವಾಗುವುದಿಲ್ಲ. ಕಾಲಾನುಗುಣವಾಗಿ ಅಭಿವೃದ್ಧಿಯಾಗಬೇಕೇ ಹೊರತು ಕಾರ್ಯಕ್ರಮ ಕೈಗೊಂಡ ಮಾರನೆಯ ದಿವಸವೇ ಸಂಪೂರ್ಣ ಪ್ರತಿಫಲ ನಿರೀಕ್ಷಿಸುವುದು ಸರಿಯಲ್ಲ. ಜನಾಬ್ ಸೈಯದ್ ಅಬ್ದುರ್ ರಹಮಾನರವರು ಆಹಾರದ ಉತ್ಪತ್ತಿಗೆ ತಮ್ಮ ಸಂಪೂರ್ಣ ಸಹಕಾರ ನೀಡುವುದಾಗಿ ಹೇಳಿದರು, ಅವರು ಹಳ್ಳಿಗಳಿಗೆ ಒಂದು ದಿನವಾದರೂ ಹೋಗಿ ಆಹಾರದ ಕೊರತೆ ಹೇಗಿದೆಯೆಂದು ವಿಚಾರಿಸಿದ್ದಾರೆಯೆ? ಹಳ್ಳಿಗಳಲ್ಲಿ ಜಮೀನು ತೆಗೆದುಕೊಂಡು ವ್ಯವಸಾಯ ಮಾಡಿ ತೊಂದರೆಯನ್ನು ನಿವಾರಣೆ ಮಾಡಬೇಕೆಂದು ಮನಸ್ಸು ಮಾಡಿದ್ದಾರೆಯೆ? ಈಗಲೂ ಅವರು ಬೆಂಗಳೂರು ಬಿಟ್ಟು ಹೋಗಲು ಇಷ್ಟಪಡುವರೇ? ಶ್ರೀ ಗುಂಡಪ್ಪಗೌಡರಿಗೂ ಸಹ ಹಾಗೆ ಮಾಡಲು ಬೇಕಾದಷ್ಟು ಅವಕಾಶವಿದೆ. ಅವರೂ ಸಹ ಹಳ್ಳಿಯಕಡೆ ಹೋಗಲಿಲ್ಲ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಬಂದು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ನೀವುಗಳು ಹಳ್ಳಿಗಳಿಗೆ ಹೋಗಿ ಭೂಮಿಯನ್ನು ಉಳುಮೆ ಮಾಡಿಸಿ, ಬೀಜ ಬಿತ್ತಿಸಿ ಹೆಚ್ಚಾಗಿ ಬೆಳೆದುಕೊಟ್ಟರೆ ಆಗ ತಮ್ಮ ಸಹಕಾರವೂ ಸಹ ಇದೆ ಎಂದು ಹೇಳಬಹುದು. ಅದು ಬಿಟ್ಟು ಬೆಂಗಳೂರಿನಲ್ಲೇ ಕುಳಿತು ಆಹಾರಾಭಾವ ಜಾಸ್ತಿಯಾಗಿದೆ ಅದರ ಪರಿಹಾರಕ್ಕೆ ನಮ್ಮ ಬೆಂಬಲವಿದೆ ಎಂದು ಹೇಳಿದರೆ ಅದು ಹೇಗೆ ಪರಿಹಾರವಾದೀತು?

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಾಗಿ ತಾವು ಈಗ ಎಲ್ಲಿ ವಾಸವಾಗಿದ್ದೀರಿ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಅಧ್ಯಕ್ಷನಾಗಿರುವವರೆಗೆ ಮೈಸೂರು, ನಂತರ ನನ್ನ ವಾಸಸ್ಥಾನಕ್ಕೆ ಹೋಗುತ್ತೇನೆ. ಮಹಾರಾಜರು ಹೇಳಿರುವ ನೀತಿಗಳಲ್ಲಿ ಯಾವುದಾದರೂ ಸರಿಯಾಗಿಲ್ಲವೆಂದು ನ್ಯಾಯವಾಗಿ ಪ್ರತಿಪಾದಿಸಿದ್ದರೆ ಒಪ್ಪಿಕೊಳ್ಳಬಹುದು. ಆ ರೀತಿ ಯಾರೂ ಮಾಡಿರುವುದಿಲ್ಲ. ತಿದ್ದುಪಡಿ ಕಳುಹಿಸಿರುವರೂ ಸಹ ವಿವರಗಳನ್ನು ಟೀಕೆ ಮಾಡಿದ್ದರೇ ಹೊರತು ನೀತಿಗಳನ್ನು ಖಂಡಿಸಿಲ್ಲ. ಜನಾಬ್ ಸೈಯದ್ ಅಬ್ದುರ್ ರಹಮಾನ್‌ರವರು ಟೀಕಿಸಲು ಹೊರಟು ಅಭಿನಂದನಾ ಭಾಷಣ ಮಾಡಿರುವುದನ್ನು ನೋಡಿದರೆ ಇವರು ಏಕೆ ತಿದ್ದುಪಡಿ ಕಳುಹಿಸಿದರೆಂಬುದು ನನಗೆ ಅರ್ಥವಾಗುವುದಿಲ್ಲ. ಒಟ್ಟಿನಲ್ಲಿ ಮಹಾರಾಜರು ಹೇಳಿರುವ ನೀತಿಗಳೆಲ್ಲವೂ ಜನಜೀವನ ಮಟ್ಟವನ್ನು ಉತ್ತಮಪಡಿಸುವುದಕ್ಕೆ ಸಹಕಾರಿಯಾಗಿವೆ. ಶ್ರೀ ಗುಂಡಪ್ಪಗೌಡರು ಹೇಳಿರುವ ಒಂದೆರಡು ಅಭಿಪ್ರಾಯಗಳು ವಾಸ್ತವವಾಗಿ ಸಹಕಾರ ಮನೋಭಾವನೆಯಿಂದ ಕೂಡಿವೆ. ರಚನಾತ್ಮಕವಾದವು ಸಹ ಆಗಿವೆ. ಅಂಥಹ ಟೀಕೆಗಳನ್ನು ಸ್ವಾಗತಿಸಬೇಕು. ಎಲ್ಲ ವಿಷಯಗಳನ್ನೂ ರಾಜಪ್ರಮುಖರು ಭಾಷಣದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಿಲ್ಲವೆಂಬುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಅವರ ಭಾಷಣದಲ್ಲಿರುವ ಎಲ್ಲಾ ನೀತಿಗಳೂ ಸಹ ಜನಜೀವನ ಮಟ್ಟವನ್ನು ಏರಿಸುವುದಕ್ಕೆ ಸಾಧಕವಾಗಿರುವುದರಿಂದ ಶ್ರೀಮನ್ಮಹಾರಾಜರಿಗೆ ಅಭಿನಂದನೆಗಳನ್ನು ಏಕಾಭಿಪ್ರಾಯದಿಂದ ಕಳುಹಿಸಬೇಕೆಂದು ಸದಸ್ಯರಲ್ಲಿ ಪ್ರಾರ್ಥನೆ ಮಾಡಿ ಶ್ರೀ ಟಿ. ಸುಬ್ರಹ್ಮಣ್ಯರವರು ತಂದಿರುವ ನಿರ್ಣಯವನ್ನು ಸಮರ್ಥನೆ ಮಾಡುತ್ತೇನೆ.

Sri K. CHENGALARAYA REDDY.—Mr. Speaker, I have just risen to know from you, about the duration of this

sitting and the procedure to be followed before the debate closes and the resolution is put to the vote of the House. Naturally the mover of the resolution has to reply at the end, and on the Government side one or two or three of us, or at least one of us will have to speak. I would therefore request the Chair to decide as to the time table, if I may say so, for the further debate on this resolution. The mover of the resolution may require about 10 minutes and we, on the Government side, will require about 20 minutes.

Mr. SPEAKER.—I have called the Hon'ble Member ........

Sri K. CHENGALARAYA REDDY.—Of course the Chair has every right to call upon any Hon'ble Member to speak. I am not coming in the way of that position at all. I am just indicating that between the Ministers and the mover of the resolution, about half an hour will be required. It is now 4-30 p.m. So I submit to the Hon'ble Chair to consider this aspect and call upon such of the Members whom the Chair wants to give an opportunity to speak.

Janab J. MAHOMED IMAM.—I am suggesting one point in this connection for the consideration of the Hon'ble Speaker. A large number of Members seem to be anxious to take part in the debate on this resolution. I want to know, if it is acceptable to the Assembly, whether one more day may not be necessary for this deaate. On the 21st, I think the Hon'ble Finance Member will present the Budget. There is no indication now as to what our work will be subsequently. According to rules, unless the budget is presented, we cannot have Budget discussion. So I suggest.........

Sri T. MARIAPPA.—On the very day of presentation of Budget there cannot be discussion on the Budget.

Janab J. MAHOMED IMAM.—I do not know what the convention is. On the 21st, the Budget will be presented. If it is not possible to have further debate on the 21st, we may sit till 6 p.m. to-day to finish the debate.

Sri K. CHENGALARAYA REDDY.—No. We have other engagements. The utmost that we can go to is till 5-30, Mr. Speaker, because we have fixed certain important engagements. We can sit till 5-30.

Sri L. SIDDAPPA.—I would like to know whether it is obligatory that this debate should be concluded to-day.

Mr. SPEAKER.—Yes, I think it would be better to conclude this debate to-day. There will be half an hour for the members to speak and then the Ministers will have half an hour.

Janab MOHAMED HANIEF (Bangalore—Muslim).—At the very commencement a point was raised whether there would be any limit time for speakers. Now some members have to forego that privilege.

Mr. SPEAKER.—The Chair cannot help it.

Janab MOHAMED HANIEF.—If we had been told at the very outset that the debate would be concluded to-day, we would have suggested then alone that there should be a time limit for speakers,

Mr. SPEAKER.—It was clear that the debate would be closed to-day at Five of the Clock.

In the Agenda itself it is mentioned that it will be closed to-day.

Janab MOHAMED HANIEF.—But we are accustomed to extensions in other cases.

Mr. SPEAKER.—I do not think there is any necessity to extend.

Janab MOHAMED HANIEF.—I am not going to speak, and so I am not troubled. What I say is if there are Members who are anxious to speak they must be given opportunities. I am not anxious to speak.

Sri H. C. DASAPPA.—There will be ample opportunities.

ಶ್ರೀ ಎಲ್. ಸಿದ್ದಪ್ಪನವರು.—ಅಧ್ಯಕ್ಷರೆ ಸ್ವಾಮಿ, ಶ್ರೀಮನ್ಮಹಾರಾಜರವರು ಈ ಸಭೆಗೆ ಅಪ್ಪಣೆ ಕೊಡಿಸಿರತಕ್ಕ ಭಾಷಣಕ್ಕಾಗಿ ಅವರಿಗೆ ನಮ್ಮ ವಂದನೆಗಳನ್ನು ಸಮರ್ಪಿಸುತ್ತಾ ಜನ ಸಾಮಾನ್ಯರ ಆರ್ಥಿಕ, ನೈತಿಕ ಮತ್ತು ಸಾಮಾಜಿಕ ಮಟ್ಟದ ಅಭಿವೃದ್ಧಿಯ ಬಗ್ಗೆ ಅವರು ಅಪ್ಪಣೆ ಕೊಡಿಸಿರತಕ್ಕ ಭಾಷಣದಲ್ಲಿರುವಂತೆ, ಸರ್ಕಾರದವರು ಏನು ಕಾರ್ಯಕ್ರಮಗಳನ್ನು ತೆಗೆದುಕೊಂಡಿರುತ್ತಾರೆಂಬ ಅಂಶವನ್ನು ಪರಿಶೀಲನೆ ಮಾಡಿ ನೋಡಿದರೆ, ಹೊಸದಾಗಿ ಯಾವ ಕಾರ್ಯಕ್ರಮಗಳನ್ನು ಕೈಗೊಂಡಿರುವುದೂ ಕಂಡುಬರುವುದಿಲ್ಲ. ಅವರ ಭಾಷಣದಲ್ಲಿ ಕೆಲವು ವಿಷಯಗಳಿವೆ, ಅವುಗಳಲ್ಲಿ ಸರ್ಕಾರದವರನ್ನು ಪ್ರಶಂಸೆಮಾಡತಕ್ಕ ಕೆಲವು ಅಂಶಗಳೂ ಇರಬಹುದು

ಆದರೂ ಇವು ತಪಶೀಲು ಅಂಶಗಳು ಅಥವಾ ಸಣ್ಣ ಸಣ್ಣ ವಿಷಯಗಳೇ ಹೊರತು ಹೊಸದಾಗಿ ಏನಾದರೂ ನೀತಿಯನ್ನು ಹಾಕಿಕೊಂಡು ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದಾರೆಯೆ ಎಂದು ನೋಡಿದರೆ. ಅಂಥಾದ್ದಾವುವೂ ಕಂಡುಬರುವುದಿಲ್ಲ. ಹಿಂದೆ ಮಾತನಾಡಿದ ಕೆಲವು ಮಾನ್ಯಸದಸ್ಯರು ಅಪ್ಪಣೆ ಕೊಡಿಸಿದ ಹಾಗೆ ಸರ್ಕಾರದವರು ಕೆಲವು ವಿಷಯಗಳಲ್ಲಿ ಸಾಧಿಸಿರುವ ಪ್ರಗತಿಗಾಗಿ ಸಾಮಾನ್ಯವಾಗಿ ನಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸುವುದಾಗಲಿ ಮತ್ತು ಅವರು ಸಾಧಿಸದೇಯಿರುವ ಕೆಲವು ಲೋಪ ದೋಷಗಳ ಬಗ್ಗೆ ನಮ್ಮ ತೀವ್ರ ವಿರೋಧವನ್ನು ಸೂಚಿಸುವದಕ್ಕಾಗಲಿ ಈಗ ಹೋಗುವುದಿಲ್ಲ. ಅದನ್ನು ಹೇಳಲು ಬೇರೆ ಅವಕಾಶವಿದೆ. ಆದಕಾರಣ ಈಗ ದೊರೆತಿರುವ ಅವಕಾಶವನ್ನು ದುರುಪಯೋಗಪಡಿಸಲು ನನಗೆ ಇಷ್ಟವಿಲ್ಲ. ಸ್ಥೂಲವಾಗಿಯೂ ಕೂಲಂಕಷವಾಗಿಯೂ ಈಗ ಶ್ರೀಮನ್ಮಹಾರಾಜರವರು ಅಪ್ಪಣೆಕೊಡಿಸಿರುವ ಭಾಷಣವನ್ನು ನೋಡಿದರೆ ಸರ್ಕಾರದವರು ಏನಾದರೂ ಹೊಸಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆಯೇ ಎಂದರೆ, ಯಾವುದೂ ಇಲ್ಲ. ನಮ್ಮ ರಾಜ್ಯಾಂಗದ 4ನೆಯ ಅಧ್ಯಾಯ ವಾದ Directive Principles of State Policy ಎಂಬುದರಲ್ಲಿ ನಮೂದಾಗಿರುವ ಅಂಶಗಳನ್ನು ಕಾರ್ಯರೂಪಕ್ಕೆ ತರುವ ಬಗ್ಗೆ ಏನಾದರೂ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆಯೆ ಎಂದು ನೋಡಿದರೆ ಯಾವುದೂ ಕಂಡುಬರುವುದಿಲ್ಲ. ಭಾಷಣವನ್ನು ಇನ್ನೂ ಸ್ವಲ್ಪ ಪರಿಶೀಲನೆ ಮಾಡಿದರೆ, ಈಗಿರತಕ್ಕ ಮಂತ್ರಿಮಂಡಲ ಹಿಂದಿನ ಮಂತ್ರಿಮಂಡಲದವರು ಜನರ ಪುರೋಭಿವೃದ್ಧಿಗಾಗಿ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೋ ಅದನ್ನು ಮುಂದುವರಿಸುತ್ತಾ ಬಂತು. ಈಗಿನ ಮಂತ್ರಿಮಂಡಲ ಕೆಲವು ಹೊಸ ಕಾರ್ಯಕ್ರಮಗಳನ್ನು ಹಾಕಿಕೊಂಡು ಅವನ್ನು ಮುಂದುವರಿಸುತ್ತೇವೆಂದು ಭರವಸೆ ಕೊಟ್ಟಿದ್ದರು. ಆದರೆ ಈ ಭಾಷಣದಲ್ಲಿ ಹೇಳಿರುವುದನ್ನು ನೋಡಿದರೆ, ಕೆಲವು ಅಂಶಗಳಲ್ಲಿ ಇವರು ಹಿಂದಕ್ಕೆ ಹೋಗುತ್ತಿರುವ ಚಿಹ್ನೆಗಳಿವೆ. ಇದಕ್ಕೆ ಉದಾಹರಣೆಯಾಗಿ ವಿದ್ಯಾಭ್ಯಾಸದ ವಿಚಾರದಲ್ಲಿ ಭಾಷಣದಲ್ಲಿ ಏನು ಅಪ್ಪಣೆ ಕೊಡಿಸಿದ್ದಾರೋ ಅದರಲ್ಲಿ ಒಂದು ವಾಕ್ಯವನ್ನು ಓದುತ್ತೇನೆ. ಹಿಂದಿನ ಮಂತ್ರಿಮಂಡಲದವರು ವಿದ್ಯಾಭ್ಯಾಸದ ಬಗ್ಗೆ ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡು ನಡೆಸುತ್ತಿದ್ದರು. ಸಂಸ್ಥಾನದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಹೆಚ್ಚು ಹೆಚ್ಚಾಗಿ ಜಾರಿಗೆ ಬರಬೇಕೆಂಬ ಉದ್ದೇಶದಿಂದ Compulsory Attendance ಯೋಜನೆಯೊಂದನ್ನು ಇಟ್ಟುಕೊಂಡಿದ್ದರು. ಆಮೇಲೆ ಹಿಂದಿನ ಅಥವಾ ಇಂದಿನ ಮಂತ್ರಿಮಂಡಲದವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ Compulsory Primary Education Scheme ಎಂದು ಒಂದು ಯೋಜನೆಯನ್ನಿಟ್ಟುಕೊಂಡು ಮುಂದೆ ಹೋಗುತ್ತೇವೆಂದು ಹೇಳಿ ಅದನ್ನು ಅನುಸರಿಸಿಕೊಂಡು ಬರುತ್ತಿದ್ದರು. ಈಗ ಅವರು ಏನೇ ಕಾರಣ ಹೇಳಿದರೂ ಈ ಭಾಷಣದಿಂದ ಒಂದು ಅಂಶ ವ್ಯಕ್ತವಾಗುತ್ತದೆ. ಅದೇನೆಂದರೆ, ಈ ವಿಚಾರದಲ್ಲಿ ಇನ್ನು ಮುಂದೆ ಹೋಗುವುದಿಲ್ಲ, ಇಲ್ಲೇ ಸ್ವಲ್ಪ ಕಾಲ ನಿಲ್ಲುತ್ತೇವೆ ಎಂಬ ಅಭಿಪ್ರಾಯ ಬರುತ್ತದೆ. ಈ ಭಾಷಣದಲ್ಲಿರುವ ವಾಕ್ಯವನ್ನು ಓದುತ್ತೇನೆ, ಅದು ಹೀಗಿದೆ:

"It is obvious that during the next two or three years we have to concentrate more on qualitative reform rather than on merely quantitative expansion."

ಇದರಿಂದ ನಮಗೆ ಒಂದು ವಿಧವಾದ ಶಂಕೆ ಬರುತ್ತಿದೆ. ಹಿಂದಿದ್ದ Compulsory Attendance ಯೋಜನೆಯನ್ನು ಕೆಲವು ತಾಲ್ಲೂಕುಗಳಲ್ಲಿಟ್ಟುಕೊಂಡು ಅದರ ಜೊತೆಗೆ ಇನ್ನು ಕೆಲವು ತಾಲ್ಲೂಕುಗಳಲ್ಲಿ Compulsory Education ಯೋಜನೆಯನ್ನೂ ಜಾರಿಗೆ ತಂದು ಈಗಲೂ ಮುಂದುವರಿಸುವುದಾದರೆ ಸಂತೋಷ. ಆದರೆ ಹೀಗೆ ಮುಂದುವರಿಸುವುದಿಲ್ಲ ಎಂಬ ಶಂಕೆ ಶ್ರೀಮನ್ಮಹಾರಾಜರವರ ಭಾಷಣದಲ್ಲಿ ಕಂಡುಬರುತ್ತದೆ.

ಇದೇ ರೀತಿ ಇನ್ನೊಂದು ವಿಷಯ. Nationalisation of Road Transport ವಿಚಾರದಲ್ಲಿ ಭಾಷಣದ 21ನೆಯ ಪ್ಯಾರಾದಲ್ಲಿ ಈ ರೀತಿ ಹೇಳಿದ್ದಾರೆ:

"A beginning has been made in the direction of the nationalisation of road transport. State ownership of road transport is proposed to be accomplished in convenient stages. A good beginning has been made without unduly dislocating private enterprise. The problem before the Government now is, how to co-ordinate the work of the transport agencies owned by the Government and private citizens respectively. Several aspects of this problem are engaging the earnest attention of the Government."

ಮುಂದೆ ಅದನ್ನು ತೆಗೆದುಕೊಳ್ಳುತ್ತೇವೆಂದು ಸರ್ಕಾರದವರು ಹೇಳಬಹುದು. ಆದರೂ ಇಲ್ಲಿಗೇ ಕೆಲಸವನ್ನು ನಿಲ್ಲಿಸುವುದಿಲ್ಲ. ಹಾಗೆ ತಿಳಿದುಕೊಳ್ಳಬೇಡಿ, ಎಂದು ಹೇಳಿದರೆ ಸರ್ಕಾರದವರನ್ನು ಅಭಿನಂದಿಸುತ್ತೇನೆ. ಅವರು ಮುಂದೆ ಹೋಗುತ್ತೇವೆಂದು ಹೇಳಬೇಕು. ಈ ಭಾಷಣದಲ್ಲಿ ವ್ಯಕ್ತಪಡುವ ಶಂಕೆಯಲ್ಲದೆ ಶ್ರೀಮಾನ್ ಸುಬ್ರಹ್ಮಣ್ಯರವರು ಈ ಠರಾವಿನ ವಿಚಾರದಲ್ಲಿ ಮಾತನಾಡುವಾಗ ಇನ್ನೂ ಸ್ಪಷ್ಟಪಡಿಸಿ ಈ ವಿಚಾರದಲ್ಲಿ ಇನ್ನು ಮುಂದೆ ಹೋಗುವುದಕ್ಕಾಗುವುದಿಲ್ಲ, ಈಗ ಬಸ್ಸುಗಳನ್ನು ನಡೆಸುತ್ತಿರುವ ಖಾಸಗೀ ಜನರಿಗೆ ತೊಂದರೆ ಮಾಡುವುದಿಲ್ಲ, ಎಂದು ಹೇಳಿದರು.

Sri T. SUBRAMANYA.—You must read my speech to know how to co-ordinate the agencies.

ಶ್ರೀ ಎಲ್. ಸಿದ್ದಪ್ಪನವರು.—ಇನ್ನು ಮೂರನೆಯ ಅಂಶ ಯಾವುದೆಂದರೆ, ಪಾನನಿರೋಧ ನೀತಿಯ ವಿಚಾರ. ಈ ವಿಚಾರದಲ್ಲಿ ಹಿಂದಿನ ಮಂತ್ರಿಮಂಡಲ ಯಾವುದೋ ಒಂದು ನೀತಿಯನ್ನು ಅನುಸರಿಸುತ್ತಾ ಇತ್ತು. ಅದು ಸರಿಬರಲಿಲ್ಲ. ಅದು ಪ್ರಗತಿದಾಯಕವಾಗಿಲ್ಲವೆಂದು ಇನ್ನು ಮುಂದೆ ಓದಬೇಕೆಂಬ ದೃಷ್ಟಿಯಿಂದ ಅದನ್ನು ಬದಿಗೊತ್ತಿ ನೀವೇ ಒಂದು ನೀತಿಯನ್ನು ಅನುಸರಿಸಿದಿರಿ. ಆಗ ನೀವು ಏನು ಹೇಳಿದಿರಿ. ಏನೇ ಕಷ್ಟಬರಲಿ, ಅದರಿಂದ ಸರ್ಕಾರದವರಿಗೆ ನಷ್ಟವಾದರೂ ಕೂಡ ಬಿಡುವುದಿಲ್ಲ ಎಂದು ಸರ್ಕಾರದ ಪರವಾಗಿ ಅಧಿಕಾರಯುತವಾಗಿ ಹೇಳಿದಂಥ ಹೇಳಿಕೆಗಳು ಇವೆ. ಅಂಥಾದ್ದರಲ್ಲಿ ಈಗ ತಾವು ಏನು ಹೇಳಿರುತ್ತೀರಿ. ಶ್ರೀಮನ್ಮಹಾರಾಜರವರ ಭಾಷಣದಲ್ಲಿ ಏನು ವ್ಯಕ್ತಪಡುತ್ತದೆ ಎಂದರೆ ಈಗ ಇಲಿಸಿಟ್ ಡಿಸ್ಟಿಲೇಷನ್ ಜಾಸ್ತಿಯಾಗಿದೆ ಅದನ್ನು ನಿಲ್ಲಿಸುವ ಬಗ್ಗೆ ಸ್ವಲ್ಪ ಕಾಲವನ್ನು ತೆಗೆದುಕೊಂಡು ಆಮೇಲೆ ಮುಂದುವರಿಯುತ್ತೇವೆ ಎಂಬುದಾಗಿ ತಿಳಿಸಿದ್ದಾರೆ. ಈಗಿನ ಹೊಸದಾದ ಪರಿಸ್ಥಿತಿಯಲ್ಲಿ ಹೊಸ ರಾಜ್ಯಾಂಗದಲ್ಲಿ ಏನೇನು ಹೇಳಿದೆಯೇ ಎಂದರೆ 'Directive Principles of State

Policy' ಆ ಬಗ್ಗೆ ಪ್ರಗತಿದಾಯಕವಾದ ಕಾರ್ಯಕ್ರಮ ಸೂಚಿಸುತ್ತೀರೆಂದು ನಿರೀಕ್ಷಣೆ ಮಾಡಿದ್ದೆವು. ಅದು ಯಾವುದೂ ಇಲ್ಲದೇ, ಹಿಂದಿನ ಪ್ರಗತಿದಾಯಕವಾದ ಕಾರ್ಯಕ್ರಮವನ್ನೇ ಮುಂದುವರಿಸುವುದಕ್ಕೆ ತಯಾರಾಗಿಲ್ಲ ಎಂಬುದನ್ನು ತಿಳಿದು ತುಂಬಾ ವ್ಯಥೆಯಾಗಿದೆ.

ಇನ್ನೊಂದು ವಿಷಯ. ಮೊದಲೇ ಹೇಳಿದ ಹಾಗೆ ಇದನ್ನು ಬಡ್ಜೆಟ್ ಭಾಷಣವನ್ನಾಗಿ ಪರಿವರ್ತನೆ ಮಾಡಿಕೊಂಡು ವಿವರಗಳನ್ನು ಪ್ರಸ್ತಾಪಿಸಲು ನನಗೆ ಅಭಿಲಾಷೆ ಇಲ್ಲ. ಈ ವಿಷಯ ಶ್ರೀಮನ್ಮಹಾರಾಜರವರ ಭಾಷಣದಲ್ಲಿ ವ್ಯಕ್ತಪಡುತ್ತದೆ. ಅದನ್ನು ತಾವು ವ್ಯಕ್ತಪಡಿಸುತ್ತೀರಿ ಎಂದು ತಿಳಿದುಕೊಂಡಿದ್ದೆ. ಈ ವಿಷಯ ಅವರ ಭಾಷಣದಲ್ಲಿ ಬರದೇ ಇರುತ್ತದೆ. ಅದು ಯಾವುದೆಂದರೆ ಮೈಸೂರು ಸಂಸ್ಥಾನದಲ್ಲಿ ⅓ ಭಾಗ ಪ್ರದೇಶವಾಗಿರತಕ್ಕ ಮಲೆನಾಡಿನ ವಿಷಯ. ಅದು ಬಹಳ ಹಿಂದುಳಿದಿದೆ. ಮಲೆನಾಡಿನ ಪುರೋಭಿವೃದ್ಧಿಗೆ ಸರ್ಕಾರದವರು ಕಾರ್ಯಕ್ರಮ ತೆಗೆದುಕೊಳ್ಳಬೇಕು. ಹಿಂದಿನ ಮಂತ್ರಿಮಂಡಲ ಆ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡಿದ್ದರು ಅವರು ಒಂದು ವರದಿಯನ್ನು ಮಾಡಿದ್ದಾರೆ. ಈ ಮಂತ್ರಿಮಂಡಲ ಅಧಿಕಾರಕ್ಕೆ ಬಂದ ಮೇಲೆ ಮಂತ್ರಿಗಳು ಮಲೆನಾಡು ಪ್ರದೇಶದಲ್ಲಿ ಪ್ರವಾಸ ಮಾಡಿದಾಗ ಎಷ್ಟೋ ಅರಿಕೆಗಳು ಸಹ ಬಂದಿವೆ. ಈ ಬಗ್ಗೆ ಒಂದು ನಿರ್ದಿಷ್ಟವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಂಡಿದ್ದಾರೆ. ಆಗ ಮಂತ್ರಿಗಳು ಭರವಸೆಯನ್ನು ಸಹ ಕೊಟ್ಟಿರುತ್ತಾರೆ. ಆ ಬಗ್ಗೆ ಏನಾದರೂ ನಿರ್ದಿಷ್ಟ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ, ಅದು ಶ್ರೀಮನ್ ಮಹಾರಾಜರವರ ಭಾಷಣದಲ್ಲಿ ವ್ಯಕ್ತಪಡುತ್ತದೆ ಎಂದು ಬಹಳವಾಗಿ ನಾನು ನಿರೀಕ್ಷಿಸಿದ್ದೆ. ಅದು ಇಲ್ಲದೇ ಇದ್ದದ್ದನ್ನು ನೋಡಿ ನಾನು ಎಷ್ಟು ನಿರೀಕ್ಷಣೆ ಮಾಡಿಕೊಂಡಿದ್ದೆನೋ ಅಷ್ಟು ಹೆಚ್ಚಿನ ನಿರಾಶೆಯಾಯಿತು. ಇಷ್ಟು ವಿಷಯ ಹೇಳಿ ಸರ್ಕಾರದವರು ಇಟ್ಟುಕೊಂಡಿರತಕ್ಕ ಕಾರ್ಯಕ್ರಮದಲ್ಲಿ ಹೊಸದಾಗಿ ಯಾವ ಕಾರ್ಯಕ್ರಮವನ್ನು ಇಟ್ಟುಕೊಂಡಿಲ್ಲ. ಇರತಕ್ಕ ಕಾರ್ಯಕ್ರಮವನ್ನೇ ಮುಂದುವರಿಸಿಕೊಂಡು ಹೋಗುವುದಕ್ಕೂ ತಯಾರಾಗಿಲ್ಲದೇ ಇರುವುದಕ್ಕೆ ನನ್ನ ವಿಷಾದವನ್ನು ವ್ಯಕ್ತಪಡಿಸುತ್ತೇನೆ.

**Sri M. GOVINDA REDDY** (Chitaldrug District—General).—Mr. Speaker, Sir, in rising to oppose these amendments I beg to submit that I do not wish to repeat the arguments that have been advanced in opposition to the amendments. My chief objection to the amendments to the Motion of Thanks with reference to the Address of His Highness the Maharaja is that it is not proper and necessary to table amendments to the Address of Thanks. To understand this it is important that we should realise the significance of the provision made in the Indian Constitution for the Address of the Head of the State and also the Address of Thanks. As the members of this House are aware, this provision has been made on the analogy of the provision in the British Constitution—the King's Speech. When the other day in the House of Commons, the Government moved a Motion of Thanks, as we all know, there was an amendment to that motion by the Opposition Party, the Conservatives. In dealing with that amendment of the Opposition, the Prime Minister characterised the action of the Opposition as irresponsible. Of course, I would not say that of this House for this reason that there is no Opposition here. Why did the British Premier administer such a strong rebuke to the party of which he should be well afraid? That is because there is a happy convention in the British Parliament that the King's Address is considered sacred and that the King's Address or a Motion of Thanks to the Address could not be made a ground by the Opposition for voicing their criticism or opposition to the policies of the Government. That provision has been made for three reasons. One is that the Address of the Head of the State will bring the Head of the State into direct contact with the Members of the Parliament. Otherwise there is no contact for the Parliament with the Head of the State. The second is that by identifying himself with the Government's policies, the King will come to know the details of the administration. That will be an opportunity given to the Head of the State to be acquainted with matters of detail in the administration and by speaking through the King the Government will take upon their shoulders the additional burden of committing themselves to an important policy. As we have all seen that the Address relates to one important policy of Government. In matters of war one important issue that would be before the country would be foreign policy and therefore in the King's Speech it is the foreign policy that would find a dominant place. As we have all seen the fate of the Labour Party was hanging on the issue of nationalisation and it was because the King's Speech did not refer to the nationalisation of steel industry that the Conservatives tabled the amendment. This makes it clear that the Opposition should not make use of that opportunity for

opposing the policies of the Government *intoto* or criticising the administration in detail. If this is realised, we should all believe and agree that we should keep up this healthy convention whcih has been established by the Mother of Parliaments.

Here, the Address of our Highness outlines only the broad policies of the State Administration. Amendments should relate only to the broad policies in the Addreas even granting that the Members would be proper in tabling their amendments. Of the speeches that have been made in support of the amendments, I have not been able to discover any argument or any difference of opinion with regard to the policies that are outlined in the Address. These were only in matters of details and in the details of administration. None of the speakers in support of the amendments has opposed any policy; on the other hand some of the Members and the Movers themselves have been in complete agreement with many of the policies outlined in the Address, and one Mover particularly, has regretted for having tabled the amendment and was even willing to withdraw a substantial portion of it. Well, Sir, when we have a chance to consider the policies of the Government, the programmes of the Government and the relevant Budgetary provisions in detail, where is the need for tabling amendments to the Address? I would therefore appeal to the Hon'ble Members who have tabled these amendments to withdraw them with grace. (Laughter).

Coming to the merits of the amendments themselves, Sir, I would consider the first amendment as not at all proper and not in keeping with the purport of the Address of His Highness or in keeping with the general outline of the Address. It deals with matters like representation, proper representation of certain communities, like giving facilities and due provision for technical qualifications and such details as these. One may well introduce an amendment for the Government of Mysore prohibiting preparation of *iddalies* in hotels. Is it proper when we see the Address outlining broad policies, to bring such minute matters, for instance, of minorities? I would like to know what the Government has not done either in the field of food production or in the field of industries or with regard to giving adequate protection to minorities.

With regard to food production, as has already been stated by many speakers, everything conceivable has been done in order to encourage more food production. Only one thing is lacking and I will not be surprised if that also comes into effect—that the Agricultural Minister should himself take the plough. Short of that, the Government has done everything to promote Grow More Food.

With regard to the field of industries, the whole world, not only India, knows that Mysore has been a pioneer in industries in India. The other day I was having a chat with the Minister for Industries and he told me that when he was stranded in South of England for want of air passage he happened to visit a house in which he saw that tho carpet was from Mysore, the table cloth was from Mysore, soaps were from Mysore and in fact every article that he saw in that house was from Mysore. When we have also read in papers that it has become a fashion for American ladies to wear Mysore silk sarees, should we not be proud of the industries of Mys re? (Cheers). I would like to know what effort is lacking on the part of the Government to give due encouragement to the industries. I would not be surprised and the Hon'ble Members who have moved these amendments would not be surprised when we hear some day that right at the North Pole and right at the South Pole there is the Mysore Soap-sign board hanging.

With regard to the view that adequate protection should be given to the minorities, I would like to know whether there is a Government anywhere in the world which gives such indulgence to minorities? Well, Sir, minorities here are enjoying a good deal more freedom than people to the East of India or to the West of India.

In fact our complaint against this Government is that we have been to much indulgent to the minorities. Well, when there are no denominational educational institutions anywhere in the world, we find here denominational institutions—Urdu Schools—and several other facilities given in spite of what has been happening elsewhere and in spite of the fact that this denominational provision is anti-social. What more protection is needed in order to preserve the fundamental rights of the citizen or in order to give adequate provision for the minorities?

*(Janab Syed Abdur Rahman interrupted).*

My Hon'ble friend Janab Syed Abdur Rahman is interrupting me. I had an impression that he was a very polished gentleman, but his amendment has put a great doubt in my mind. (Laughter).

**Janab SYED ABDUR RAHMAN.**—What is it, Sir?

**Sri M. GOVINDA REDDY.**—I have dealt with his amendment. I did not think that he would be bringing such an amendment as that.

In conclusion, I would appeal to the Hon'ble Members to withdraw the amendments.

ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—ಅಧ್ಯಕ್ಷರೇ, ಮಾನ್ಯ ಇಮಾಂರವರು ಮಾಡಿದ ಭಾಷಣವನ್ನು ನೋಡಿ ನನಗೆ ಆಶ್ಚರ್ಯ ಮತ್ತು ವ್ಯಥೆ ಎರಡೂ ಉಂಟಾಯಿತು. ಅನುಭವಿಗಳ ಬಾಯಿನಲ್ಲಿ ಈ ತೆರನಾದ ವಾದಸರಣಿ ಹೊರಬೀಳುತ್ತದೆಂದು ನಾನು ಭಾವಿಸಿರಲಿಲ್ಲ. ಆದರೆ ಅದು ಒಂದುವೇಳೆ ಅವರ ವಾದಸರಣಿಯ ತಪ್ಪಿಲ್ಲವಾಗಿದ್ದರೂ ಇರಬಹುದು. ಕಷ್ಟಪಟ್ಟು ದುಡಿಯದವರಿಗೂ ಮತ್ತು ಆ ವ್ಯಥೆ ಏನೆಂಬುದನ್ನೇ ತಿಳಿಯದವರಿಗೂ, ವಾದಸರಣಿ ಹೇಗೆಂದರೆ ಹಾಗೆ ಹೋಗುತ್ತದೆ. ತಪ್ಪು ಕಂಡುಬಾರದಿದ್ದರೂ ಕಂಡಂತೆ ಭಾವಿಸಿ ಮಾತನಾಡಲು ಪ್ರಯತ್ನಿಸಿರುವುದು ಬಹಳ ವ್ಯಸನಕರವಾದ ವಿಷಯ. ಆದರೆ ಹಿಂದೆ ಇವರು ಮಾಡಿದ ವೈಖರಿ ಏನೆಂದು ಹೇಳಲಿ! ದೇಶದಲ್ಲಿ ಎಲ್ಲಿ ನೋಡಿದರೂ ನೈತಿಕ ಪತನವಾಗುತ್ತಿರುವುದನ್ನು ತಪ್ಪಿಸಿ, ಕಷ್ಟಪಟ್ಟು ಹೋರಾಡಿ, ದುಡಿದಿರುವಂಥಾ ಸ್ವಾತಂತ್ರ್ಯಕ್ಕೆ ಭಂಗಬಾರದಂತೆ, ಅದನ್ನು ಭದ್ರವಾಗಿ ಕಾಪಾಡಿಕೊಂಡು ಬರಲು ಎಲ್ಲಾ ಪ್ರಯತ್ನಗಳನ್ನು ಒಂದೇ ಮನಸ್ಸಿನಿಂದ ಮಾಡುತ್ತಿದ್ದೇವೆ. ಹಾಗೆ ತ್ಯಾಗ, ಬಲಿದಾನ ಮಾಡಿ ಸಂಪಾದಿಸಿದ ಸ್ವಾತಂತ್ರ್ಯಕ್ಕೆ ಚ್ಯುತಿ ಬಾರದ ರೀತಿಯಲ್ಲಿ ಎಲ್ಲಾ ಕಾರ್ಯಾಚರಣೆಗಳನ್ನೂ ಕೈಗೊಂಡು ಜನ ನಮ್ಮದಿಗೆ ಕೊಂಚವೂ ತೊಂದರೆಯಾಗದಂತೆ ನೋಡಿಕೊಳ್ಳಲಾಗುತ್ತದೆಂಬ ಭರವಸೆಯನ್ನು ನಾನೀಗ ತಮಗೆಲ್ಲರಿಗೂ ಕೊಡಬಲ್ಲೆ. ಇದರಿಂದ ಜನರ ಹಕ್ಕುಬಾಧ್ಯತೆಗೆ ಯಾವ ಲೋಪವೂ ಉಂಟಾಗಲಾರದು. ಹೊರಗಡೆ ತಿಳಿವಳಿಕೆ ಇಲ್ಲದ ಕೆಲವರು ಆರೀತಿ ಮಾತನಾಡಿಕೊಳ್ಳಬಹುದು. ಅದು ಶುದ್ಧಾಂಗವಾಗಿ ತಿರುಳಿಲ್ಲದ ಮಾತು. ಈ ಕಾನೂನಿನಿಂದ 1–2 ವರ್ಷಕಾಲ ಹಿಂದೆ ಜೈಲುಗಳಲ್ಲಿ ಇಡುತ್ತಿದ್ದಂತೆ ನಾವು ಯಾರನ್ನೂ ಇಡುವುದಿಲ್ಲ. ಈ ಭರವಸೆಯನ್ನೂ ನಾನು ತಮಗೆ ಕೊಡಬಲ್ಲೆ. ಸಾರ್ವಜನಿಕರ ಹಕ್ಕು ಮತ್ತು ನೆಮ್ಮದಿ ಭದ್ರವಾಗಿರಲಿ ಎಂದೇ ನಾವು ಇದನ್ನು ಮಾಡುತ್ತಿರುವುದು. ನಾವು ನಮ್ಮಲ್ಲಿ ಒಂದು ಭವ್ಯ ರಾಜ್ಯವನ್ನು ಕಟ್ಟಲು ಹೊರಟಿದ್ದೇವೆ. ಇಂಥಾ ಭವ್ಯ ರಾಜ್ಯದಲ್ಲಿ ಜನರು ಸುಖಶಾಂತಿಗಳಿಂದಿರಬೇಕೆಂಬುದೇ ನಮ್ಮೆಲ್ಲರ ಆಶಯ.

ಆದರೆ ದೇಶಕ್ಕೆ ಒಂದೇಸಾರಿ ಏಕ್‌ದಂ ಎಲ್ಲಾ ಅನುಕೂಲಗಳನ್ನೂ ಮಾಡಲು ಮಂತ್ರ ಹಾಕಿ ಮಾಡುವುದಾದರೆ ಸಾಧ್ಯವಾಗುತ್ತದೇನೋ! ಅದೂ ಕೂಡ ಕೇವಲ ಭ್ರಮೆ. ಇದನ್ನೆಲ್ಲಾ ತಿಳಿದೂ ಕೂಡ ವಿನಾ ಕಾರಣ ಟೀಕೆ ಮಾಡುವುದು ಚೆನ್ನಾಗಿರುವುದಿಲ್ಲವೆಂದು ನಾನು ಹೇಳಬೇಕಾಗಿದೆ.

ಕೆಲವರು ವ್ಯವಸಾಯದ ವಿಷಯವಾಗಿಯೂ ಮತ್ತು ಮರಾಮತ್ ಇಲಾಖೆಯ ವಿಷಯವಾಗಿಯೂ ಪ್ರಸ್ತಾಪ ಮಾಡಿದ್ದಾರೆ. ಈ ಸಂಬಂಧವಾಗಿ ಶ್ರೀಮಾನ್ ಎಲ್. ಸಿದ್ದಪ್ಪನವರು ಬಹಳ ಚಾತುರ್ಯವಾಗಿ ಮಾತನಾಡಿದ್ದಾರೆ. ಶ್ರೀಮನ್ಮಹಾರಾಜರವರು ಮಾಡಿರುವ ಭಾಷಣದ ಬಗ್ಗೆ ಏನೇನು ರಚನಾತ್ಮಕ ಟೀಕೆಗಳನ್ನು ಮಾಡಬೇಕೋ ಅದನ್ನು ಮಾಡಿ, ಅದರ ಜೊತೆಗೆ ಎಲ್ಲೆಲ್ಲಿ ಏನೇನು ತಪ್ಪುಗಳನ್ನು ಕಂಡುಹಿಡಿಯಬೇಕೆಂದಿದ್ದರೋ ಅದನ್ನೂ ತಾವು ಮಾತನಾಡಿದ್ದಾರೆ. ಆದರೆ ಜನಾಬ್ ಇಮಾಂರವರು ಎಲ್ಲೆಲ್ಲಿ ಏನೇನು ತಪ್ಪುಗಳಿಲ್ಲವೋ ಅಲ್ಲೆಲ್ಲಾ ತಪ್ಪು ಕಂಡುಹಿಡಿದು, ಮಾತನಾಡಿದ್ದಾರೆ. ಆದರೆ ಹಾಗೆ ಅವರು ಟೀಕೆ ಮಾಡುವಾಗ ಅವರ ಮನಸ್ಸಿನಲ್ಲಿ ರಚನಾತ್ಮಕ ಟೀಕೆ ಮಾಡಬೇಕೆಂಬ ಉದ್ದೇಶವಿಟ್ಟುಕೊಂಡುಮಾಡಿದ್ದರೆ, ನಾನು ಅವುಗಳನ್ನು ಸ್ವಾಗತಿಸುತ್ತಿದ್ದೆನು. ಆದರೆ ಬಡ್ಜೆಟ್ ವಿಷಯ......

ಶ್ರೀ ಎಲ್. ಸಿದ್ದಪ್ಪನವರು.—ತಾವೇಕೆ ಆ ಬಡ್ಜೆಟ್ಟಿನ ಸುದ್ದಿ ಮಾತನಾಡುತ್ತೀರಿ?

ಶ್ರೀ ಟಿ. ಮರಿಯಪ್ಪನವರು.—ಹಾಗೇ ಆಗಲಿ. ನಾನು ಅದನ್ನು ಬಿಟ್ಟುಬಿಡುತ್ತೇನೆ. ಆದರೆ ಹಿಂದೆ ಜನಾಬ್ ಇಮಾಂರವರ ಕಾಲದಲ್ಲಿ ಮಾಡಿದ್ದನ್ನು ಎಷ್ಟರ ಮಟ್ಟಿಗೆ ತೊಳೆದು ಅದನ್ನು ಸರಿಯಾದ ಮಾರ್ಗಕ್ಕೆ ತಂದಿರುತ್ತೇವೆಂಬ ವಿಚಾರಗಳನ್ನೆಲ್ಲಾ ಈಗ ತಿಳಿಸುವುದಕ್ಕೆ ಸಾಧ್ಯವಿಲ್ಲ.

ಜನಾಬ್ ಜೆ. ಮಹಮ್ಮದ್ ಇಮಾಂರವರು.—ನಾವು ಅಷ್ಟಾದರೂ ಮಾಡಿದ್ದೇವೆ.

ಶ್ರೀ ಟಿ. ಮರಿಯಪ್ಪನವರು.—ಆದರೆ ಅದರ ಫಲ ಮಾತ್ರ ಸರಿಯಾಗಿ ದೊರೆಯಲಿಲ್ಲ. ಯಾವುದನ್ನು ಮಾಡಿದರೆ ಕೂಡಲೇ ಫಲ ಕೊಡುತ್ತಿತ್ತೋ ಅಂಥಾದ್ದನ್ನು ಮಾಡಲು ತಾವು ಆಗ ಹೆಚ್ಚು ಗಮನ ಕೊಡಲಿಲ್ಲ, ಅಷ್ಟೆ. ಕೇಂದ್ರ ಸರ್ಕಾರದವರು ಕೆಲವರಿಗೆ ಜಮೀನುಗಳನ್ನು ಹಂಚಿಬಿಟ್ಟರು. ಅದರಂತೆ ತಾವೂ ಕೂಡ ಇಲ್ಲಿ ಮಾಡಿದಿರಿ. ಆದರೆ ಬೇಗ ಫಲ ಕೈಗೆ ಬರುವುದು ಯಾವುದೆಂಬುದನ್ನು ತಿಳಿದು ತಾವು ಮಾಡಲಿಲ್ಲ.

ಇದೇರೀತಿ ಪಿ. ಡಬ್ಲ್ಯು. ಡಿ. ವಿಚಾರದಲ್ಲೂ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಎಲ್ಲವನ್ನೂ ದೂರದೃಷ್ಟಿಯಿಂದ ನೋಡಿ ಮಾತನಾಡುವುದು ಒಳ್ಳೆಯದು. ಈಗ 26 ಲಕ್ಷ ಎಕರೆಗಳಲ್ಲಿ ವ್ಯವಸಾಯ ನಡೆದು 26 ಸಾವಿರ ಕೆರೆಗಳ ಜೀರ್ಣೋದ್ಧಾರ

ಕಾರ್ಯ ನಡೆಯುತ್ತಿರುವುದು ಬಹಳ ವರ್ಷಗಳ ಹಿಂದಿನಿಂದಲೂ ಹಿಂದೆ ಬಿದ್ದುಬಂದಿದೆ. ಅದಕ್ಕೆಲ್ಲ ನಾವೇ ಈಗ ಹೊಣೆಗಾರರೆಂದು ದೂರುವುದು ಸರಿಯಾದುದಲ್ಲ. ಆಗಲೇ ಶ್ರೀಮಾನ್ ಬಿ. ಹುಚ್ಚೇಗೌಡರು ಹೇಳಿದ ಹಾಗೆ ಕೆಲವು ಅಲ್ಪಕಾಲಾವಧಿಯ ಯೋಜನೆಗಳು ಮತ್ತು ದೀರ್ಘ ಕಾಲಾವಧಿಯ ಯೋಜನೆಗಳು ಎಂಬುದಾಗಿ ವಿಭಾಗ ಮಾಡಿಕೊಂಡು ಅವರಲ್ಲಿ ಅಲ್ಪಕಾಲಾವಧಿಯ ಯೋಜನೆಗಳಿಗೇ ನಾವೀಗ ಕೈಹಾಕಿರುತ್ತೇವೆ. ಈ ಕಾರಣದಿಂದ ದೀರ್ಘಕಾಲಾವಧಿಯ ಪ್ರಾಜೆಕ್ಟ್‌ಗಳನ್ನು ನಿಧಾನಿಸಿ ಅಲ್ಪಕಾಲಾವಧಿಯ ಪ್ರಾಜೆಕ್ಟ್‌ಗಳನ್ನು ಕೈಕೊಂಡಿದ್ದೇವೆ. ಗೊಬ್ಬರ, ಕಬ್ಬಿಣ, ಸಿಮೆಂಟು ಇವೆಲ್ಲವೂ ಈಗ ಸದ್ಯದಲ್ಲೇ ಬಹಳ ಅವಶ್ಯಕವೆಂಬುದನ್ನು ಎಲ್ಲರೂ ಗಮನಿಸಬೇಕು. ಆದ್ದರಿಂದ ಸರ್ಕಾರದವರಿಗೆ ಈ ದೀರ್ಘ ಕಾಲಾವಧಿಯ ಪ್ರಾಜೆಕ್ಟ್‌ಗಳಿಗೆ ಹಣ ಖರ್ಚು ಮಾಡುವ ಇಷ್ಟವಿಲ್ಲವೆಂದು ಯಾರೂ ಭಾವಿಸಬಾರದು.

Sri L. SIDDAPPA.—In fact, from the Address of His Highness we find that Lakkavalli and other projects about which there has been so much of talk will be continued.

Sri T. MARIAPPA.—They will certainly be continued. ಆದ್ದರಿಂದ ಕೇವಲ ವರ್ಷಕ್ಕೆ, ಆರು ತಿಂಗಳಿಗೆ, ಮೂರು ತಿಂಗಳಿಗೆ, ಫಲ ಕೊಡುವ ಏರ್ಪಾಡುಗಳನ್ನು ಸರ್ಕಾರದವರು ಕೈಕೊಳ್ಳಬೇಕೆಂದು ಮಾಡಿದ್ದಾರೆ. ಇದೇ ರೀತಿ ನೀರಾವರಿ ಬಾವಿಗಳನ್ನು ಮಾಡಿದ್ದೇವೆ. ಬೀಜಗಳ ಹಂಚಿಕೆ, ಗೊಬ್ಬರಗಳ ಹಂಚಿಕೆ ಮತ್ತು ಇತರ ವ್ಯವಸಾಯದ ಸಲಕರಣೆಗಳ ಹಂಚಿಕೆ ವಿಷಯದಲ್ಲೂ ರೈತರಿಗೆ ಅನುಕೂಲ ಮಾಡಿದ್ದೇವೆ. ಇವುಗಳ ವಿಷಯದಲ್ಲಿ ಎಷ್ಟು ತೀವ್ರತೆಯಿಂದ ಮಾಡುತ್ತೇವೆಯೋ ಹಾಗೆಯೇ ದೀರ್ಘ ಕಾಲಾವಧಿಯ ಪ್ರಾಜೆಕ್ಟ್‌ಗಳನ್ನು ನಿಧಾನಿಸಿದ್ದೇವೆ. ಉದಾಹರಣೆಗೆ ನೋಡುವುದಾದರೆ 1945 ರಿಂದ 1947ರ ವರೆಗೆ ಅವರು ಹಾಕಿಕೊಂಡ ದೀರ್ಘ ಕಾಲಾವಧಿ ಪ್ರಾಜೆಕ್ಟ್‌ಗಳಿಂದ ಒಂದು ಎಕರೆಯನ್ನು ಕೂಡ ಸಾಗುವಳಿಗೆ ತಂದಿಲ್ಲ!! ಅದೇ ಈಗ ನೋಡಿ. ಅಂದಮಾತ್ರಕ್ಕೇ ಅವುಗಳನ್ನು ತೆಗೆದುಕೊಳ್ಳಕೂಡದೆಂದು ನಾನು ಹೇಳುವುದಿಲ್ಲ. ಆದರೆ ಯಾವುದು ಮುಂಚೆ ಆಗಬೇಕು, ಯಾವುದು ಆಮೇಲೆ ಆಗಬೇಕೆಂಬುದನ್ನು ಅವರು ಸ್ವಲ್ಪ ಪರಿಶೀಲನೆ ಮಾಡಿದ್ದರೆ ನಮಗಿಂದು ಇಂಥ ಪರಿಸ್ಥಿತಿ ಬರುತ್ತಿರಲಿಲ್ಲ. 1941ನೆಯ ಇಸವಿಯಿಂದ ಜನಾಬ್ ಇಸ್ಮಾಯಿಲರವರು ಈ ಸಣ್ಣಸಣ್ಣ ನಾಲಾ ರಿಪೇರಿ, ತೂಬು ರಿಪೇರಿ, ಕೋಡಿ ಎತ್ತರಿಸುವುದು—ಮುಂತಾದ ಸಣ್ಣ ಕೆಲಸಗಳನ್ನು ಮಾಡಿಕೊಂಡು ಬಂದಿದ್ದರೆ ಎಷ್ಟೋ ಚೆನ್ನಾಗಿತ್ತು. ಅವೆಲ್ಲಾ ಆಗ ಹಾಳುಬಿದ್ದು ನೋಡಿಕೊಳ್ಳುವವರಿಲ್ಲದೆ ಬಿಟ್ಟು, ದೊಡ್ಡದೊಡ್ಡ ಪ್ರಾಜೆಕ್ಟ್‌ಗಳಿಂದ ಈಗ ಫಲವೇನಾಗಿದೆ ನೋಡಿ!! ಈ ಅಂಶವನ್ನು ಮನಗಂಡು ಈಗ ಈ ದೊಡ್ಡ ಕಾಂಗಾರಿಗಳನ್ನು ಸ್ವಲ್ಪ ನಿಧಾನಿಸಿದೆ. ಆದರೆ, ಇಷ್ಟು ಭರವಸೆ ಕೊಡಬಲ್ಲೆ. ಅವುಗಳನ್ನೆಲ್ಲಾ ಪೂರ್ತಿಯಾಗಿ ಬಿಟ್ಟುಬಿಡುವುದಿಲ್ಲ ಎಂದು ಸದ್ಯಕ್ಕೆ 1951ನೆಯ ಇಸವಿಯೊಳಗೆ ಫಲ ಕೊಡುವ ಕೆಲಸಗಳನ್ನು ತೀವ್ರತೆಯಿಂದ ಮುಂದುವರಿಸಬೇಕೆಂದಿದ್ದೇವೆ. ಇದಕ್ಕಾಗಿ ಮಾನ್ಯ ಸದಸ್ಯರೊಬ್ಬರು ನಾವು ವ್ಯವಸಾಯ ತಿಳಿಯದವರು ಎಂದು ಹೇಳಿದರು. ಅವರಿಗೆ ನಾನು ಉತ್ತರ ಹೇಳಬೇಕಾಗಿಲ್ಲವೆಂದು ಕಾಣುತ್ತೆ. ಅದು ಮುಖ್ಯವಾಗಿ ಅವರ ಹೃದಯವನ್ನು ಪ್ರತಿಬಿಂಬಿಸುತ್ತದೆ, ಅಷ್ಟೆ.

ಸೊಸೈಟಿಗಳ ವಿಚಾರ ಪ್ರಸ್ತಾಪಕ್ಕೆ ಬಂತು. 1904ನೆಯ ಇಸವಿಯಿಂದ 1948ನೆಯ ಇಸವಿಯವರೆಗೆ 44 ವರುಷಗಳಲ್ಲಿ ಗ್ರಾಮಾಂತರ ಸೊಸೈಟಿಗಳಿಂದ ಕೇವಲ 25 ಲಕ್ಷ ರೂಪಾಯಿಗಳಷ್ಟು ಮಾತ್ರ ಷೇರು ಬಂಡವಾಳ ವಸೂಲಾಗಿತ್ತು. ಅವರಲ್ಲೂ ಬಹು ಭಾಗದಷ್ಟು ಸೊಸೈಟಿಗಳು ಕೇವಲ credit ಸೊಸೈಟಿಗಳಾಗಿದ್ದು ಗ್ರಾಮಾಂತರ ಪ್ರದೇಶಗಳ ಬೆಳವಣಿಗೆಗೆ ಸಹಕಾರಿಯಾಗಿರಲಿಲ್ಲ. ಆದ್ದರಿಂದಲೇ ತಮಗೆ ವಸೂಲಾದ ಷೇರು ಬಂಡವಾಳವು 25 ಲಕ್ಷ ರೂಪಾಯಿಗಳು ಮಾತ್ರ. ಅದೇ 1949ನೆಯ ಇಸವಿಯೊಂದರಲ್ಲೇ ಏಪ್ರಿಲ್ ತಿಂಗಳಿನಲ್ಲಿ ಪ್ರಾರಂಭವಾಗಿ ಈ ವಿವಿಧೋದ್ದೇಶ ಸೊಸೈಟಿಗಳಿಂದ 25 ಲಕ್ಷ ರೂಪಾಯಿಗಳಷ್ಟು ವಸೂಲಾಗಿದೆ. ರಾಗಿ ಮುಂತಾದ ಧಾನ್ಯಗಳ ವಸೂಲಿ ಮಧ್ಯೆ ಇದನ್ನೂ ವಸೂಲಿ ಮಾಡಬಿಟ್ಟರು ಎಂದು ಶ್ರೀಮಾನ್ ಗುಂಡಪ್ಪ ಗೌಡರು ಹೇಳಿದರು ; ಹಾಗೇನೂ ಇಲ್ಲ. ಎಷ್ಟೋ ಜನರು ದವಸವ ವಸೂಲ ಸಮಯದಲ್ಲೇ ಕೊಟ್ಟಿರಬಹುದು. ಆದರೂ ತಾವೇ ತಾವಾಗಿ ಸಂತೋಷದಿಂದ ಕೊಟ್ಟಿದ್ದಾರೆಂದು ಹೇಳಬಲ್ಲೆ. ಶ್ರೀಮಾನ್ ಗುಂಡಪ್ಪ ಗೌಡರು ಇನ್ನೊಂದು ಶಂಕೆಯನ್ನು ವ್ಯಕ್ತಪಡಿಸಿದರು. ಅಲ್ಲಿನ ಜನತೆ ವಿದ್ಯೆಯಲ್ಲಿ ಮುಂದುವರೆದು ನಮ್ಮ ಮಟ್ಟಕ್ಕಿನ್ನೂ ಬರದೆ ಇರುವಾಗ ಇಷ್ಟೆಲ್ಲಾ ಪ್ರಾರಂಭಮಾಡಿ ನಾಳೆ ಕೆಟ್ಟುಹೋದರೆ ಏನು ಮಾಡುವುದು ಎಂದು ತಿಳಿಸಿದರು. ಅದಕ್ಕೆ ಒಂದು ಮಾತು ಹೇಳುತ್ತೇನೆ. ಅವರಿಗೆ ವಿದ್ಯೆಯಿಲ್ಲವೆಂದು ನಾವು ಎಷ್ಟು ದಿವಸ ಹೀಗೆಯೇ ಇರುವುದು ? ಅಷ್ಟು ಮಟ್ಟಿಗೆ ನಾವು ಮಾನವ ಸ್ವಭಾವತೆಯ ವಿಚಾರದಲ್ಲಿ ಅಗತ್ಯವಾಗಿ ನಂಬಿಕೆಯಿಡಬೇಕು. ಪ್ರತಿಯೊಂದರಲ್ಲೂ ಹೆದರಿಕೊಂಡು ಮಾಡುತ್ತಾ ಹೋದರೆ ಅನೇಕ ಶತಮಾನಗಳಾದರೂ ನಾವು ಮಾಡುವುದಿಲ್ಲ. ಈಗ ಬೇಕಾಗಿರುವುದು, ನಾವೇ ಜನರಲ್ಲಿ ಒಂದು ಹೊಸ ಹುರುಪು, ಚೈತನ್ಯ ಉಂಟುಮಾಡಬೇಕಾದ್ದು. ಉದಾಹರಣೆಗೆ, ಒಂದು ವಿಚಾರ ಹೇಳುತ್ತೇನೆ. ಗ್ರಾಮಪುನರುಜ್ಜೀವನ ಯೋಜನೆಯು ತಾವು ಮಾಡಿದ್ದನ್ನೇ ಸ್ವಲ್ಪ ಬದಲಾವಣೆಮಾಡಿ ತಂದಿದ್ದಾಗಿದೆ. ಆದರೆ ಮೊದಲಿನ ಯೋಜನೆಯಲ್ಲಿ ಒತ್ತಾಯ ಎಲ್ಲಿತ್ತು ? ಜನರಲ್ಲೇ ಒಂದು ಹುರುಪು ಉಂಟುಮಾಡಿ ಅದರ ಮೂಲಕ ಕೆಲಸ ನಡೆಸಬೇಕೆಂಬುದು ಈಗಿನ ಗುರಿ. ನೀವು ಹೋಬಳಿಗಳನ್ನು ಒಂದೊಂದು ಯೂನಿಟ್ಟಾಗಿ ಮಾಡಿಕೊಂಡಿರಿ. ನಾವು ಇಡೀ ತಾಲ್ಲೂಕನ್ನು ತೆಗೆದುಕೊಂಡಿದ್ದೇವೆ. ಆದರೆ ನಮ್ಮ ನಿಮ್ಮ ದೃಷ್ಟಿಕೋನ ಬೇರೆ. ಊರನ್ನು ಶೃಂಗರಿಸಿ ಚೆನ್ನಾಗಿ ಮಾಡುವುದಕ್ಕೆ ಮೊದಲು ಊರಿನಲ್ಲಿರುವವರ ಮನಸ್ಸನ್ನು ಚೆನ್ನಾಗಿ ಪರಿವರ್ತನೆ ಮಾಡಬೇಕು. ಅವರಲ್ಲಿ ಒಂದು ನವಚೈತನ್ಯವನ್ನುಂಟುಮಾಡಬೇಕು. ನಮ್ಮ ಜನರಿಗೆ ಸ್ವಾತಂತ್ರ್ಯ ಬಂದರೂ ರಾಜಕೀಯ ಸ್ವಾತಂತ್ರ್ಯ ಮಾತ್ರ ಬಂದರೆ ಸಾಲದು. ಆರ್ಥಿಕ ಸ್ವಾತಂತ್ರ್ಯವನ್ನೂ ಅವರು ಹೊಂದಬೇಕು. ಅದು ಬಾರದೆ ಇದ್ದರೆ ಪ್ರಜಾಸತ್ತೆಗೆ ಉಳಿಗಾಲವಿಲ್ಲ, ಪ್ರಜಾಸತ್ತೆಯನ್ನು ನಡೆಸಿಕೊಂಡು ಬರುವುದಕ್ಕೆ, ಅದರ ವ್ಯಾಪ್ತಿಯಲ್ಲಿ ಎಲ್ಲರನ್ನೂ ಸೇರಿಸುವುದಕ್ಕೆ ಇದು ಅವಶ್ಯಕ. ಇದನ್ನು ಮನುಜರಾದ ನಾವು ನಡೆಸತಕ್ಕವರು ಎಂದ ಮೇಲೆ ಲೋಪದೋಷಗಳು ಬರಬಹುದು. ಈಗಲೂ ಸರ್ಕಾರದವರು ಎಷ್ಟೋ ಎಚ್ಚರಿಕೆಯಿಂದ ಮಾಡಿದ್ದಾರೆ. ಖಾಸಗೀ ಜನರ ಸಹಕಾರವೂ ಇದೆ. ಅಧಿಕಾರಿಗಳೂ ಕೂಡ ಬಹಳ ಮುತುವರ್ಜಿವಹಿಸುತ್ತಿದ್ದಾರೆ. ನೀವು ಹೇಳಿದಂತೆ ಅಲ್ಲಿ ಇಲ್ಲಿ ಲೋಪದೋಷಗಳಿಂದ ಕೂಡಿದ ತಕ್ಕ ಜನರಿದ್ದಾರೆ, ನಿಜ. ಅಂದ ಮಾತ್ರಕ್ಕೇ ಅವರೆಲ್ಲ

ರನ್ನೂ ದೇಶಬಿಟ್ಟು ಓಡಿಸಿಬಿಡುವುದಕ್ಕಾಗುವುದಿಲ್ಲ. ಅವರು ನಮ್ಮ ದೇಶದವರಾಗಿರದಿದ್ದರೆ ಓಡಿಸಬಹುದಾಗಿತ್ತು. ಆದ್ದರಿಂದ ದೇಶದಲ್ಲಿರತಕ್ಕ ಯಾವ ಒಬ್ಬ ವ್ಯಕ್ತಿಯನ್ನೂ ನಾವು ನಿರಾಕರಿಸುವ ಹಾಗಿಲ್ಲ. ಏನಿದ್ದರೂ ಅತನನ್ನು ಪರಿವರ್ತನೆ ಮಾಡಬೇಕು, ಅಷ್ಟೆ. ಒಳ್ಳೆಯವನಾಗಿದ್ದರೆ ಆತನನ್ನು ಚೆನ್ನಾಗಿ ಉಪಯೋಗಿಸಿಕೊಳ್ಳಬೇಕು, ಕೆಟ್ಟವನಾಗಿದ್ದರೆ ಆತನ ಕೆಟ್ಟ ನಡತೆಯನ್ನು ತಿದ್ದಬೇಕು. ಇದುವರೆಗೂ ಸರಿಯಾಗಿ ಕಾರ್ಯವಾಗದೆ ಹೋದರೂ ನಾವು ಅನುಸರಿಸಿರುವ ನೀತಿ ಸರಿಯಾಗಿಲ್ಲವೆಂದು ಯಾರೂ ಹೇಳಿಲ್ಲ. ನಾವು ಎಷ್ಟೇ ತಿದ್ದುಪಡಿಮಾಡಿ re-orientation ಮಾಡಿದರೂ ಕಾರ್ಯತಃ ಮುಂದುವರಿಯುವುದು ಕಷ್ಟವಿದೆ. ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ಕುರಿ ಸಾಕುವ ಕ್ಷೇತ್ರಗಳನ್ನು ಏರ್ಪಡಿಸಿದೆವು. 25 ವರ್ಷಗಳಾದರೂ ಹತ್ತು ಕುರಿಗಳು ಕೂಡ ಅದರಿಂದ ಜಾಸ್ತಿಯಾಗಲಿಲ್ಲ. ಇದೆಲ್ಲಾ ಹಿಂದಿನ legacy !! ಅದಕ್ಕೆ ಕಾರಣಗಳೆಲ್ಲಾ ಹಿಂದಿವೆ. ಆ ತಪ್ಪನ್ನು ಈಗ ನಮ್ಮ ಮೇಲೆ ಹೊರಿಸಬೇಡಿ. ಈಗ ಜಾಣತನವೇನೆಂದರೆ ಅದನ್ನೇ ಹೊಸ ವಾತಾವರಣಕ್ಕೆ ಅನುಗುಣವಾಗಿ ತಿರುಗಿಸಿಕೊಂಡು ಅದರ ಉಪಯೋಗ. ಪ್ರಯೋಜನ ಸಾಮಾನ್ಯ ಪ್ರಜೆಗಳಿಗೆ ಲಭಿಸುವಂತೆ ಮಾಡಿಕೊಳ್ಳಬೇಕು ಅಷ್ಟೆ. ಅದರ ಉದ್ದೇಶ ಒಳ್ಳೆಯದಿರಬಹುದು. 1929ನೆಯ ಇಸವಿಯಿಂದ ಇಲ್ಲಿಯವರೆಗೂ ಯಾರೊಬ್ಬರೂ ಇದನ್ನು ನೋಡಲಿಲ್ಲ. ನಾವೂ ಟೀಕೆ ಮಾಡಿದ್ದೂ ಮಾಡಿದ್ದೇ !! ಏನೂ ಆಗಲಿಲ್ಲ. ಶ್ರೀ ವರ್ಾ ಗುಂಡಪ್ಪಗೌಡರಾದವರೋ ಹಿಂದೆ ನಾವು ಇವುಗಳನ್ನು ಎಷ್ಟೇ ಮಾಡಬೇಕೆಂದರೂ ಎಷ್ಟೋ ಅಡಚಣೆಗಳಿದ್ದವೆಂದು ಹೇಳಿದರು. ಅವರ ಮಾತನ್ನು ಒಪ್ಪುತ್ತೇನೆ. ಜನಾಬ್ ಇಮಾಂರವರು ಆ ಅಂಶವನ್ನು ಕೂಡ ಮನಗಾಣಲಿಲ್ಲ. ಯಾರಿಗೆ ಧೈರ್ಯವಿದೆಯೋ ಅವರು ಮಾತ್ರ ಮನಗಾಣುತ್ತಾರೆ. ಆಗಿನ ಸರ್ಕಾರದ ಆಡಳಿತದ ಪದ್ಧತಿಯಿಂದ ಇದು ಸಾಧ್ಯವಾಗಲಿಲ್ಲವೆಂದು ಅವರು ಹೇಳಿದರು. ಆದ್ದರಿಂದ ಜನಾಬ್ ಇಮಾಂರವರು ಮಾಡಿದ್ದು ಸರಿಯಲ್ಲ. ಹಾಗಾದರೆ ಪ್ರಜಾಸತ್ತೆಯೇ ಎಂದಿಗೂ ಬರುವುದಿಲ್ಲ. ಆದ್ದರಿಂದ, ಪ್ರಜಾಸತ್ತೆ ಬೇಕು, ಬೇಕು ಎಂದು ಹೇಳುತ್ತಿದ್ದುದು ಈಗ ಬಂದಿದೆ. ಇನ್ನದನ್ನು ಉಳಿಸುವುದು ಅಥವಾ ಅಳಿಸುವುದು ಎಲ್ಲರಿಗೂ ಸೇರಿದೆ. ಆದ್ದರಿಂದ ನಾನು ಜನಾಬ್ ಇಮಾಂರವರಲ್ಲಿ ಪ್ರಾರ್ಥನೆ ಮಾಡುವುದಿಷ್ಟೆ. ಪ್ರಜಾಸತ್ತೆ ಉಳಿಯಬೇಕಾದರೆ ಎಲ್ಲರೂ ಒಂದು ರಚನಾತ್ಮಕ ಮಾರ್ಗದಲ್ಲಿಯೇ ನಡೆಯಬೇಕು. ಬರೀ ವಿನಾಶಕಾರಕವಾದ ಟೀಕೆಗಳಿಂದ ಪ್ರಜಾಸತ್ತೆಗೆ ಲೋಪಬರುತ್ತದೆ ಅಷ್ಟೆ. ಆದ್ದರಿಂದ ಪ್ರಜಾಸತ್ತೆಗೆ ಏಟು ಬಡಿಯದ ರೀತಿಯಲ್ಲಿ ರಚನಾತ್ಮಕ ಟೀಕೆಗಳನ್ನು ಅವರು ಮಾಡಲಿ, ಅಷ್ಟೆ

ಜನಾಬ್ ಜೆ. ಮಹಮದ್ ಇಮಾಂರವರು.—On a point of personal explanation, Sir. ರಚನಾತ್ಮಕ ಟೀಕೆಯನ್ನೇ ನಾನು ಮಾಡಿರುವುದು ವಿನಾಶಕಾರಕವಾದ ಟೀಕೆಯೇನೂ ಮಾಡಿಲ್ಲ. ಹೀಗೆ ಹೇಳುವುದು ಉಚಿತವಲ್ಲ, ಮತ್ತು ಸಾಧುವಲ್ಲ. ಎಂದು ಹೇಳಬೇಕಾಗಿದೆ.

ಶ್ರೀ ಟಿ. ಮರಿಯಪ್ಪನವರು.—ಅಂಕಿ ಅಂಶಗಳ ಪ್ರಕಾರ ಮೈನರ್ ಕೆರೆಗಳ ಜೀರ್ಣೋದ್ಧಾರ ಕಾರ್ಯವನ್ನು ಜಾಸ್ತಿಯಾಗಿ ಮಾಡಲಾಗಿದೆ. ಹಿಂದೆ ಮಾಡಿರುವುದಕ್ಕಿಂತ ಹೆಚ್ಚಾಗಿ ಕೆಲಸ ನಡೆದಿದೆ. 1943–44ರಲ್ಲಿ ಪ್ರಾರಂಭವಾದ ಆಹಾರದ ಸಬ್‌ಸಿಡಿಯು ಎಲ್ಲಾ ಸೇರಿ 7 ಕೋಟಿ ರೂಪಾಯಿಗಳು ನಷ್ಟವಾಗಿದೆ. ಇದಕ್ಕೆ ಅವರು ಎಷ್ಟು ಜವಾಬ್ದಾರರೆಂದು ವಿಮರ್ಶೆ ಮಾಡಿಕೊಂಡರೆ ಅವರಿಗೇ ಅರ್ಥವಾಗುತ್ತದೆ. ಆದ್ದರಿಂದ ಹಿಂದಿನಿಂದ ಬಂದಿರುವುದನ್ನು ಸರಿಪಡಿಸುವುದಕ್ಕೆ ಕಾಲಾವಕಾಶಬೇಕು. ಅದಕ್ಕಾಗಿ ಹೊಸ ಸನ್ನಿವೇಶಕ್ಕೆ ತಕ್ಕಹಾಗೆ ನೀತಿಯನ್ನು ಬದಲಾಯಿಸಿದ್ದೇವೆ. ಆದ್ದರಿಂದ ಶಂಕೆಪಡುವುದು ಸರಿಯಲ್ಲ. ದೇಶದಲ್ಲಿ ಆರ್ಥಿಕ ದುರವಸ್ಥೆ, ಡಿವ್ಯಾಲ್ಯುಯೇಷನ್ ಬಂದಿದೆ. ಹಾಗಿರುವಾಗ ಎಷ್ಟು ಮಟ್ಟಿಗೆ ಪರಿಸ್ಥಿತಿಗೆ ಸರಿಯಾಗಿ ಹೊಂದಿಕೊಂಡು ಹೋಗಬೇಕೆಂಬುವನ್ನು ಯೋಚನೆಮಾಡಬೇಕು. ಅದ್ದರಿಂದಲೇ ಮಹಾರಾಜರು ತಮ್ಮ ಭಾಷಣವನ್ನು ಎಲ್ಲವುಸರಿ ಹೊಂದುವಹಾಗೆ ಮಾಡಿದ್ದಾರೆ. ನಿಜವಾಗಿಯೂ ಬರೀ quantitative expansion ನೀತಿಯಿಂದಲೇ ಯಾರೂ ತೃಪ್ತಿ ಪಡಬಾರದು. 3 ಲಕ್ಷ ಎಕರೆಯನ್ನು ಗ್ರಾಮದ ಹಿಡುವಳಿಗೆ ಕೊಟ್ಟಿದ್ದಾರೆ. qualitative ಆಗಿ ಸಂಪೂರ್ಣ ಸಹಾಯ ಇರಬೇಕು. ಆದ್ದರಿಂದ ಆ ದೃಷ್ಟಿಯಿಟ್ಟು ಸರ್ಕಾರದ ನೀತಿಯನ್ನು ವಿವರಿಸಿದ್ದೇವೆ. ಆ ನೀತಿಗೆ ಒಪ್ಪಿಗೆಯಿಲ್ಲವೆಂದು ಖಚಿತವಾಗಿ ಹೇಳಬಹುದಾಗಿತ್ತು. ಆದರೆ ಯಾರೂ ಅದಕ್ಕೆ ಬೇರೊಂದು ಸೂಕ್ತ ಮಾರ್ಗವನ್ನು ಸೂಚಿಸಲಿಲ್ಲ. ಅಂತೂ ವಿರೋಧಮಾಡಬೇಕೆಂಬ ಅಭಿಲಾಷೆಯಿಂದ ಮಾತ್ರ ವಿರೋಧಿಸಿದ್ದಾರೆಂದು ತಿಳಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎಚ್. ಸಿದ್ದಯ್ಯನವರು (ರೆವೆನ್ಯೂ ಮತ್ತು ಎಕ್ಸೈಜ್ ಸಚಿವರು).—ಅಧ್ಯಕ್ಷರೇ, ವೇಳೆಯಿಲ್ಲದ್ದರಿಂದ ದೀರ್ಘಭಾಷಣ ಮಾಡುವುದಕ್ಕೆ ಶಕ್ಯವಿಲ್ಲ. ನನಗೆ ಸಂಬಂಧಪಟ್ಟ ಇಲಾಖೆಗಳ ವಿಚಾರದಲ್ಲಿ ಟೀಕೆ ಮಾಡಿರುವುದಕ್ಕೆ ಮಾತ್ರ ಒಂದೆರಡು ಮಾತುಗಳನ್ನು ಉತ್ತರವಾಗಿ ನಾನು ತಿಳಿಸಬಯಸುತ್ತೇನೆ. ಮಾನ್ಯ ಮಾಜಿ ಮಂತ್ರಿಗಳಾದ ಶ್ರೀ ಎಲ್. ಸಿದ್ದಪ್ಪನವರು ಬಹುಶಃ ಎರಡು ಇಲಾಖೆಗಳಿಗೆ ಸಂಬಂಧಪಟ್ಟ ವಿಚಾರ ಅವರಿಗೆ ಹೊಸದಾಗಿ ಕಂಡುದರಿಂದ, ಅದನ್ನು ಸ್ವಲ್ಪ ವಿವರಿಸಿ ಪ್ರಸ್ತಾಪಿಸಿದರೆಂದು ಕಾಣುತ್ತದೆ. ನ್ಯಾಷನಲ್ ಟ್ರಾನ್ಸ್‌ಪೋರ್ಟ್ ಎಂಬ ರೋಡ್ ಟ್ರಾನ್ಸ್‌ಪೋರ್ಟ್ ವಿಚಾರದಲ್ಲಿ ಶಂಕೆ ಪಡುವುದಕ್ಕೆ ಕಾರಣವೇನೆಂದರೆ ಅದು ಪ್ರಾರಂಭವಾಗಿರುವುದು 1948ನೆಯ ಸೆಪ್ಟೆಂಬರಿನಲ್ಲಿ. ಪ್ರಾರಂಭವಾದಾಗಿನಿಂದ ಅನೇಕರು ಅದರಿಂದ ಸುಖ ಪಟ್ಟರು. ಖಾಸಗಿ ಬಸ್ಸುಗಳಿಗಿಂತ ಜಾಸ್ತಿಯಾಗಿ ಸರ್ಕಾರದವರು ಅನುಕೂಲತೆಯನ್ನು ಕಲ್ಪಿಸಿ ಚೆನ್ನಾಗಿ ನಡೆಸಿದರೆ ಅದು ಲಾಭದಾಯಕವಾದ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವೇ ಎಂದು ಟೀಕೆ ಪ್ರಾರಂಭಿಸಿದರು. ಮೊದಲನೆಯ ವರ್ಷ 18 ಲಕ್ಷ ರೂಪಾಯಿಗಳ ಬಂಡವಾಳ ಹಾಕಿದ್ದರಲ್ಲಿ ಶೇಕಡ 18ರಷ್ಟು ಲಾಭ ಬಂದಿದೆ. ಆದರೆ ಇಲ್ಲಿಗೇ ನಿಲ್ಲಿಸಿದರೆ ಶಂಕೆ ಮುಂದುವರಿಯಬಹುದು. ಅದು ಸರಿಯಲ್ಲ. ಮೊದಲನೆಯಸಾರಿ, 120 ಬಸ್ಸುಗಳನ್ನು ಕೊಂಡು ಅನಂತರ ಇನ್ನೂ 30 ಬಸ್ಸುಗಳನ್ನು ಕೊಂಡಮೇಲೆ ನಿಲ್ಲಿಸುವುದಿಲ್ಲ, ಮುಂದುವರಿಸುವುದಕ್ಕೆ ಸರ್ಕಾರದವರು ಯೋಚನೆಮಾಡಿದ್ದಾರೆ ಎಂಬ ಅಂಶ ವ್ಯಕ್ತವಾಗುತ್ತದೆಯೆಂದು ತಿಳಿಸಿದರೆ ಸಾಕಾಗಿದೆ. ಈ ಸಂದರ್ಭದಲ್ಲಿ ಈಗತಾನೆ ಎರಡನೆಯ ಭಾಗದ ಪ್ರಶ್ನೋತ್ತರಗಳ ಪಟ್ಟಿಯು ಬಂದಿದೆ. ಅದರಲ್ಲಿ 30ನೆಯ ಪ್ರಶ್ನೆಯಲ್ಲಿ ಉತ್ತರವು ಅಡಕವಾಗಿದೆ. ಆ ಪ್ರಶ್ನೆ ಬಂದಾಗ ಉಪಪ್ರಶ್ನೆಗಳ ಸುರಿಮಳೆಯಾಗುತ್ತದೆಂಬ ಭಾವನೆಯಿರುವುದರಿಂದ ಹೆಚ್ಚಾಗಿ ಹೇಳುವುದಿಲ್ಲ. ಆದರೆ ಇನ್ನೂ ಹೆಚ್ಚಾಗಿ ಬಸ್ಸುಗಳನ್ನಿಟ್ಟು ರಾಷ್ಟ್ರೀಕರಣವನ್ನು ಬೇಗ ಸಂಪೂರ್ಣವಾಗಿ ಮಾಡುವುದನ್ನು ಪಡೆದಿರುವುದಕ್ಕೆ

ಕಾರಣ ಹಣದ ಕೊರತೆ ಒಂದೇ ಅಲ್ಲ. ಶ್ರೀ ಎಚ್. ಬಿ. ಗುಂಡಪ್ಪಗೌಡರೂ ಕೂಡ ಸೂಕ್ಷ್ಮವಾಗಿ ಈ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. ಅದರೆ, ಎರಡನೆಯ ವಿಚಾರ ಅನೇಕರಿಗೆ ತಿಳಿದಹಾಗೆ ಗಾಡಿಗಳು ಹೊರದೇಶದಿಂದ ಬರಬೇಕು. ಈಗ ಶೇಕಡ 35ರಿಂದ 40ರ ವರೆಗೆ ತೆರಿಗೆಯಿರುವುದರಿಂದ ಅಷ್ಟು ದುಡ್ಡನ್ನು ಕೊಟ್ಟು ಕೊಂಡುಕೊಳ್ಳುವುದರಲ್ಲಿ ಬುದ್ಧಿವಂತಿಕೆಯಿದೆಯೆ ಎಂಬುದನ್ನು ಯೋಚನೆ ಮಾಡಬೇಕು. ಎಲ್ಲಕ್ಕಿಂತ ಮಿಗಿಲಾಗಿ ಸುವ್ಯವಸ್ಥಿತವಾಗಿ, ಲಾಭದಾಯಕವಾದ ರೀತಿಯಲ್ಲಿ ಕೆಲಸ ಕಾರ್ಯ ನಡೆಯಬೇಕೆಂಬ ದೂರಾಲೋಚನೆಯಿಂದ ಈ ಕೆಲಸ ಸ್ವಲ್ಪ ನಿಧಾನವಾಗಿದೆಯೇ ಹೊರತು ಮತ್ತೆ ಬೇರೆ ಅಲ್ಲ ಎಂದು ತಿಳಿಸಬೇಕಾಗಿದೆ. ಇಷ್ಟೇ ಅಲ್ಲ ಈ ವಿಚಾರವನ್ನು ನಿಲ್ಲಿಸದೆ ಮುಂದುವರಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಸಲಹೆ ಮಾಡಿ, ನಾವೂ ಅವರೊಡನೆ ಸಹಕರಿಸಿ ಕೆಲಸ ಮಾಡಿ ಮುಂದುವರಿಸಬೇಕೆಂದು ತಕ್ಕ ಏರ್ಪಾಡು ನಡೆದಿವೆ.

ಎರಡನೆಯದಾಗಿ, ಪಾನನಿರೋಧ ವಿಚಾರದಲ್ಲಿ ಒಂದೆರಡು ವಿಚಾರ ಹೇಳಿದ್ದಾರೆ. ಕೆಲವು ಶತಮಾನದಿಂದಲೂ ಪಾನನಿರೋಧ ಮಾಡಬೇಕೆಂದು ಎಲ್ಲೆಲ್ಲೂ ಪ್ರತಿನಿಧಿಗಳು ಒಂದೇ ಸಮನಾಗಿ ಹೇಳಿದ್ದಾರೆ. ಶಾಸನ ಸಭೆಗಳಲ್ಲಿಯೂ ಕೂಡ ಒತ್ತಾಯ ಮಾಡಿದ್ದಾರೆ. ಪಾನನಿರೋಧವು ಮೊದಲು ಮೂರು ಜಿಲ್ಲೆಗಳಲ್ಲಿ ಜಾರಿಗೆ ಬಂದು ಅರ್ಧ ಕೋಟಿ ರೂಪಾಯಿಗಳು ನಷ್ಟವಾಯಿತು, ಆದಾಗ್ಯೂ ಕೂಡ ಜನರ ಹಿತದೃಷ್ಟಿಯಿಂದ, ಆರೋಗ್ಯ ದೃಷ್ಟಿಯಿಂದ ಈಗಿನ ಸರ್ಕಾರ ಅದನ್ನು ಜಾರಿಗೆ ಕೊಟ್ಟಿದೆ. ಅಲ್ಲದೆ, ಹೋದ ವರ್ಷ ಬಾಕಿ ಎರಡು ಜಿಲ್ಲೆಗಳಲ್ಲೂ ನಿರೋಧಿಸಲಾಯಿತು. ಈ ರೀತಿ ಎರಡು ವರ್ಷಗಳಲ್ಲಿ 5 ಜಿಲ್ಲೆಗಳಲ್ಲಿ ಜಾರಿಗೆ ಬರುವಹಾಗೆ ಮಾಡಿದೆ. ಮುಂದುವರಿಸಲು ಏನಾಗಬೇಕೆಂದು ಹೇಳುವುದಕ್ಕೆ ಮುಂಚೆ ಮದ್ರಾಸ್ ಮುಂತಾದ ಪ್ರಾಂತಗಳಲ್ಲಿ ಯಾವ ರೀತಿ ಕೆಲಸ ಕಾರ್ಯ ನಡೆದು ಸ್ವಲ್ಪ ಕಳ್ಳಬಟ್ಟಿ ಇಳಿಸುವುದು ಇತ್ಯಾದಿ ಪ್ರಸಂಗಗಳು ತಲೆದೋರಿದ್ದರಿಂದ ಅದರ ಅನುಭವವನ್ನೂ ಉಪಯೋಗಿಸಿಕೊಂಡಿವೆ. ಪ್ರಜೆಗಳ ಆರೋಗ್ಯ ದೃಷ್ಟಿಯಿಂದ ಒಂದು ಸುವ್ಯವಸ್ಥೆ ಮಾಡಿ ಮುಂದುವರಿಸಬೇಕೆಂಬ ಸದುದ್ದೇಶದಿಂದಲೇ ಮುಂದೆಯೂ ಸಹ ಮುಂದುವರಿಸಿ, ಜಾರಿಗೆ ಕೊಡಬೇಕೆಂದಿದ್ದೇವೆಂದು ಹೇಳಿದರೆ ಸಾಕಾಗಿದೆ. ಇಷ್ಟೇ ಅಲ್ಲ. ಇದನ್ನು ಸರಿಯಾದ ರೀತಿಯಲ್ಲಿ ಕ್ರಮ ಪಡಿಸಿ ಕಳ್ಳಬಟ್ಟಿಯನ್ನು ನಿಲ್ಲಿಸಬೇಕೆಂದು ಬದ್ಧ ಪ್ರತಿಜ್ಞರಾಗಿ ಮೊನ್ನೆತಾನೆ ಸರ್ಕಾರದವರು ಒಂದು ವಿಶೇಷ ಸಿಬ್ಬಂದಿಯನ್ನು ಕೂಡ ಏರ್ಪಡಿಸಲು ಲಕ್ಷಾಂತರ ರೂಪಾಯಿ ಮಂಜೂರು ಮಾಡಿದ್ದಾರೆ. ಪೋಲೀಸ್ ಇಲಾಖೆಗೇ ಈ ವ್ಯವಸ್ಥೆಯನ್ನೂ ವಹಿಸಿ ಒಂದು ರೀತಿಯಲ್ಲಿ ಆ ಕೆಲಸ ನಡೆಯುವುದಕ್ಕೆ ಏನು ಏರ್ಪಾಡು ಆಗಬೇಕೋ ಅದನ್ನು ಮಾಡಲು ಈಗ ನಾವು ಆಜ್ಞೆ ಕೊಟ್ಟಿದ್ದೇವೆಂದು ಹೇಳಬಹುದು.

ಆ ಮೇಲೆ ಹಿಂದಿನ ಸರ್ಕಾರದವರು ಮಾಡದೆಯಿರುವ ಕೆಲವು ಅಂಶಗಳನ್ನು ಸಹ ನಾವು ಕೈಕೊಂಡಿದ್ದೇವೆಂದು ಮಾಜಿ ಮಂತ್ರಿಗಳು ಹೇಳುವುದು ಸಂತೋಷ ಪಡುವ ವಿಚಾರ. ಶ್ರೀ ಎಚ್. ಬಿ. ಗುಂಡಪ್ಪಗೌಡರು ಇನ್ನೊಂದು ವಿಚಾರ ಹೇಳಿದರು.

It is really very gratifying and I am really thankful to him. On behalf of Government, I express my gratitude to him.

ಅಲ್ಲದೆ, ನಿನ್ನೆ ಸಾಯಂಕಾಲ ಶ್ರೀ ಗುಂಡಪ್ಪಗೌಡರು ಭಾಷಣಮಾಡುತ್ತಾ ಈ ರೀತಿಯಾಗಿ ತಿಳಿಸಿದ್ದಾರೆ.—

"ಹಿಂದೆ ಸರ್ಕಾರದವರು ಇಂತಹ ಸಮಿತಿಗಳನ್ನು ಮಾಡಬೇಕಾದರ ಹೆದರುತ್ತಿದ್ದರು. ಏನು ಕ್ರಾಂತಿಕಾರಕ ಬದಲಾವಣೆಗಳನ್ನು ಸೂಚಿಸುತ್ತಾರೋ ಏನೊ ಎಂದು ಹೆದರುತ್ತಿದ್ದರು. ಆದರೆ ಕಾಂಗ್ರೆಸ್ ಸರ್ಕಾರದವರು ಇಂತಹ ಸಮಿತಿಗಳನ್ನು ರಚನೆ ಮಾಡಿದರು, ಸಂತೋಷ. ಈಗಿನ ಸರ್ಕಾರದವರು ಧೈರ್ಯಮಾಡಿ ಭೂಕಂದಾಯದ ಪರಿಶೀಲನಾ ಸಮಿತಿಯನ್ನು ರಚನೆ ಮಾಡಿದ್ದಾರೆ, ಸಂತೋಷ."

ಇಷ್ಟು ಸರ್ಟಿಫಿಕೇಟ್ ಕೊಟ್ಟು ಕೆಲಸ ಚೆನ್ನಾಗಿ ನಡೆಯುತ್ತಿದೆಯೆಂದು ಅವರು ಹೇಳಿರುವಾಗ ಅದರ ಮೇಲೆ ಹೆಚ್ಚು ಮಾತನಾಡುವುದು ಯುಕ್ತವಲ್ಲ.

ಇನ್ನೊಂದು ವಿಚಾರವನ್ನು ಶ್ರೀ ಎಲ್. ಸಿದ್ಧಪ್ಪನವರು ಹೇಳಿದ್ದಾರೆ, ಮಲೆನಾಡಿಗೆ ಬಂದಾಗ ಮಂತ್ರಿಗಳು ಭರವಸೆಯನ್ನು ನಾನಾ ರೀತಿಯಾಗಿ ಕೊಟ್ಟರು ಎಂದು. ಅದರ ಅಭಿವೃದ್ಧಿ ವಿಚಾರದಲ್ಲಿಯೂ, ಡಿ. ಡಿ. ಟಿ. ಇತ್ಯಾದಿ ವಿಚಾರದಲ್ಲಿಯೂ ಮಾನ್ಯ ಸಚಿವರಾದ ಶ್ರೀ ಸಿದ್ಧಲಿಂಗಯ್ಯನವರು ಅಪ್ಪಣೆ ಕೊಡಿಸುತ್ತಾರೆ.

ಶ್ರೀ ಟಿ. ಸಿದ್ಧಲಿಂಗಯ್ಯನವರು (ವಿದ್ಯಾ ಮತ್ತು ಜನಾರೋಗ್ಯ ಸಚಿವರು).—ಕೆಲವು ಮಾನ್ಯ ಸ್ನೇಹಿತರ ಅಭಿಪ್ರಾಯದಲ್ಲಿ quantitative educationಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಂತೆ ಕಾಣುತ್ತದೆ. ಆದರೆ ಇದರಲ್ಲಿ ಸರ್ಕಾರಕ್ಕೆ ಹೆಚ್ಚು ನಂಬಿಕೆ ಇಲ್ಲ. ಎಲ್ಲೆಲ್ಲಿ ಈಗ ಯೋಜನೆಗಳು ಜಾರಿಯಲ್ಲಿವೆಯೋ ಅಲ್ಲಿ ಕೆಲವು ಕಡೆ ವಿದ್ಯಾರ್ಥಿಗಳಲ್ಲಿ ಮತ್ತೆ ಕೆಲವು ಕಡೆ ಉಪಾಧ್ಯಾಯರುಗಳಲ್ಲಿ. ಆದಕಾರಣ, ಈಗ ಈ ಯೋಜನೆಗಳು ಜಾರಿಯಲ್ಲಿರುವ ಕಡೆ qualitative education ಕಡೆಗೆ ಹೆಚ್ಚು ಗಮನ ಕೊಟ್ಟು ಈಗಿರುವ ನ್ಯೂನತೆಗಳನ್ನು ಸರಿಪಡಿಸಬೇಕೆಂದು ಸರ್ಕಾರದವರ ಉದ್ದೇಶ.

ಎರಡನೆಯದಾಗಿ, ಆರೋಗ್ಯ ಇಲಾಖೆಯ ವಿಚಾರದಲ್ಲಿ ಹೇಳುತ್ತಾ ಶ್ರೀಮಾನ್ ಸಿದ್ಧಪ್ಪನವರು ಡಿ.ಡಿ.ಟಿ. ಸರಬರಾಯಿ ವಿಚಾರ ಹೇಳಿದರು. ನಾನು ಮೊನ್ನೆ ಶಿವಮೊಗ್ಗ ಜಿಲ್ಲೆಗೆ ಹೋದಾಗ ಜನರೂ ಡಿ.ಡಿ.ಟಿ. ವಿಚಾರ ಹೇಳಿದರು. ಸಂಸ್ಥಾನಕ್ಕೆ ಒಟ್ಟು ಹಂಚಿರುವ 81 ಯೂನಿಟ್ಟುಗಳಲ್ಲಿ ಅವರ ಜಿಲ್ಲೆ ಒಂದಕ್ಕೇ 30 ಯೂನಿಟ್ಟುಗಳನ್ನು ಕೊಟ್ಟಿದ್ದಾರೆ.

ಶ್ರೀ ಎಲ್ ಸಿದ್ದಪ್ಪನವರು.—ನಾನು ಡಿ. ಡಿ. ಟಿ. ವಿಚಾರ ಹೇಳಲಿಲ್ಲ. ಶ್ರೀಮಾನ್ ಸಿದ್ದಯ್ಯನವರು ಹೇಳಿದರು.

ಶ್ರೀ ಟಿ. ಸಿದ್ದಲಿಂಗಯ್ಯನವರು.—ಯಾರೇ ಹೇಳಲಿ, ಅದರಲ್ಲಿರುವ ವಸ್ತು ಭೇದವೇನೂ ಇಲ್ಲ. ಸಾರ್ವತ್ರಿಕ ಆರೋಗ್ಯದೃಷ್ಟಿಯಿಂದ ಎಲ್ಲಿ, ಏನೂ ಮಾಡಿದರೆ ಉಪಯೋಗವಾಗುತ್ತದೆಂಬುದನ್ನು ನೋಡಿ ಮಾಡಲಾಗುತ್ತೆ. ಇಷ್ಟು ಮಾತ್ರ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್. ಸಿ. ದಾಸಪ್ಪನವರು (ಹಣಕಾಸಿನ ಮತ್ತು ಕೈಗಾರಿಕೆ ಸಚಿವರು).—ಅಧ್ಯಕ್ಷ ಮಹಾಶಯರೆ, ಈಗ ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳಲು ಇಷ್ಟಪಡುವುದಿಲ್ಲ. ಮೊದಲನೆಯದಾಗಿ ನಮ್ಮ ಸಂಸ್ಥಾನದ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಜನಾಬ್ ಇಮಾಂರವರು ಒಂದು ಅನುಮಾನವನ್ನು ವ್ಯಕ್ತಪಡಿಸಿದರೆಂದು ಕೇಳಿದೆ. ಅವರು ಮಾತನಾಡುವಾಗ ನಾನು ಸಭೆಯಲ್ಲಿರಲಿಲ್ಲ. ಆ ಶಂಕೆಗೆ ಎಳ್ಳಷ್ಟೂ ಎಡೆಯಿಲ್ಲವೆಂದು ಹೇಳಬೇಕಾಗಿದೆ. ನಮ್ಮ ಹಣಕಾಸಿನ ಪರಿಸ್ಥಿತಿ ಭದ್ರವಾಗಿದೆ ಮತ್ತು, ಸರಿಯಾದ ತತ್ವಗಳ ಮೇಲೆ ನಿಂತಿದೆ,

ಇನ್ನು ಎರಡು ಮೂರು ದಿನಗಳು ಕಾದು ನೋಡಿದರೆ ಅವರಿಗೆ ಇದು ಪ್ರತ್ಯಕ್ಷವಾಗಿ ಕಾಣುತ್ತದೆ. ಒಂದು ವಿಚಾರ ಮಾತ್ರ ಹೇಳಬಲ್ಲೆ, ಯಾವ ಸಂಸ್ಥಾನ ಪ್ರಗತಿ ದಾಯಕವಾದ ಮಾರ್ಗದಲ್ಲಿ ಮುಂದೆ ಹೋಗುತ್ತದೆಯೋ ಅಲ್ಲಿ, ಯಾವ ಸಂಸ್ಥಾನದಲ್ಲಿ ವರಮಾನವನ್ನು ಹೆಚ್ಚುಮಾಡಿಕೊಳ್ಳಲು ಅವಕಾಶ ಕಡಿಮೆಯಾಗಿರುತ್ತದೆಯೋ ಅಲ್ಲಿ ಹಣಕಾಸಿನ ಬಿಕ್ಕಟ್ಟು ಉಂಟಾಗುವುದು ಸ್ವಾಭಾವಿಕ. ಇದಕ್ಕಾಗಿ ಯಾವ ವಿಧದಲ್ಲಿಯೂ ಶಂಕೆ ಪಡಬೇಕಾಗಿಲ್ಲ. ಶ್ರೀಮನ್ಮಹಾರಾಜರವರ ಭಾಷಣದಲ್ಲಿ ನಾವು ಆಯವ್ಯಯದ ವಿಚಾರದಲ್ಲಿ ಸರಿಯಾದ ತತ್ವವನ್ನು ಅನುಸರಿಸುತ್ತಿದ್ದೇವೆಂಬುದನ್ನು ಹೇಳಿ ನಮ್ಮ ಸರ್ವೆ ಸಾಧಾರಣವಾದ ವಾರ್ಷಿಕ ವೆಚ್ಚವನ್ನೂ ಮತ್ತು ಹೆಚ್ಚು ಬಂಡವಾಳ ತಗಲತಕ್ಕ ಬಾಬುಗಳನ್ನೂ ಎಂದರೆ, Revenue Expenditure ಮತ್ತು Capital outlay ಇವುಗಳನ್ನು ಪ್ರತ್ಯೇಕವಾಗಿ ವಿಂಗಡಿಸಿದ್ದೇವೆಂಬುದನ್ನು ಸ್ಥೂಲವಾಗಿ ಹೇಳಿದ್ದಾರೆ. ಮುಂದೆ ಇತರ ವಿವರಗಳನ್ನು ನಾನು ಕೊಡುವವನಾಗಿದ್ದೇನೆ. ನಮ್ಮ ಮಿತ್ರರಾದ ಶ್ರೀಮಾನ್ ಇಮಾಂರವರು ಕೈಗಾರಿಕೆಗಳ ವಿಚಾರದಲ್ಲಿ ನಾವು ಯಾವ ನೀತಿಯನ್ನನುಸರಿಸಿಕೊಂಡು, ಮುಂದುವರಿಸಿಕೊಂಡು ಹೋಗುತ್ತಿದ್ದೇವೆಯೋ ಆ ನೀತಿಯನ್ನು ಮೆಚ್ಚಿದ್ದಾರೆ. ದೊಡ್ಡದೊಡ್ಡ ಕೈಗಾರಿಕೆಗಳನ್ನು ಮೈಸೂರು ಸಂಸ್ಥಾನದಲ್ಲಿ ಏರ್ಪಡಿಸಬೇಕಾದರೆ ಅದರ ಹಿನ್ನೆಲೆಯನ್ನು ಮಾನ್ಯ ಸದಸ್ಯರು, ಆದರಲ್ಲಿಯೂ ನಮ್ಮ ವಿರೋಧಪಕ್ಷದವರು. ಯೋಚನೆ ಮಾಡಬೇಕೆಂದು ಕೋರುತ್ತೇನೆ. ಈ ವಿಚಾರಗಳಲ್ಲಿ ಸುಲಭವಾಗಿ ಒಂದು ಒಪ್ಪಂದಕ್ಕೆ ಬರುವಂತೆ ಮಾಡುವುದು ಸುಲಭ ಸಾಧ್ಯವಲ್ಲ ಇದಕ್ಕೆ ಹೆಚ್ಚಿನ ಶಕ್ತಿ ಸಾಮರ್ಥ್ಯಗಳನ್ನು ವಿನಿಯೋಗಿಸಿ ಇಂತಹ ದೊಡ್ಡ ಕೈಗಾರಿಕೆಗಳಿಂದ ನಮ್ಮ ದೇಶದ ಸಂಪತ್ತನ್ನು ಹೆಚ್ಚಿಸುವುದಕ್ಕೆ ಎಷ್ಟು ಸಾಧಕವಾಗುತ್ತದೆ, ನಮ್ಮ ದೇಶದಲ್ಲಿ ಟೆಕ್ನಿಕಲ್ ಸಿಬ್ಬಂದಿ ಒದಗುವಂತೆ ಮಾಡಲು ಎಷ್ಟು ಸಾಧ್ಯವಾಗುತ್ತದೆ, ಎಂಬುದನ್ನೆಲ್ಲಾ ಈಗ ಹೇಳುವುದಕ್ಕಾಗುವುದಿಲ್ಲ, ಮುಂದೆ ಹೇಳುತ್ತೇನೆ. ಫರ್ಟಿಲೈಜರ್ಸ್ ವಿಚಾರವನ್ನು ಶ್ರೀಮಾನ್ ಕೃಷ್ಣಪ್ಪನವರು ಹೇಳಿದ್ದಾರೆ. ನಮ್ಮ ಭಾರತದಲ್ಲಿ ಯಾವುದಾದರೂ ಕೈಗಾರಿಕೆ ಯಶಸ್ವಿಯಾಗಿ ನಡೆಯುತ್ತದೆಂದು ಹೇಳುವುದಾದರೆ, ಅದು ನಮ್ಮ ಮೈಸೂರು ದೇಶದಲ್ಲಿರುವ ಈ ಫರ್ಟಿಲೈಜರ್ ಕೈಗಾರಿಕೆ ಎಂದು ಅವರು ಹೇಳಿದರು. ಅದು ನಿಜ; ಅದಕ್ಕೆ ರೈಲ್ವೆಸ್ಟೇಷನ್ ಹತ್ತಿರವಿದೆ, ವಿದ್ಯುಚ್ಛಕ್ತಿ ಸುಲಭವಾಗಿ ದೊರೆಯುತ್ತದೆ, ಟ್ರಾನ್ಸ್‌ಫಾರ್ಮರುಗಳೂ ಹತ್ತಿರವಿರುವುದರಿಂದ ಇದಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡಬೇಕಾಗಿಲ್ಲ. ಸುಣ್ಣಕಲ್ಲುಸಹ ಸುಲಭವಾಗಿ ಒದಗುತ್ತದೆ, ಇಲ್ಲದಿದ್ದರೆ ಅದಕ್ಕಾಗಿ ಎಷ್ಟೋ ಹಣ ಖರ್ಚಾಗುತ್ತಿತ್ತು, ಇದೊಂದು Composite Scheme, ಬಹಳ ಉತ್ತಮವಾದ ಯೋಜನೆ. ಇದರಿಂದ ನಮ್ಮ ಹೆಚ್ಚು ಬೆಳೆ ಬೆಳೆಯುವ ಯೋಜನೆಗೆ ಬಹಳ ಸಹಾಯವಾಗಿ ಈಗ ಪರದೇಶಗಳಿಗೆ ಹೋಗುತ್ತಿರುವ ಕೋಟ್ಯಾಂತರ ರೂಪಾಯಿ ಉಳಿತಾಯವಾಗುತ್ತದೆ. ಇಂತಹ ಕೈಗಾರಿಕೆ ಸಂಗ್ರಿ ಮತ್ತು ಆಲ್ವೆಯಲ್ಲಿ ಒಂದೊಂದಿದೆ. ಈ ಎರಡು ಕಾರ್ಖಾನೆಗಳಲ್ಲಿ ಉತ್ಪತ್ತಿಯಾಗುವುದನ್ನು ಸೇರಿಸಿದರೂ ನಮ್ಮ ದೇಶಕ್ಕೆ ಬೇಕಾಗುವಷ್ಟರಲ್ಲಿ ಹತ್ತನೆಯ ಒಂದು ಭಾಗದಷ್ಟು ಆಗುವುದಿಲ್ಲ. ಇದಕ್ಕಾಗಿ ನಾಲ್ಕು ಕೋಟಿ ಬಂಡವಾಳ ಹಾಕಬೇಕೆಂದು ಹೇಳಿದರು. ಅಷ್ಟು ಬೇಕಾಗಿಲ್ಲ ಎರಡೂವರೆ ಕೋಟಿ ಸಾಕು. Devaluation ಆಗುವುದಕ್ಕೆ ಮೊದಲು ಎರಡೂಕಾಲು ಕೋಟಿ ಅಂದಾಜಾಗಿತ್ತು ನಂತರ ನಾಲ್ಕುಕೋಟಿ ಆಯಿತು. ಆಮೇಲೆ ಆದೇಶಕ್ಕೆ ನಮ್ಮ ಜನರು ಕೆಲವರನ್ನು ಕಳುಹಿಸಿ ವ್ಯವಹಾರ ನಡೆಸಿದ ಮೇಲೆ ಎರಡೂವರೆ ಕೋಟಿ ಆಯಿತು. ಶ್ರೀಮನ್ಮಹಾರಾಜರವರ ಭಾಷಣದಲ್ಲಿ ತಿಳಿಸಿರುವಂತೆ ಇದರಲ್ಲಿ ಶೇಕಡ ಹತ್ತರಷ್ಟು ಷೇರುಗಳನ್ನು ನಾವು ತೆಗೆದುಕೊಂಡು ಭಾಗವಹಿಸಬೇಕೆಂಬ ಉದ್ದೇಶವಿದೆ.

ಗೃಹ ಕೈಗಾರಿಕೆ ಯೋಜನೆಯ ಸಂಬಂಧವಾಗಿ ಸರ್. ಎಂ. ವಿಶ್ವೇಶ್ವರಯ್ಯನವರ ಹೆಸರನ್ನು ತಂದಿರುವುದು ಮಹಾಪರಾಧವೆಂದು ಹೇಳಿದರು. ಯಾರು ನಮಗೆ ಉಪಕಾರ ಮಾಡುತ್ತಾರೋ ಅವರ ಹೆಸರನ್ನು ಸ್ಮರಿಸುವುದು ತಪ್ಪಾದರೆ ನಾವು ಈ ವಿಷಯದಲ್ಲಿ ತಪ್ಪು ಮಾಡಿದ್ದೇವೆಂದು ಒಪ್ಪಿಕೊಳ್ಳುತ್ತೇನೆ. ಅವರು ಮಾಡಿದ ಯೋಜನೆಯನ್ನು ಇಟ್ಟುಕೊಂಡು ಅವರ ನೇತೃತ್ವದಲ್ಲಿ ಅದನ್ನು ಕಾರ್ಯಗತ ಮಾಡಬೇಕೆಂಬ ಅಭಿಪ್ರಾಯ ನಮಗಿರುವಾಗ ನಾವು ಅವರ ಯೋಜನೆಯನ್ನು ಎರಡು ಜಿಲ್ಲೆಗಳಲ್ಲಿ ಪ್ರಾರಂಭ ಮಾಡುತ್ತೇವೆ, ಜಾರಿಗೆ ತರುತ್ತೇವೆಂದು ಹೇಳುವುದರಲ್ಲಿ ಯಾವ ತಪ್ಪೂ ಇಲ್ಲ, ಈ ವಿಚಾರದಲ್ಲಿ ಇನ್ನು ಹೆಚ್ಚೇನೂ ಹೇಳಬೇಕಾಗಿಲ್ಲ.

ಇನ್ನೊಂದು ವಿಚಾರ. ಹೊಸ ಕಾರ್ಯಗಳೇನನ್ನೂ ಮಾಡಿಲ್ಲವೆಂದು ಮಾನ್ಯ ಸದಸ್ಯರೊಬ್ಬರು ಹೇಳಿದರು. ಆರ್ಥಿಕ ವಿಲೀನೀಕರಣ, (Financial integration) ಯಾರು ಹೊಸ ನೀತಿಯಲ್ಲವೆಂದು ಹೇಳಿದರೋ ಅವರೇ ಇದರ ವಿಷಯವನ್ನು ಚೆನ್ನಾಗಿ ತಿಳಿದಿದ್ದಾರೆ. ಇಂಥವರು ಹೊಸ ಕಾರ್ಯವೇನೂ ಆಗಿಲ್ಲವೆಂದು ಹೇಳುವುದು ಆಶ್ಚರ್ಯವಾಗಿದೆ! ಒಂದೇ ಮಾತಿನಲ್ಲಿ ಹೇಳುತ್ತೇನೆ, ನಾವು ಈ ವಿಚಾರದಲ್ಲಿ ವ್ಯವಹಾರ ನಡೆಸುವುದಕ್ಕೆ ಹೋದಾಗ ಎಲ್ಲ ಕಡೆಗಳಲ್ಲಿಯೂ ಕೂಡ ಮೈಸೂರಿನವರು ಯಾವ ಒಪ್ಪಂದಕ್ಕೆ ಬಂದಿದ್ದಾರೋ ಆ ಒಪ್ಪಂದ ಎಲ್ಲಕ್ಕಿಂತ ಮೇಲಾಗಿದೆ ಎಂದು ಹೇಳಿದ್ದಾರೆ. ಹೀಗಿರುವಾಗ ಈ ಸರ್ಕಾರವೂ ಕೂಡ ಕೆಲವು ಉತ್ತಮ ಕೆಲಸ ಕಾರ್ಯಗಳನ್ನು ಸಾಧಿಸಿದೆ ಎಂದು ಹೇಳುವುದಕ್ಕೆ ಬದಲು ಬರೀ ಆಕ್ಷೇಪಣೆ ಮಾಡುವುದರಿಂದ ಪ್ರಯೋಜನವಿಲ್ಲ. ಒಂದು ಮಾತ್ರ ನಿಜ, ಅದೇನೆಂದರೆ ನಾವು ಮಾಡುವ ಕೆಲಸಗಳ ವಿಚಾರದಲ್ಲಿ ಪ್ರಚಾರ ಎಂದರೆ, publicity ಚೆನ್ನಾಗಿ ನಡೆಯುತ್ತಿಲ್ಲ. ನಮ್ಮ ಮಾನ್ಯ ಸ್ನೇಹಿತರು ಈಗೀಗ ಸ್ವಲ್ಪಸ್ವಲ್ಪ ಪ್ರಾರಂಭ ಮಾಡಿದ್ದಾರೆ. ಈ ಕೊರತೆ ಸರಿಹೋದರೆ ನಮ್ಮ ವಿರೋಧಪಕ್ಷದವರ ಆಕ್ಷೇಪಣೆಗಳಿಗೆ ಉತ್ತರ ಅಲ್ಲೇ ದೊರೆಯುತ್ತದೆಂದು ಹೇಳುತ್ತೇನೆ. ಆದುದರಿಂದ ನಮ್ಮ ವಿರೋಧ ಪಕ್ಷದವರಲ್ಲಿ ಇಷ್ಟು ಮಾತ್ರ ಹೇಳುತ್ತೇನೆ. ಅಲ್ಲದೆ ಶ್ರೀಮಾನ್ ಸುಬ್ರಹ್ಮಣ್ಯರವರು ತಂದಿರುವ ನಿರ್ಣಯಕ್ಕೆ ತಂದಿರುವ ತಿದ್ದುಪಡಿಗಳನ್ನು ಇಷ್ಟು ಹೇಳಿದ ಮೇಲೆ ಸೂಚಕರು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

*ಶ್ರೀ ಕೆ. ಚೆಂಗಲರಾಯರೆಡ್ಡಿಯವರು (ಮುಖ್ಯ ಸಚಿವರು) —ಮಾನ್ಯ ಅಧ್ಯಕ್ಷರೇ, ಶ್ರೀಮನ್ಮಹಾರಾಜರವರ ಭಾಷಣದ ಬಗ್ಗೆ ಅಭಿನಂದನಾ ಸೂಚನೆಯ ನಿರ್ಣಯವನ್ನು ಶ್ರೀಮಾನ್ ಸುಬ್ರಹ್ಮಣ್ಯರವರು ಈ ಸಭೆಯ ಮುಂದೆ ಮಂಡಿಸಿದ ತರುವಾಯ ಅದಕ್ಕೆ ಕೆಲವು ತಿದ್ದುಪಡಿಗಳು ಬಂದು ದೀರ್ಘವಾಗಿ ಚರ್ಚೆಯಾಗಿದೆ. ನನ್ನ ಸಹೋದ್ಯೋಗಿಗಳು ಅವರವರ ಇಲಾಖೆಗಳಿಗೆ ಸಂಬಂಧಪಟ್ಟಂಥ ಖಾತೆಗಳ ಬಗ್ಗೆ ಬಂದ ಟೀಕೆಗಳಿಗೆ ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಪುನಃ ಅದೇ ಅಂಶಗಳನ್ನು ಪ್ರಸ್ತಾಪಿಸುವುದು ಅಪ್ರಕೃತವೆಂದು ನನಗೆ ಅನ್ನಿಸುತ್ತದೆ. ನನಗೆ ಒಂದು ಭಾಸವಾಗುತ್ತದೆ. ಅದೇನೆಂದರೆ ಈ ನಿರ್ಣಯದ ಮೇಲೆ ಚರ್ಚೆ ಆಗಬೇಕು ಮತ್ತು ತಾವು ಹೇಳತಕ್ಕ ಅಭಿಪ್ರಾಯಗಳನ್ನು ಒಂದು

ರೀತಿಯಲ್ಲಿ ಸೂಚಿಸಬೇಕೆಂಬ ಒಂದೇ ಒಂದು ಉದ್ದೇಶದಿಂದ ತಾವು ಕೆಲವು ಬಾಬುಗಳ ಬಗ್ಗೆ ವಿಷಾದ ಪಡುತ್ತೇವೆ ಎಂದು ಹೇಳಿದ್ದೀರಿ. ಅದೇ ರೀತಿ ಅನೇಕ ವಿಷಾದಗಳನ್ನು ಅನೇಕ ತಿದ್ದುಪಡಿಗಳ ಮೂಲಕ ನಮ್ಮ ಮಿತ್ರರಾದ ಜನಾಬ್ ಅಬ್ದುಲ್ ರಹಮಾನ್‌ರವರು ತಂದಿದ್ದಾರೆಂದು ನನ್ನ ಅಭಿಪ್ರಾಯ. ಅವರು ಅನೇಕ ವಿಷಾದಗಳಿಂದ ಭಾಷಣವನ್ನು ಪ್ರಾರಂಭಿಸಿದರೂ ಕಡೆಗೆ ಅಭಿನಂದನೆಯಲ್ಲೇ ತಮ್ಮ ಭಾಷಣವನ್ನು ಕೊನೆಗಾಣಿಸಿದರು! ಯಾವ ಯಾವ ತಿದ್ದುಪಡಿಗಳನ್ನು ಕಳುಹಿಸಿದ್ದರೋ ಅವುಗಳನ್ನು ವಾಪಸ್ಸು ತೆಗೆದುಕೊಳ್ಳುವುದಾಗಿಯೂ ಅವರು ಅಭಿಪ್ರಾಯ ವ್ಯಕ್ತಪಡಿಸಿದರು. ಅವುಗಳನ್ನು ಏನು ಮಾಡುತ್ತಾರೋ ನೋಡಬೇಕು. ಅವರ ಭಾಷಣವು oratorical ಆಗಿದ್ದು, ಬರೀ ಸಹಕಾರ ಮನೋಭಾವ ಒಂದೇ ವ್ಯಕ್ತಪಟ್ಟು ಸಹಕಾರ ಕೇಳಿದರೆ ಕೊಡಲು ಸಿದ್ಧವಾಗಿರುವುದಾಗಿ, ತಿಳಿಸಿದ ಭಾಷಣವಾಗಿ ಮುಕ್ತಾಯವಾಯಿತೇ ಹೊರತು ಯಾವ ವಿಚಾರದಲ್ಲೂ ಹೆಚ್ಚಾಗಿ ಟೀಕೆ ಅದರಲ್ಲಿ ಕಂಡು ಬರಲಿಲ್ಲ. ಆ ರೀತಿ ಅವರು ಬರಿ regret, regret ಎಂಬುದು ರೆಕಾರ್ಡ್‌ನಲ್ಲಿ ಇರಬೇಕೆಂದು ವ್ಯಕ್ತಪಡಿಸಿದ್ದಾರೆಯೇ ಹೊರತು ಅವರ ಭಾಷಣದಲ್ಲಿ ಏನೂ ಹೇಳಲಿಲ್ಲವೆಂದು ಹೇಳಿದರೆ ಅವರ ತಿದ್ದುಪಡಿಗಳ ಬಗ್ಗೆ ಹೆಚ್ಚಾಗಿ ಹೇಳಬೇಕಾಗಿಲ್ಲವೆಂದು ನನಗೆ ತೋರುತ್ತದೆ. ಮುಖ್ಯವಾಗಿ ಟೀಕೆ ಮಾಡಿ ಮಾತನಾಡಿದವರು ಎಂದರೆ ಜನಾಬ್ ಮಹಮದ್ ಇಮಾಂರವರು, ಶ್ರೀಮಾನ್ ಗುಂಡಪ್ಪಗೌಡರು ಮತ್ತು ಶ್ರೀಮಾನ್ ಎಲ್. ಸಿದ್ದಪ್ಪನವರು, ರಾಜ ಪ್ರಮುಖರ ಭಾಷಣದ ಮೇಲೆ ಒಂದು ಅಭಿಪ್ರಾಯ ಈಗ ತಿಳಿಯಾಗಿದೆ. ಅದೇನೆಂದರೆ, ರಾಜಪ್ರಮುಖರ ಭಾಷಣ ಎಂದು ಕರೆಯಲ್ಪಡುತ್ತಾ ಇದ್ದರೂ ಸಹ ಈ ಭಾಷಣದಲ್ಲಿ ಅಡಕವಾಗಿರತಕ್ಕ ರೀತಿ ನೀತಿಗಳು ವಾಸ್ತವವಾಗಿ ಮಂತ್ರಿ ಮಂಡಲಕ್ಕೆ ಸಂಬಂಧಪಟ್ಟದ್ದು. ಈ ಭಾಷಣದಲ್ಲಿರತಕ್ಕ ಪ್ರತಿಯೊಂದು ನೀತಿಗೂ ಸರ್ಕಾರದವರು ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತಾರೆಂಬುದನ್ನು ನಾನು ಸ್ಪಷ್ಟಪಡಿಸಬೇಕಾಗಿದೆ. ಶ್ರೀಮನ್ಮಹಾರಾಜರವರ ಮೂಲಕವಾಗಿ ನಾವು ಏನೇನೋ ಹೇಳಿ ಬಿಟ್ಟು ಮಹಾರಾಜರವರಿಂದ ಕಮಿಟ್ (commit) ಮಾಡಿಸಿ, ಇದು ಮಹಾರಾಜರವರಿಂದ ಬಂದಿದೆ, ಇದನ್ನು ಟೀಕೆ ಮಾಡುವುದು ಹೇಗೋ ಏನೋ ಎಂಬ ಸಂಶಯ ಇರುವ ಪಕ್ಷದಲ್ಲಿ, ಅದನ್ನು ಸಂಪೂರ್ಣವಾಗಿ ದೂರ ಮಾಡಬಹುದೆಂಬುದನ್ನು ಹೇಳಲೇಬೇಕಾಗಿದೆ. ಇವರಲ್ಲಿ ಮಂತ್ರಿಮಂಡಲದ ಜವಾಬ್ದಾರಿ ಸಂಪೂರ್ಣವಾಗಿದೆ. ಭಾಷಣ ಮಾಡುತ್ತಾ ನಮ್ಮ ಮಿತ್ರರು ಒಂದು ಅಂಶವನ್ನು ವ್ಯಕ್ತಪಡಿಸಿದರು. ಅದೇನೆಂದರೆ, ಜನಾಬ್ ಮಹಮದ್ ಇಮಾಂರವರು ಇಂಗ್ಲೀಷಿನಲ್ಲಿ ಹೇಳಿದರು ಅದನ್ನು ಹೇಳುತ್ತೇನೆ:

"I did not find a single scheme fully implemented, a programme completed or a policy envisaged."

ಶ್ರೀಮಾನ್ ಸಿದ್ದಪ್ಪನವರು, ಹಿಂದಿನ ಮಂತ್ರಿ ಮಂಡಲ ಯಾವ ಯಾವ ಯೋಜನೆಗಳನ್ನು ಜಾರಿಗೆ ತರಬೇಕೆಂದು ಮಾಡಿತೋ ಆ ಯೋಜನೆಗಳನ್ನು ಮುಂದುವರಿಸುತ್ತಾ ಇರತಕ್ಕ ಕಾರ್ಯಕ್ರಮದಲ್ಲಿಯೂ ಸಹ ಸರಿಯಾದ ನೀತಿಯನ್ನು ಅನುಸರಿಸಿಲ್ಲ, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳಬೇಕಾದರೆ ಆ ಯೋಜನೆಗಳ ಬಗ್ಗೆ ಬಹಳ ಕ್ಷೀಣಿಸಿದ್ದೀರಿ, ಆ ಮಂತ್ರಿಮಂಡಲ ಯಾವುದನ್ನು ಜಾರಿಗೆ ತರಬೇಕೆಂದಿತ್ತೋ ಅದನ್ನೆಲ್ಲಾ ಹಿಂದಿಟ್ಟು ತಡೆದಿದ್ದೀರಿ ಎಂದು ಹೇಳಿದರು. ಬಹಳ ವಿನಯದಿಂದ ಹೇಳುತ್ತೇನೆ, ಈ ಟೀಕೆಗಳು ಉತ್ಪ್ರೇಕ್ಷೆಯಿಂದ ಕೂಡಿರುತಕ್ಕವುಗಳಾಗಿವೆ. ಇವುಗಳನ್ನು ಅಂಕಿ ಅಂಶಗಳ ಮೇಲೆ, ವಾಸ್ತವಾಂಶದ ಮೇಲೆ ರುಜುವಾತು ಮಾಡಲು ಸಿದ್ಧವಾಗಿದ್ದೇನೆ. ಇವೆರಡೂ ಕ್ಯಾಟಗಾರಿಕಲ್ ಸ್ಟೇಟ್‌ಮೆಂಟುಗಳು. ಇವುಗಳನ್ನು ರುಜುವಾತು ಮಾಡುವುದಕ್ಕೆ ಅವರು ಪ್ರಯತ್ನಪಡುತ್ತಾರೆಂದು ನಾನು ನಂಬಿದ್ದೇನೆ, ಆ ರೀತಿ ಮಾಡುವುದಕ್ಕೆ ಅಗಸೇ ವಿಫಲರಾದರೆ sportsman spirit ನಲ್ಲಿ ನಮ್ಮ ನೀತಿಯನ್ನು ಒಪ್ಪಿಕೊಳ್ಳುತ್ತಾರೆಂದು ಭಾವಿಸಿದ್ದೇನೆ.

**Sri L. SIDDAPPA.**—We have absolutely no objection if that is so.

**Sri K. CHENGALARAYA REDDY.**—Thank you very much. ನನ್ನ ಅಭಿಪ್ರಾಯ, ಇಷ್ಟೆ. ಅವರು ಮಾಡಿರತಕ್ಕ ಟೀಕೆಗಳು ಬಹಳ ಉತ್ಪ್ರೇಕ್ಷೆಯಿಂದ ಕೂಡಿದವುಗಳಾಗಿವೆ, ಅವರು ಎಷ್ಟೇ ಪ್ರಯತ್ನಪಟ್ಟರೂ ಸಮರ್ಥಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಖಡಾಖಂಡಿತವಾಗಿ ಹೇಳುತ್ತೇನೆ. ಅದನ್ನು ದೃಢಪಡಿಸುವುದಕ್ಕೆ ಸಿದ್ಧವಾಗಿದ್ದೇನೆ. ಕಾಲ, ಸನ್ನಿವೇಶ ಬಂದಾಗ ಮಾಡುತ್ತೇನೆ.

ಇನ್ನು ಕೆಲವು ಮುಖ್ಯವಾದ ಅಂಶಗಳು ಈ ಚರ್ಚೆಯಲ್ಲಿ ಹೊರಪಟ್ಟಿವೆ. ಅವುಗಳ ಬಗ್ಗೆ ಕೆಲವು ಅಂಕಿ ಅಂಶಗಳ ವಿಷಯದಲ್ಲಿ ನನ್ನ ಸಹೋದ್ಯೋಗಿಗಳು ಜವಾಬು ಕೊಟ್ಟಿದ್ದಾರೆ. ನಾನಾದರೋ ಬಹಳ ಮುಖ್ಯವಾದ ವಿಷಯಗಳ ಬಗ್ಗೆ ಸಂಕ್ಷೇಪವಾಗಿ ಪ್ರಸ್ತಾಪಿಸುತ್ತೇನೆ. ಜನಾಬ್ ಇಮಾಂರವರು ಹಿಂದೆ ಮಂತ್ರಿಗಳಾಗಿದ್ದವರು. ಆಡಳಿತದ ಜವಾಬ್ದಾರಿ, ಆಡಳಿತದ ಕಷ್ಟ, ಆಡಳಿತದಲ್ಲಿರತಕ್ಕ ತೊಂದರೆಗಳು, ಸಾಧಕ ಬಾಧಕಗಳು ಚೆನ್ನಾಗಿ ಅವರಿಗೆ ಗೊತ್ತಿದೆ ಎಂದು ನಂಬಿದ್ದೇನೆ. ಅವರು ನಾಲ್ಕು ವರ್ಷ ಮಂತ್ರಿಗಳಾಗಿದ್ದರು. ಆದ್ದರಿಂದ ಆ ಅನುಭವವನ್ನು ಮನಸ್ಸಿನಲ್ಲಿಟ್ಟುಕೊಂಡು ಆ ಹಿನ್ನೆಲೆಯಿಂದ ಮಾತನಾಡಿದ್ದರೆ ಬಹಳ ಹರ್ಷವಾಗುತ್ತಾ ಇತ್ತು. ವಿರೋಧ ಪಕ್ಷದಲ್ಲಿರುವುದರಿಂದ "It is the duty of the Opposition to oppose." ಎಂಬ ಗುರಿಯನ್ನಿಟ್ಟುಕೊಂಡು ಬಹಳಮಟ್ಟಿಗೆ ಮಾತನಾಡಿದ್ದಾರೆಂದು ನನಗೆ ಅನ್ನಿಸುತ್ತದೆ. ಗುಣಾವಗುಣಗಳ ಮೇಲೆ ಅವರು ಎಲ್ಲಾ ವಿಷಯಗಳನ್ನೂ ಆಲೋಚನೆ ಮಾಡಿ ಮಾತನಾಡಿದ್ದರೆ ಪ್ರಾಯಶಃ ಈಗ ಅವರು ಯಾವ ರೀತಿ ಮಾತನಾಡಿದರೋ ಆರೀತಿ ಮಾತನಾಡುತ್ತಿರಲಿಲ್ಲವೆಂದು ಹೇಳಲು ನಾನು ಸಾಹಸಪಡುತ್ತೇನೆ. ಒಂದು ವಿಚಾರ ಹೇಳಿದರು, Directive Principles ಮತ್ತು Fundamental Rights ಇವು ಹೊಸ ಕಾನೂನಿನಲ್ಲಿ ಏನು ಇವೆಯೋ ಇವುಗಳನ್ನು ಮೊಟಕು ಮಾಡುವುದಕ್ಕೆ ಈ ಸರ್ಕಾರ ಯಾವುದೋ ಒಂದು ನೀತಿಯಂತೆ ಕಾರ್ಯಕ್ರಮವನ್ನು ಅನುಸರಿಸುತ್ತಿದ್ದಾರೆ ಎಂದು. ಇದು ನಿಜಕ್ಕೆ ಬಹಳ ದೂರವಾದದ್ದು. ಅದಕ್ಕೂ ಹೆಚ್ಚಿಗೆ ಹೇಳುವುದಿಲ್ಲ. ಅಲ್ಲದೆ, ಶ್ರೀಮಾನ್ ಕೃಷ್ಣಪ್ಪನವರು ಸವಾಲು ರೀತಿಯಲ್ಲಿ ಈಗಾಗಲೇ ತಿಳಿಸಿದ್ದಾರೆ, ತಿಂಗಳುಗಟ್ಟಲೆ, ವರ್ಷಗಟ್ಟಲೆ ಸಾವಿರಾರು ಜನರು ಸ್ವಾತಂತ್ರ್ಯಕ್ಕೆ, ಮತ್ತು ಜವಾಬ್ದಾರಿ ಸರ್ಕಾರ ಸ್ಥಾಪನೆ ಮಾಡುವುದಕ್ಕೆ ಕೆಲಸಮಾಡಿದವರು, ದೇಶಕ್ಕೆ ಸರ್ವಸ್ವವನ್ನೂ ಒಪ್ಪಿಸಿದವರೂ ಆದ ಈ ಕಾಂಗ್ರೆಸ್ ಮಂತ್ರಿ ಮಂಡಲದವರು ಫಂಡಮೆಂಟಲ್ ರೈಟ್ಸನ್ನು ಮೊಟಕು ಮಾಡುತ್ತಿದ್ದಾರೆ ಎಂದು ಹೇಳುವುದಾದರೂ ಹೇಗೆ ಎಂದು. ಇಷ್ಟುಮಾತ್ರ ಹೇಳಬಲ್ಲೆ. This is

an irony of circumstances. ಹಿಂದೆ ಅವರು ಆ ಚೌಕಟ್ಟಿನೊಳಗೆ ಸಿಕ್ಕಿಕೊಂಡು ಇಷ್ಟವಿರಲಿ, ಇಲ್ಲದೇ ಇರಲಿ, ಮಾಡಬೇಕಾಗಿ ಬಂದು ಮಾಡಿದರು. ನನಗೇ ಗೊತ್ತು. ಅದು ಒಂದು ಕಡೆ ಇರಲಿ, ಈ ಮಂತ್ರಿ ಮಂಡಲ civic responsibilities curtail ಮಾಡುವುದಕ್ಕೆ ಫಂಡಮೆಂಟಲ್ ರೈಟ್ಸ್ ಮೊಟಕು ಮಾಡುವುದಕ್ಕೆ ಏನು ಮಾಡಿದೆ ಎಂದು ನಾನು ಸವಾಲು ಹಾಕುತ್ತೇನೆ. ಇನ್ನು ಒಂದು ಹೆಜ್ಜೆ ಮುಂದುವರಿಯಬೇಕಾದರೆ ಸ್ವಾತಂತ್ರ್ಯ ಎಂಬ ನೆಪದಿಂದ ಕೆಲವು ಸನ್ನಿವೇಶಗಳು ದೇಶದಲ್ಲಿ ನಡೆಯುತ್ತಾ ಇದ್ದರೂ ಸಹ, ಹೆಚ್ಚಿನ ತಾಳ್ಮೆಯಿಂದ ಒಂದು ಬಿಗಿಯಿಂದ ಕೆಲಸಕಾರ್ಯ ಮಾಡಬೇಕಾಗಿತ್ತು, ಅದನ್ನು ಮಾಡದೇ ಸ್ವಲ್ಪ ತಾಮಸ ಮಾಡಿದಿರಿ ಎಂದು ಹೇಳಿದರೆಒಪ್ಪಿಕೊಳ್ಳುತ್ತೇನೆಯೇ ಹೊರತು ನಿಜವಾಗಿಯೂ ಸ್ವಾತಂತ್ರ್ಯವನ್ನು ಮೊಟಕು ಮಾಡುವುದಕ್ಕೆ ಒಂದು repressive policyಯನ್ನು ಅನುಸರಿಸಿದ್ದೇವೆ ಎಂದು ಹೇಳಿದರೆ ಖಂಡಿತವಾಗಿಯೂ ಒಪ್ಪಿಕೊಳ್ಳುವುದಿಲ್ಲ. ಅವರು ಆಕ್ಷೇಪಣೆಯನ್ನು ಸಮರ್ಥಿಸುತ್ತಾ ಒಂದು ಮುಖ್ಯವಾದ ಉದಾಹರಣೆಯನ್ನು ಕೊಡುತ್ತೇನೆಂದು ಹೇಳಿದರು. ಅವರು ಅನುಸರಿಸಿರತಕ್ಕ ಧೋರಣೆ, ಹೇಳಿರತಕ್ಕ ಒಂದು ಉದಾಹರಣೆ ನನಗೆ ನಿಜವಾಗಿಯೂ ಮನಸ್ಸಿನಲ್ಲಿ ವ್ಯಥೆಯನ್ನುಂಟುಮಾಡಿದೆ. ಅವರು ಮಾತನಾಡುವಾಗಲೇ ಮಧ್ಯೆ ಇಂಟರಪ್ಟ್ ಮಾಡಿದ್ದೇನೆ. ಈಗ ಆ ವಿಷಯವನ್ನು ಸ್ಪಷ್ಟಪಡಿಸುತ್ತೇನೆ. ನ್ಯಾಯಖಾತೆಯ ವಿಚಾರದಲ್ಲಿ ಎಕ್ಸಿಕ್ಯೂಟೀವ್ ತಲೆ ಹಾಕಿ ಇಲ್ಲದ ಸಲ್ಲದ ಆಜ್ಞೆಗಳನ್ನು ಮಾಡಿದೆ ಎಂಬ ಒಂದು ಆಕ್ಷೇಪಣೆ ಏನು ಇದೆಯೋ ಅದನ್ನು ಬೇರೆ ಕ್ಷೇತ್ರಗಳಲ್ಲೂ ಹೇಳುತ್ತಾ ಇದ್ದಾರೆ. ಅದು ಬೇರೆಕಡೆ ಇರಲಿ. ಶಾಸನಸಭೆಯ ಸದಸ್ಯರಾಗಿ, ಖಾಸಗೀ ಮಾಜಿ ಮಂತ್ರಿಗಳಾಗಿ ವಿಷಯಗಳನ್ನು ಚೆನ್ನಾಗಿ ಆಲೋಚನೆ ಮಾಡಿ ಹೇಳಬೇಕಾದ ವಿಷಯವನ್ನು ಅವರು ಹೇಳದೇ ಇದ್ದದ್ದಕ್ಕಾಗಿ ಖಂಡಿತವಾಗಿಯೂ ನನಗೆ ಬಹಳ ವ್ಯಸನವಾಗಿದೆ ಇಷ್ಟುಮಾತ್ರ ಹೇಳುತ್ತೇನೆ. ಜ್ಯುಡಿಷಿಯರಿಯ ಪವಿತ್ರತೆ ಮತ್ತು ದಕ್ಷತೆಯ ವಿಚಾರದಲ್ಲಿ ಎಷ್ಟೇ ಕ್ಲಿಷ್ಟ ಸನ್ನಿವೇಶವೇ ಬರಲಿ ಅದನ್ನು ಕಾಪಾಡುವುದಕ್ಕೆ ಸಾಹಸ ಮಾಡಬೇಕು ಎಂಬುದರಲ್ಲಿ ನಾವು ಯಾರಿಗೂ ಹಿಂದೆ ಬಿದ್ದಿಲ್ಲವೆಂದು ಹೇಳುತ್ತೇನೆ.

ಯಾವ ಸಂದರ್ಭದಲ್ಲಿ ನಾವು ಇದನ್ನು ಮಾಡಿದ್ದೇವೆಂದು ಕೇಳಿದರೆ ಆ ಜುಡಿಷಿಯರಿಯ ಪವಿತ್ರತೆಯನ್ನು ಎತ್ತಿಹಿಡಿಯಲು ಮತ್ತು ಅವನ್ನು ಯಾವ ಕಳಂಕವೂ ಇಲ್ಲದಹಾಗೆ ಕಾಪಾಡಿಕೊಂಡು ಬರಲು ನಾವು ಹಾಗೆ ಮಾಡಿರುತ್ತೇವೆಂಬ ಅಂಶವನ್ನು ನಾನು ಖಡಾಖಂಡಿತವಾಗಿ ಹೇಳಬಲ್ಲೆ. ಸರ್ಕಾರದವರು ಇದನ್ನು ಏನೋ ಒಂದು ಭಾವನೆ ಇಟ್ಟುಕೊಂಡು ಮಾಡಿದ್ದಾರೆಂಬುದು ಕೇವಲ ತಿರುಳಿಲ್ಲದ ಮತ್ತು ಸತ್ಯಾಂಶಕ್ಕೆ ದೂರವಾದ ವಾದವೆಂದು ನಾನು ಹೇಳದೆ ವಿಧಿಯಿಲ್ಲ. ಈ ವಿಚಾರವಾಗಿ ಸೂಕ್ಷ್ಮವಾಗಿ ಪರಿಶೀಲನೆಮಾಡಿದರೆ ಈ ಸಂಬಂಧವಾಗಿ ನಮ್ಮನ್ನು ಆಕ್ಷೇಪಣೆ ಮಾಡುವುದಕ್ಕೆ ಬದಲಾಗಿ ನಮಗೆ ತಾವು ಶಿಫಾರಸ್ಸನ್ನು ಕೊಡಬೇಕಾಗಿದೆ. ಅಂಥದ್ದರಲ್ಲಿ ತಾವು ನಮಗೆ ಶಹಭಾಷ್‌ಗಿರಿ ಕೊಡದೆ ಹೋದರೂಚಿಂತೆಯಿಲ್ಲ, ಅನ್ಯಥಾ ನೀವು ನಮ್ಮನ್ನು ಆಕ್ಷೇಪಣೆ ಮಾಡುತ್ತಿರುವುದು ತುಂಬಾ ಶೋಚನೀಯ. ಇದು ಸರಿಯಲ್ಲವೆಂದು ನಾನು ತಮಗೆ ತಿಳಿಸುತ್ತೇನೆ. ಆದರೆ ಈ ಸಂಬಂಧವಾಗಿ ತಮಗೆ ನಾನು ಸಮಯ ದೊರೆತಾಗ ಇನ್ನೂ ವಿವರಗಳೊಡನೆ ತಿಳಿಸಲಿಚ್ಛಿಸುತ್ತೇನೆ. ಆಗ ತಾವು, ಈಗ ನಾವು ಮಾಡಿರುವುದರ ಹಿನ್ನೆಲೆಯನ್ನೂ ಮತ್ತು ಏತಕ್ಕಾಗಿ ನಾವೀ ನೀತಿಯನ್ನು ಅನುಸರಿಸಿಕೊಂಡು ಬಂದಿದ್ದೇವೆಂಬುದನ್ನೂ ತಿಳಿದ ನಂತರ, ನೀವು ನಮ್ಮನ್ನು ಈ ದಿವಸ ಮೆಚ್ಚದೆ ಇದ್ದರೂ, ಆ ದಿವಸ ನೀವೆಲ್ಲರೂ ನಿಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸುತ್ತೀರೆಂದು ನಾನು ನಂಬಿದ್ದೇನೆ. ಆದರೆ ಈ ವಿಷಯದಲ್ಲಿ ಮಾನ್ಯ ಸದಸ್ಯರಾರೂ ಎಳ್ಳಷ್ಟೂ ಸಂಶಯಪಡಬೇಕಾದುದಿಲ್ಲವೆಂದು ನಾನು ತಿಳಿಸುತ್ತೇನೆ. ಆದರೆ ತಾವು ವಿವರಿಸಿದ ಕೆಲವು ಲೋಪದೋಷಗಳು ನಡೆದಿರುವುದಾಗಿ ತಾವು ನಂಬಿಕೊಂಡಿದ್ದರೆ, ಅವು ಕೇವಲ ಕಳೆದ ಜನವರಿ ತಿಂಗಳು ತಾರೀಖು 26ಕ್ಕಿಂತ ಹಿಂದಿನವುಗಳಾಗಿದ್ದರೂ ಆಗಿರಬಹುದೇ ಶಿವಾಯಿ ಅಲ್ಲಿಂದೀಚೆಗೆ, ಈಗಾಗಲೆ ನಮ್ಮ ಮಿತ್ರರಾದ ಶ್ರೀಮಾನ್ ದಾಸಪ್ಪನವರು ತಿಳಿಸಿರುವಂತೆ ಅಂಥಾದ್ದು ಯಾವುದೂ ನಡೆದಿರುವುದಿಲ್ಲ. ಈ ವಿಷಯಗಳನ್ನೆಲ್ಲಾ ಆಗಲೇ ನಾನು ಸ್ಪಷ್ಟವಾಗಿ ತಿಳಿಸಿದ್ದೇನೆ.

ಇನ್ನು ಕೆಲವರು ಶ್ರೀ ಗೋಪಾಲರಾಯರ ಸಮಿತಿಯ ವಿಚಾರಕ್ಕೂ ಈ ಜುಡಿಷಿಯರಿಗೂ ಗಂಟುಹಾಕಿ ಮಾತನಾಡಿದ್ದಾರೆ. ಇದು ಕೇವಲ ಅಸಮಂಜಸವಾದುದು. ಆದರೂ ಕೂಡ ಆ ಸಮಿತಿಯ ನೇಮಕವನ್ನು ನಾವು ಬಂದನಂತರ ಮಾಡಿದುದರ ಪರಿಣಾಮವಾಗಿ ದೇಶದಲ್ಲಿ ಅನೇಕರಿಗೆ ಎಷ್ಟೋ ಉಪಕಾರವಾಗಿದೆ. ಇದನ್ನೆಲ್ಲಾ ನಾನು ತಮ್ಮಿಂದ ಒಂದು ಕೀರ್ತಿ ಪಡೆಯಲಿಕ್ಕಾಗಲೀ ಅಥವಾ ಒಂದು ಪಾರಿತೋಷಕದ ಹಿತಕ್ಕಾಗಲಿ ಹೇಳುತ್ತಿಲ್ಲ. ಈ ವಿಚಾರದಲ್ಲಿ ಹಿಂದಿನ ಮೈಸೂರು ಸರ್ಕಾರದವರು, ಕೈಬಿಟ್ಟು ಹೋಗಿದ್ದಂಥ ಮತ್ತು ಸಂಸ್ಥಾನದಲ್ಲಿ ಕೆಳಗೆ ಬಿದ್ದುಹೋಗಿದ್ದಂಥ ಅನೇಕ ಸನ್ನಿವೇಶಗಳನ್ನು ಮೇಲಕ್ಕೆ ಎತ್ತಿಹಿಡಿದು, ಕಳಂಕವನ್ನೆಲ್ಲಾ ಬೈಲಿಗೆ ತಂದು, ಈ ಸಂಬಂಧವಾಗಿ ಯಾರು ಯಾರಿಗೆ ಎಷ್ಟೆಷ್ಟು ನ್ಯಾಯ ದೊರಕಬೇಕಾಗಿತ್ತೋ ಅಷ್ಟಷ್ಟು ಅವರಿಗೆ ದೊರೆಯುವಂತೆ ನಾವು ಮಾಡಿದ್ದೇವೆ. ಈ ವಿಷಯದಲ್ಲಿ ಇನ್ನೂ ಕೆಲವು ಹೆಚ್ಚಿನ ವಿವರಗಳನ್ನು ಸರಿಯಾದ ಸಂದರ್ಭ ಒದಗಿದಾಗ ತಿಳಿಸಲಪೇಕ್ಷಿಸುತ್ತೇನೆ. ಈ ಸಂಬಂಧವಾಗಿ ಇಲ್ಲಿಯವರೆಗೆ ನಾವು ಎಷ್ಟೆಷ್ಟು ಕೆಲಸಗಳನ್ನು ಎಷ್ಟು ಧೈರ್ಯವಾಗಿ ಮಾಡಿಕೊಂಡು ಬಂದಿದ್ದೇವೋ, ಅಷ್ಟೇ ಧೈರ್ಯದಿಂದ ಇದನ್ನು ಮುಂದೆಯೂ ನಡೆಸಿಕೊಂಡು ಹೋಗಲು ನಾವು ನಿರತರಾಗಿದ್ದೇವೆಂಬುದನ್ನು ತಮಗೆ ತಿಳಿಸಬಿಚ್ಛಿಸುತ್ತೇನೆ.

ಪಾನನಿರೋಧದ ವಿಚಾರವಾಗಿ ಒಂದು ಮಾತನ್ನು ಹೇಳಿದರು. ಹಿಂದೆ ಸರ್ಕಾರ ನಡೆಸುತ್ತಿದ್ದವರ ವಿಚಾರದಲ್ಲಿ ಏನಾದರೂ ಕೆಲವು ಮಾತುಗಳನ್ನು ಹೇಳಿದರೆ ಅದಕ್ಕೆ ಯಾರೂ ಕೋಪ ಮಾಡಿಕೊಳ್ಳಬಾರದೆಂದು ನಾನು ಅರಿಕೆಮಾಡಿಕೊಳ್ಳುತ್ತೇನೆ. ಹಿಂದಿದ್ದ ಸರ್ಕಾರ ಈ ಸಂಬಂಧವಾಗಿ ಒಂದು ಹೆಜ್ಜೆಯನ್ನೂ ಸಹ ಮುಂಚೆ ಇಡಲಿಕ್ಕೂಸಾಧ್ಯವಾಗಿರಲಿಲ್ಲ. ನಾವಾದರೋ ಧೈರ್ಯವಾಗಿ ಒಂದು ಹೆಜ್ಜೆ ಮುಂದಿಟ್ಟಿದ್ದೇವೆ. ಹಿಂದೆ ಶ್ರೀಮಾನ್ ಎಚ್. ಬಿ. ಗುಂಡಪ್ಪಗೌಡರು ನಾನಾ ಬಾಬುಗಳಲ್ಲಿ ಜೋರಾ ಸೂಚನೆಗಳನ್ನು ತರುವಂತೆ ಮಾಡಬೇಕೆಂದು ಅನೇಕವಾಗಿ ಹೇಳುತ್ತಿದ್ದಂಥ ಅವರಿಗೇನೇ ಆಗ ಏನನ್ನೂ ಮಾಡಲಿಕ್ಕಾಗಲಿಲ್ಲ. ಪ್ರಾಯಶಃ ಇದು ಆಗಿದ್ದ ಸರ್ಕಾರದ ಚೌಕಟ್ಟಿನಲ್ಲಿ ನಡೆಸಲು ಸಾಧ್ಯವಾಗದೆ ಇದ್ದರೂ ಇರಬಹುದು.

ಶ್ರೀ ಎಸ್. ಸಿದ್ದಪ್ಪನವರು.—ಅವರು ಅದನ್ನೇ ಬೇರೆ ರೂಪದಲ್ಲಿ ತಂದಿರಬಹುದು.

ಶ್ರೀ ಎ. ಭೀಮಪ್ಪನಾಯಕರು.—ಆದರೆ ಆಗೇನೋ ಅವರು ಕೆಲವು ಯೋಜನೆಗಳನ್ನು ಮಾಡಿದ್ದರು. ಫಲ ಮಾತ್ರ ದೊರೆಯಲಿಲ್ಲ, ಅಷ್ಟೆ.

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅಂತೂ ಅವರಿಗೆ ಸಾಧ್ಯವಾಗಲಿಲ್ಲ. ನಾವಾದರೂ ಮಾಡುತ್ತಿರುವುದು ಇಷ್ಟೆ—ಶ್ರೀಮಾನ್ ಎಲ್. ಸಿದ್ದಪ್ಪನವರು ಹಿಂದೆ ಹೇಳುತ್ತಿದ್ದ ಹಾಗೆ, ನಾವು ನಮ್ಮ ನೀತಿಯನ್ನು ಈಗ ಕೊಂಚ ನಿಧಾನದಿಂದ ಮುಂದುವರಿಸಿಕೊಂಡು ಹೋಗಬೇಕೆಂದಿರುತ್ತೇವೆಯೇ ಶಿವಾಯಿ ಅದನ್ನು ಮರೆತಿಲ್ಲ. ಅದಕ್ಕೆ ಕೊಂಚ ಕಡೆ ಹಾಕಿಕೊಂಡು ಹೋಗಬೇಕೆಂದು ತಮ್ಮಲ್ಲಿ ಕೆಲವರು ತಿಳಿಸಿದ್ದಾರೆ. ಅದನ್ನು ತಾವು ಟೀಕಾ ರೂಪವಾಗಿ ಮಾಡಿದ್ದರೂ, ನಮಗೊಂದು ಎಚ್ಚರಿಕೆಯಂತಿದೆ. ಅದಕ್ಕೆ ನಿಮ್ಮನ್ನು ಅಭಿನಂದಿಸಬೇಕಾಗಿದೆ. ಆದರೆ ಈ ಪಾನನಿರೋಧ ಎಂಬುದು ಮದ್ರಾಸ್ ಮತ್ತು ಬೊಂಬಾಯಿಗಳಲ್ಲಿ ಅಷ್ಟು ಬೇಗ ತಾವು ತಿಳಿಸಿದಂತೆ ಆಗಲಿಲ್ಲ. ಅಲ್ಲಿ ಹಿಂದಿನಿಂದಲೂ ಪ್ರಯತ್ನಗಳು ನಡೆಯುತ್ತಿದ್ದವು. ಹಾಗೆ ಈವಿಚಾರ ಎಷ್ಟು ವರ್ಷಗಳಿಂದ ಪರಿಶೀಲನೆಯಾಗುತ್ತಿದೆ ಎಂಬುದನ್ನು ಮಾನ್ಯ ಸದಸ್ಯರು ಮರೆತಂತೆ ಕಾಣುತ್ತದೆ. ಮದ್ರಾಸ್ ಪ್ರಾಂತ್ಯದಲ್ಲಿ ಈ ಸಂಬಂಧವಾಗಿ 1937ನೆಯ ಇಸವಿಯಿಂದಲೂ ಮೊನ್ನೆ ನಮ್ಮ ಪ್ರಥಮ ಗೌರ್ನರ್ ಜನರಲ್ಲರಾಗಿದ್ದಂಥ ಶ್ರೀ ರಾಜಗೋಪಾಲಾಚಾರಿಯವರು ಬಹಳ ಶ್ರಮವಹಿಸಿ ದುಡಿದಿದ್ದಾರೆ. ಕಾಲಕ್ರಮದಲ್ಲಿ ಇಲ್ಲಿಯೂ ಸಹ ಅದು ಸಂಪೂರ್ಣವಾಗಿ ಬಂದೇಬರುತ್ತದೆ. ಆದರೆ ತಾವು ಹೇಳುವುದು ಬಹಳ ವಿಚಿತ್ರವಾಗಿದೆ. "ಮಾಡಿದರೆ ಎಲ್ಲವನ್ನು ಒಂದೇಕ್ಷಣದಲ್ಲಿ ಮಾಡಬೇಕು. ಇಲ್ಲವೇ ಅದನ್ನು ಮಾಡುವುದನ್ನೇ ಬಿಟ್ಟು ಬಿಡಬೇಕು". ಎಂಬುದು ತಮ್ಮ ವಾದದ ಸರಣಿ. ಆದರೆ ಹೀಗೆ ಹೇಳತಕ್ಕದ್ದು ರಾಜಕೀಯ ಪಟುತ್ವದ ಆಧಾರದ ಮೇಲೆ ಹೇಳತಕ್ಕ ಮಾತಾಗಿರುವುದಿಲ್ಲವೆಂದು ಧೃಢವಾಗಿ ಹೇಳಬಲ್ಲೆ. ಈ ವಿಷಯದಲ್ಲಿ ಕೇವಲ ಹಣಕಾಸಿನ ವಿಚಾರ ಒಂದೇ ಅಡಕವಾಗಿರುವುದಿಲ್ಲ. ಅದರ ಜೊತೆಗೆ ಆಡಳಿತ ವಿಚಾರವೂ ಅಡಕವಾಗಿದೆ, ಇದನ್ನು ಈ ವರ್ಷವೇ ಹಾಸನ ಜಿಲ್ಲೆಯಲ್ಲಿ ಜಾರಿಗೆ ತರಬೇಕೆಂದು ನಾವು ಸಂಕಲ್ಪ ಮಾಡಿದ್ದರೆ ತಂದೇ ತರಬಹುದಾಗಿತ್ತು. ಆಜಿಲ್ಲೆಯಿಂದ ನಮಗೆ ಬರುತ್ತಿದ್ದುದು ಕೇವಲ 10–12ಲಕ್ಷ ರೂಪಾಯಿಗಳು ಮಾತ್ರ ಇದನ್ನೂ ಸರಿಗಟ್ಟಿಕೊಳ್ಳುವ ಬಗ್ಯೆ ನಾವು ಬೇರೆ ಯಾವುದಾದರೂ ನಿಧಿಗೆ ಶೇಖರಣೆ ಬಗ್ಯೆ ಹಾಕುತ್ತಿದ್ದ ದುಡ್ಡನ್ನು ಉಳಿಸಿ, ಇದಕ್ಕೆ ಸರಿತೂಗುವಂತೆ ಮಾಡಿ ಜಾರಿಗೆ ತರಬಹುದಾಗಿತ್ತು. ಆದರೆ ಈ ಸಂಬಂಧವಾಗಿ ನಾವು ಬಡ್ಜೆಟ್ಟಿನಲ್ಲಿ ಯಾವ ಯಾವರೀತಿ ಎಷ್ಟೆಷ್ಟು ರಮುಟ್ಟಿಗೆ ತೂಗಬೇಕೋ ಅದೆಲ್ಲವನ್ನೂ ಬಹಳ ಸೂಕ್ಷ್ಮದೃಷ್ಟಿಯಿಂದ ಆಲೋಚನೆಮಾಡಿ ಮಾಡಿದ್ದೇವೆ. ನಾಳೆಬಡ್ಜೆಟ್ ತಮ್ಮಹಸ್ತಗತವಾಗುತ್ತದೆಯಾದಕಾರಣ ನಾನೀಗ ಅದರ ವಿಚಾರವನ್ನು ಇಲ್ಲಿಗೆ ಕೈಬಿಡುತ್ತೇನೆ. ಆದರೆ ಈ ಸಂಬಂಧವಾಗಿ ನಾವು ಯಾವ ಅಂಶಗಳಿಗೆ ಹೆಚ್ಚು ಗಮನವೀಯುತ್ತೇವೆಂಬುದರ ಬಗ್ಯೆ ಎರಡು ಮಾತನ್ನು ತಿಳಿಸಲಪೇಕ್ಷಿಸುತ್ತೇನೆ. ನಾವು ಇತ್ತಕಡೆ ಸರ್ಕಾರಕ್ಕೆ ಬರುತ್ತಿರುವ ಆದಾಯವನ್ನು ಕಳೆದುಕೊಂಡು, ಅತ್ತಕಡೆ ಇದನ್ನು ಕಡ್ಡಾಯವಾಗಿ ಪ್ರತಿಬಂಧಿಸದೆ ಹೋಗಿ ಇದರಿಂದ ಜನರು ತಮ್ಮ ಆರೋಗ್ಯವನ್ನೂ ಕಳೆದುಕೊಂಡು, ವಿಪರೀತ ಕಷ್ಟನಷ್ಟಗಳ ಹೊಡೆತಕ್ಕೆ ಸಿಕ್ಕುವಂತೆ ವರ್ತಿಸುವುದು ಜಾಣ್ಮೆಯ ಕೆಲಸವಲ್ಲವೆಂದೂ ಇದನ್ನು ನಾವು ಚೆನ್ನಾಗಿಮನಗಂಡವರಾಗಿರುವುದರಿಂದ, ಇದರ ವಿಷಯವಾಗಿ ಮೊದಲು ಈಗ ಎಲ್ಲೆಲ್ಲಿ ಪಾನನಿರೋಧ ಜಾರಿಗೆ ಬಂದಿದೆಯೋ ಅಲ್ಲೆಲ್ಲ ಈ ಕಾನೂನಿಗೆ ಭಂಗಬಾರದಂತೆ ತಕ್ಕ ಬಂದೋಬಸ್ತನ್ನು ಇಡಲು ಸ್ಥಳೀಯ ಪೋಲೀಸರಿಗೆ ಅಧಿಕಾರ ವಹಿಸಿ ಅದನ್ನೇ ಸಂಪೂರ್ಣವಾಗಿ ತಡೆಗಟ್ಟಿ ನಂತರಮುಂದಕ್ಕೆ ಹೋಗೋಣವೆಂಬುದು ನನ್ನ ಅಭಿಪ್ರಾಯ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಈಗ ಮದರಾಸಿನಲ್ಲಿ ಹೇಗೆ ಜಾರಿಗೆ ತಂದಿದ್ದಾರೋ ಆರೀತಿ ಇಲ್ಲಿಯೂ ಜಾರಿಗೆತರಬೇಕೆಂದು ತಮ್ಮ ಅಭಿಪ್ರಾಯವಿದ್ದಂತೆಕಾಣುತ್ತೆ.

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಈಗ ನಾವು ಮಾಡಿರುವ ಕೆಲಸವನ್ನೇ ಸಾಧಿಸಿ, ಅದರಲ್ಲಿ ಕೃತಾರ್ಥರಾಗಿ ನಂತರ ಮುಂದಿನ ಹೆಜ್ಜೆ ಇಡೋಣವೆಂದು ನಾವು ಸಂಕಲ್ಪಮಾಡಿದ್ದೇವೆ.

ಆ ಮೇಲೆ ಇನ್ನೊಂದು ಹೇಳುತ್ತೇನೆ: ಯಾವ ರೀತಿ ಈ ಪಾನನಿರೋಧದ ನೀತಿಯನ್ನು ಅನುಷ್ಠಾನಕ್ಕೆ ತರುವುದಕ್ಕೆ ಎಷ್ಟು ಧೈರ್ಯ ಬೇಕಾಗಿತ್ತೋ ಈಗ ಅದನ್ನು ನಿಲ್ಲಿಸುವುದಕ್ಕೂ ಕೂಡ ಅಷ್ಟೇ ಧೈರ್ಯ ಮಾಡಿ ತೀರ್ಮಾನಮಾಡಿದ್ದೇವೆ. ಈಗ ನಾವು ಇದರ ವಿಚಾರದಲ್ಲಿ ಒಂದು ಹಂತಕ್ಕೆ ಬಂದಿದ್ದೇವೆ. ಅಲ್ಲಿ ಸ್ವಲ್ಪ ಕಾಲ ತಂಗಿ ಆ ಮೇಲೆ ಅಲ್ಲಿಂದ ಮುಂದಿನ ಹಂತಕ್ಕೆ ಹೋಗುತ್ತೇವೆಂದು ನಾವು ಅದನ್ನೂ ಕೂಡ ಧೈರ್ಯವಾಗಿ ಹೇಳುತ್ತೇವೆ.

ರೋಡ್ ಟ್ರಾನ್ಸ್‌ಪೋರ್ಟ್ ವಿಚಾರ ನಾನೇನೂ ಹೆಚ್ಚಾಗಿ ಹೇಳಬೇಕಾಗಿಲ್ಲ. ಇದನ್ನು 'half-hearted policy' ಎಂದು ಶ್ರೀಮಾನ್ ಗುಂಡಪ್ಪನವರು ಹೇಳಿದರು. ಇದನ್ನು ಮುಂದುವರಿಸುತ್ತೀರಾ ಇಲ್ಲವೇ ಎಂಬ ಸಂಶಯವನ್ನು ಪರಿಹಾರಮಾಡಿದರೆ ಸರ್ಕಾರದವರನ್ನು ವಂದಿಸುತ್ತೇನೆಂದು ಹೇಳಿದರು. ಅದನ್ನು ಮುಂದುವರಿಸುವುದಿಲ್ಲ. ಅದಕ್ಕೆ ಬದಲು "Co-ordination of the work of the transport agencies owned by Government and private citizens" ಮಾಡಬೇಕೆಂದಿದೆ. ಇದಿನ್ನೂ transitory period ಎಂಬುದನ್ನು ನಾವು ತಿಳಿಯಬೇಕು. ಆದರೂ ಈ ಎರಡು ಏಜೆನ್ಸಿಗಳೂ ಎಂದೂ ಶಾಶ್ವತವಾಗಿ ಇರಬೇಕೆಂಬುದು ಸರ್ಕಾರದ ನೀತಿಯಲ್ಲ. ಮುಂದಕ್ಕೆ ಸರ್ಕಾರದ ನೀತಿಯೇನೆಂಬುದನ್ನು ಸೂಚಿಸಿದ್ದೇನೆ. ಜನಾಬ್ ಇಮಾಂರವರು ಹಿಂದೆ ಈ ಸಂಬಂಧದಲ್ಲಿ ಹೈದರಾಬಾದಿಗೆ ಹೋಗಿ ಅಲ್ಲಿನ ರಸ್ತೆ ಸಂಚಾರ ಸೌಕರ್ಯದ ಬಗ್ಗೆ ಒಂದು ವರದಿಯನ್ನು ತಯಾರುಮಾಡಿದ್ದರು. ಆದರೂ ಅವರು ಮಂತ್ರಿಮಂಡಲಕ್ಕೆ ಬಂದ ಕಾಲದಲ್ಲೂ ಅದನ್ನು ಜಾರಿಗೆ ತರದೆ ಇದ್ದಂಥಾದ್ದನ್ನು ನಾವು ತಂದಿದ್ದಕ್ಕಾಗಿ ಅವರು ಮೆಚ್ಚಿಕೆಯನ್ನು ವ್ಯಕ್ತಪಡಿಸಬೇಕು.

ಶ್ರೀಮಾನ್ ಎಲ್. ಸಿದ್ದಪ್ಪನವರು ಕೆಲವು ಬಾಬುಗಳ ವಿಚಾರ ಹೇಳಿದರು. ಮಲೆನಾಡಿನ ಅಭಿವೃದ್ಧಿಯ ವಿಚಾರವೇನೂ ಹೇಳಲಿಲ್ಲವೆಂದು ತಿಳಿಸಿದರು. ಇನ್ನು ಕೆಲವು ಸದಸ್ಯರು ಹೀಗೆಯೇ ಇನ್ನೂ ಹಲವಾರು ವಿಷಯಗಳನ್ನು ಸೂಚಿಸಲಿಲ್ಲವೆಂದು ಹೇಳಿದರು. ಇದು ವಾಸ್ತವ. ಆ ಅಂಶ ಭಾಷಣದಲ್ಲೇ ವ್ಯಕ್ತಪಟ್ಟಿದೆ. ಕಾಲ ಪರಿಮಿತಿಯ ದೆಶೆಯಿಂದ ಇಲ್ಲಿ ಎಲ್ಲವನ್ನೂ ಹೇಳುವುದಕ್ಕಾಗಿಲ್ಲವೆಂದು ಅಲ್ಲೇ ಹೇಳಿದೆ. ಅಲ್ಲದೆ ಇನ್ನೊಂದು ವಿಷಯವನ್ನೂ ನಾವು ನೋಡಬೇಕು. ಶ್ರೀಮಾನ್ ಗುಂಡಪ್ಪಗೌಡರು ಈಗಿರುವ ಭಾಷಣವೇ ಉದ್ದ ಆಯಿತು, ಇಷ್ಟು ದೀರ್ಘವಾಗಿರಕೂಡದು ಎಂದು ಹೇಳಿದರು. ಆದ್ದರಿಂದ ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಒಂದು short but sweet ಆಗಿರುವ ರೀತಿಯಲ್ಲಿ ಒಂದು ತೂಕ ಹಾಕಿ ಕೆಲವು ಭಾಗಗಳಲ್ಲಿ ಸ್ವಲ್ಪ ಉದ್ದವಾದರೂ ಚಿಂತೆಯಿಲ್ಲ ಎಂದು ಸೇರಿಸಿದ್ದೇವೆ. ಇನ್ನು ಕೆಲವು ಭಾಗಗಳಲ್ಲಿ ಬಿಟ್ಟರೂ ಪರವಾಗಿಲ್ಲವೆಂದು ಹೇಳಿ

ಸಾಮಾನ್ಯವಾಗಿ ಎಲ್ಲರಿಗೂ ಸಮಂಜಸವಾಗಿರುವ ರೀತಿಯಲ್ಲಿ ತಂದಿದ್ದೇವೆಂದು ನಾನು ಹೇಳಬಲ್ಲೆ. ಆದ್ದರಿಂದ ನಾವು ಅನುಸರಿಸಿರುವ ನೀತಿ ಸರಿಯಾಗಿದೆಯೆಂದು ನಮ್ಮ ಅಭಿಪ್ರಾಯ.

ಶ್ರೀಮಾನ್ ಗುಂಡಪ್ಪಗೌಡರು ತಮ್ಮ ಸಲಹೆಗೆ ಉತ್ತರ ಕೊಡಲಿಲ್ಲವೆಂದು ಹೇಳಿದರು.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಯಾವುದಕ್ಕೆ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—"Short and sweet" ಆಗಿ ಬರಲಿಲ್ಲವೆಂದು ಹೇಳಿದಿರಿ. It is sweet. It is as short as it can possibly be under the circumstances and I give the assurance to Hon'ble Members that the future Addresses will not be as long as this.

**Sri L. SIDDAPPA.**—We will welcome that.

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—Thank you. ಶ್ರೀಮಾನ್ ಬಂದೀಗೌಡರು ವಿರಡು ವಿಷಯಗಳನ್ನು ಪ್ರಸ್ತಾಪಮಾಡಿದ ಹಾಗೆ ಕಾಣುತ್ತದೆ. ಅದು ಆಹಾರದ ಹತೋಟಿ ವಿಚಾರ. ಹತೋಟಿಯಿಲ್ಲದಿರುವುದೇ ಸೂಕ್ತವೆಂದು ಅವರು ಹೇಳಿದ ಹಾಗೆ ಕಂಡುಬಂತು. ಆದರೆ ಅದು ಈಗಲ್ಲ, ಆದಷ್ಟು ಜಾಗ್ರತೆ ಹೋಗಬೇಕೆಂದು ಅವರು ಅಭಿಪ್ರಾಯಪಟ್ಟರೆಂದು ನಾನು ತಿಳಿಯುತ್ತೇನೆ. ಇದು ಅಖಿಲ ಭಾರತಕ್ಕೇ ಸಂಬಂಧಪಟ್ಟ ಒಂದು ದೊಡ್ಡ ನೀತಿ. ಭಾರತ ದೇಶಕ್ಕೇ ಒದಗಿರತಕ್ಕ ಒಂದು ದೊಡ್ಡ ಸಮಸ್ಯೆ. ಯಾವ ಒಂದು ಸಂಸ್ಥಾನವೇ ಆಗಲಿ, ತನ್ನದೇ ಆದ ಒಂದು ನೀತಿಯನ್ನು ಅನುಸರಿಸುವ ವಿಷಯವಲ್ಲ. ಹೊಸ ರಾಜ್ಯಾಂಗ ಜಾರಿಗೆ ಬಂದಮೇಲಂತೂ ಇದು ಬಹಳ ಕಷ್ಟ. ಆಹಾರ ವಿಚಾರಕ್ಕೆ ಒಂದೇ ಅಲ್ಲ, ಇನ್ನೂ ಅನೇಕ ವಿಚಾರಗಳಲ್ಲಿ ಅಖಿಲ ಭಾರತದ ಕಾರ್ಯ ವಿಧಾನವನ್ನನುಸರಿಸಿ ನಾವೂ ತೀರ್ಮಾನಮಾಡಬೇಕಾಗಿದೆ. ಭಾರತ ಸರ್ಕಾರದವರೇ ಆಗಲಿ, ಸಂಸ್ಥಾನದ ಸರ್ಕಾರದವರೇ ಆಗಲಿ ಈ ಹತೋಟಿಗಳು ಇದ್ದೇ ಇರಬೇಕೆಂದು ಯಾರೂ ಹೇಳುತ್ತಿಲ್ಲ. ಅದಿರುವುದು ಯಾರಿಗೂ ಸಂತೋಷವೂ ಅಲ್ಲ. ಆದಷ್ಟು ಜಾಗ್ರತೆ ಹೋಗಬೇಕೆಂಬುದೇ ಭಾರತ ಸರ್ಕಾರದವರ ನೀತಿ ಮತ್ತು ನಮ್ಮ ನೀತಿ ಮತ್ತು ಆಶಯ. ಈ ಗುರಿಯನ್ನು ಮುಟ್ಟುವುದಕ್ಕೆ ಎಷ್ಟು ಜಾಗ್ರತೆ ಸಾಧ್ಯವೋ ಅಷ್ಟು ಜಾಗ್ರತೆ ಮಾಡುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತಿದ್ದೇವೆ. 1951ನೆಯ ಇಸವಿಯ ಹೊತ್ತಿಗೆ ಭಾರತ ಸರ್ಕಾರದವರು ಏನೋ ಒಂದು ಗುರಿ ಇಟ್ಟುಕೊಂಡಿದ್ದಾರೆ. ಅದು ಮುಟ್ಟಿದಮೇಲೆ ಪ್ರಾಯಶಃ ಅದರ ಜೊತೆಯಲ್ಲಿ ಈ ಹತೋಟಿಯೂ ಹೋಗಬಹುದೆಂದು ನಮ್ಮ ಆಶಯ. ಆದ್ದರಿಂದ ಡಿ-ಕಂಟ್ರೋಲ್ ವಿಚಾರದಲ್ಲಿ ಭಿನ್ನಾಭಿಪ್ರಾಯವಿದೆಯೆಂದು ಯಾರೂ ತಿಳಿಯಬಾರದು. ಆದ್ದರಿಂದ ಈ ಕಂಟ್ರೋಲ್ ಇರುವವರೆಗೂ ದಯವಿಟ್ಟು ಎಲ್ಲರೂ ಸಹಕರಿಸಿ ಕಂಟ್ರೋಲಿನಿಂದ ಉಂಟಾಗುವ ತೊಂದರೆಯ ಪ್ರಕರಣಗಳನ್ನು ಕಡಿಮೆಮಾಡುವುದಕ್ಕೆ ಪ್ರಯತ್ನಪಡಬೇಕು. ಆದಷ್ಟು ಜಾಗ್ರತೆ ಹತೋಟಿಯನ್ನು ತೆಗೆಯಬೇಕೆಂಬುದೆ ಸರ್ಕಾರದವರ ಅಭಿಪ್ರಾಯವೆಂದು ಸದ್ಯಕ್ಕೆ ಹೇಳಿದರೆ ಸಾಕೆಂದು ಭಾವಿಸುತ್ತೇನೆ.

ಕೊನೆಯಲ್ಲಿ ಇನ್ನೊಂದು ಅಭಿಪ್ರಾಯವನ್ನು ಹೇಳಿದರು. ಉತ್ತರ ಪ್ರದೇಶದಲ್ಲಿ ಸರ್ಕಾರದವರು ಯಾವ ವಿಕೇಂದ್ರೀಕರಣ ನೀತಿಯನ್ನನುಸರಿಸಿದ್ದಾರೋ ಆ ನೀತಿಯನ್ನು ನಾವೂ ಅನುಸರಿಸಬೇಕೆಂದು ಹೇಳಿದರು. ಈ ವಿಚಾರದಲ್ಲಿ ಇದುವರೆಗೆ ನಾವೇನು ಮಾಡಿದ್ದೇವೆಂಬುದನ್ನು ಹೇಳುತ್ತೇನೆ. ಹೋದ ತಿಂಗಳು 16ನೆಯ ತಾರೀಖು ಸಂಸ್ಥಾನದ ಎಲ್ಲಾ ಇಲಾಖಾ ಮುಖ್ಯಾಧಿಕಾರಿಗಳನ್ನೂ ಸರ್ಕಾರದ ಸೆಕ್ರೆಟರಿಗಳನ್ನೂ ಸಭೆ ಸೇರಿಸಿ ಅಲ್ಲಿ ನಾಲ್ಕಾರು ವಿಷಯಗಳನ್ನು ಪ್ರಸ್ತಾಪಮಾಡಿದೆ. ಅಗ್ಗೆ ಮುಖ್ಯವಾಗಿ ನಾನು ಹೇಳಿದ್ದೇನೆಂದರೆ ಈ ವಿಕೇಂದ್ರೀಕರಣ ವಿಷಯ. ಅದು ಹೇಗೆ ಆಗಬೇಕು, ಯಾವ ಯಾವ ವಿಷಯಗಳ ಬಗ್ಗೆ ಏನೇನು ಮಾಡಬೇಕೆಂಬುದನ್ನು ತಿಳಿಸಿ, ಇದರ ಸಂಬಂಧದಲ್ಲಿ ಬೇಕಾದಷ್ಟು ವಿಷಯಗಳನ್ನು ಈಗಾಗಲೇ ಸಂಗ್ರಹಿಸಿದ್ದೇವೆ. ಸೆಕ್ರೆಟರಿಗಳ ಉಪಸಮಿತಿಯು ಇವುಗಳನ್ನು ಪರಿಶೀಲಿಸುತ್ತಿದೆ. ಇಷ್ಟರೊಳಗೇ ಒಂದು ತೀರ್ಮಾನಕ್ಕೆ ಬರಲಿದ್ದಾರೆ. ವಿಕೇಂದ್ರೀಕರಣವು ಸರ್ಕಾರದವರ ದೃಷ್ಟಿಯಲ್ಲಿ ಒಂದು ಮುಖ್ಯವಾದ ವಿಷಯವಾಗಿದೆ. ಅದನ್ನು ಮಾಡುತ್ತೇವೆ.

ಇನ್ನೊಂದೇನೆಂದರೆ, ಕೇಂದ್ರ ಸರ್ಕಾರದವರಿಗೆ ಎಲ್ಲವನ್ನೂ ಮಾಡುವುದಕ್ಕೆ ಬಿಟ್ಟುಕೊಡುವುದನ್ನು ತಪ್ಪಿಸಿ ಸ್ಥಳೀಯ ಪ್ರಜಾಧಿಕಾರ ಸಂಸ್ಥೆಗಳಿಗೇ ಹೆಚ್ಚಿಗೆ ಅಧಿಕಾರ ಕೊಡಬೇಕೆಂದು ಯಾವುದು ಜನರ ಅಭಿಪ್ರಾಯವಾಗಿದೆಯೋ ಅದರ ಬಗ್ಗೆ ಶ್ರೀಮನ್ಮಹಾರಾಜರವರ ಭಾಷಣದಲ್ಲೇ ಇದೆ. ಅದನ್ನು ನಾನು ಮತ್ತೆ ಹೇಳಬೇಕಾಗಿಲ್ಲ.

ಶ್ರೀಮಾನ್ ಗುಂಡಪ್ಪಗೌಡರು ಇನ್ನೊಂದು ಮುಖ್ಯವಾದ ವಿಷಯ ಹೇಳಿದರು. ಅದರ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಅವರು ಬಹಳ ಬಿಗಿಯಿಂದ ಆದರೂ ತೀವ್ರತೆಯಿಂದ ಅಲ್ಪಸಂಖ್ಯಾತರ ವಿಚಾರದಲ್ಲಿ ಮತ್ತು ಈಗ ಉದ್ಭವವಾಗುತ್ತಿರತಕ್ಕ ಪೂರ್ವ ಬಂಗಾಳದ ಪರಿಸ್ಥಿತಿಯ ವಿಚಾರದಲ್ಲಿ ಸರ್ಕಾರದ ನೀತಿಯೇನೆಂಬುದನ್ನು ಅವರು ಹೇಳಿದರೆಂದು ನನಗೆ ತಿಳಿದುಬಂದಿದೆ. ನಮ್ಮ ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಭಾರತ ಇಬ್ಭಾಗವಾಗಿ ಇಂಡಿಯಾವೇ ಬೇರೆ ಪಾಕಿಸ್ಥಾನವೇ ಬೇರೆಯೆಂದಾಗಿರುವುದು ನಮಗೆ ಯಾರಿಗೂ ಹರ್ಷವನ್ನುಂಟುಮಾಡಿಲ್ಲವೆಂದು, ಅವರಿಗೂ ಗೊತ್ತು. ಸ್ವಾತಂತ್ರ್ಯ ಬಂದ ತರುಣದಲ್ಲೇ ಎಷ್ಟೋ ಅನರ್ಥಗಳಿಗೆ, ತೊಂದರೆಗಳಿಗೆ ಭಾರತ ದೇಶ ಈಡಾಯಿತೆಂಬುದು ಅವರಿಗೂ ಗೊತ್ತು. ಯಾವ ರೀತಿ ಲಕ್ಷಾಂತರ ಜನರು ವಲಸಹೋಗಬೇಕಾಗಿ ಬಂದು, ಆ ಕಷ್ಟವನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಿಲ್ಲದೆ, ಯಾವ ರೀತಿ ಪ್ರತಿಯೊಂದು ಸರ್ಕಾರವೂ ಕಳವಳಪಡುತ್ತಿತ್ತು, ಇಂದಿಗೂ ಯಾವ ರೀತಿ ಆ ಸಮಸ್ಯೆ ಪರಿಹಾರವಾಗಿಲ್ಲವೆಂಬುದು ಎಲ್ಲರಿಗೂ ಗೊತ್ತು. ಅದೆಲ್ಲಾ ಹೇಗೋ ಒಂದು ಹತೋಟಿಗೆ ಬಂತು, ಶಮನವಾಯಿತು. ಇನ್ನು ಮುಂದೆ ಈ ಜನರಿಗಿರತಕ್ಕ ಸಾಮಾಜಿಕ, ಆರ್ಥಿಕ ಉನ್ನತಿಗಳ ಕಡೆಗೆ ತೀವ್ರ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ಯೋಚನೆಮಾಡುವಷ್ಟರಲ್ಲಿ ಭಾರತ ಸರ್ಕಾರದವರಿಗೆ ತಿರುಗಿ ಇನ್ನೊಂದು ಘರ್ಷಣೆ ಬರುವ ರೀತಿಯಲ್ಲಿ ಸೂಚನೆಗಳು ಬರುತ್ತಿರುವುದು ಎಲ್ಲರ ಮನಸ್ಸಿಗೂ ವ್ಯಥೆಯನ್ನುಂಟುಮಾಡುವ ವಿಷಯ; ಮತ್ತು ಎಲ್ಲರೂ ತೀವ್ರವಾಗಿ ಆಲೋಚನೆ ಮಾಡುವ ವಿಷಯ. ಇದನ್ನು ತತ್ವಗಳ ಆಧಾರದ ಮೇಲೆ ಈ ರೀತಿಯಾಗಿಯೇ ಹೋಗುವುದು ನ್ಯಾಯವಾಗಿರುತ್ತದೆ. ಮಹಾತ್ಮಾ ಗಾಂಧಿಯವರ ಆದರ್ಶವನ್ನು ಪಾಲಿಸಿಕೊಂಡು ಹೋಗಬೇಕೆಂಬುದನ್ನು ಯಾರೂ ಬೇಡವೆಂದು ಹೇಳುವುದಕ್ಕಾಗುವುದಿಲ್ಲ. ಇದೇ ಸಂದರ್ಭದಲ್ಲಿ ರಾಜಪ್ರಮುಖರ ಭಾಷಣವನ್ನು

ನೋಡಿದರೆ ಶ್ರೀಮಾಕ್ ಗುಂಡಪ್ಪಗೌಡರ ಅಭಿಪ್ರಾಯಕ್ಕೂ ಉತ್ತರವಿದೆ. ಅದರಲ್ಲಿ ಏನು ಹೇಳಿದೆ ಎಂದರೆ :

"I earnestly trust that wisdom, and a spirit of humanism and tolerance, will prevail in time, and unity and peace secured, without sacrifice of our interests."

If the Hon'ble Member will please see, I think, he has had the assurance.

ನಮ್ಮ ಅವಶ್ಯಕತೆಯೇನು, ಸಂಸ್ಥಾನದ ಹಿತದೃಷ್ಟಿಯಿಂದ ಏನಾಗಬೇಕು, ಎಂಬುದನ್ನು ಯೋಚನೆಮಾಡಿ ಶಾಂತಿಯಿಂದಿರಬೇಕೆಂದು ಹೇಳಿದರೆ ಕಣ್ಣು ಮುಚ್ಚಿಕೊಂಡು 'ಪೀಸ್' ಎಂದು ಕೂತುಕೊಂಡಿದ್ದಾರೆಂದು ಅದರಲ್ಲಿ ಅರ್ಥವಾಗುವುದಿಲ್ಲ. ಪ್ರಧಾನ ಮಂತ್ರಿಗಳಾದ ಪಂಡಿತ ಜವಾಹಿರಲಾಲ್ ನೆಹರೂರವರು ಹೇಳಿರುವ ಹಾಗೆ ನಾವು ಶಾಂತಿಯಿಂದ ಸರ್ವಪ್ರಯತ್ನವನ್ನೂ, ವ್ಯವಸ್ಥೆಯನ್ನೂ, ಮಾಡುವುದಕ್ಕೆ ಪ್ರಯತ್ನಪಡುತ್ತೇವೆ. ಯುದ್ಧ ಬೇಡವೆಂದು ಸಂಪೂರ್ಣ ಸಹನಪಟ್ಟು ಎಷ್ಟು ಬೇಕೋ ಅಷ್ಟು ಮಾಡಿದ್ದೇವೆ. ಯಾವ ಸಂಧರ್ಭದಲ್ಲೇ ಆಗಲೀ ಸೂಕ್ತ ಮಾರ್ಗವನ್ನನುಸರಿಸುವುದಕ್ಕೆ ಸಿದ್ಧವಾಗಿದ್ದೇವೆ. ಯುದ್ಧ ಮಾಡಲೇಬೇಕೆಂಬ ಸನ್ನಿವೇಶ ಒದಗಿದರೆ ಧೈರ್ಯವಾಗಿ ಹೋರಾಡುತ್ತೇವೆಂದು ಖಂಡಿತವಾಗಿ ಹೇಳಿದ್ದಾರೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಆ ಸನ್ನಿವೇಶ ಬಂದಿಲ್ಲವೆ ?

ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು.—ನಾನು ಅದನ್ನು ಹೇಳುವುದು ಕಷ್ಟ. ಅದನ್ನು ಪಂಡಿತ ಜವಾಹಿರಲಾಲರು ಮತ್ತು ಅವರ ಸರ್ಕಾರದವರು ಹೇಳಬೇಕು.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ನಮಗೆ ಸಾಕಷ್ಟು ಅವಕಾಶವಿದ್ದರೆ ನಮ್ಮ ಸರ್ಕಾರದವರು ನಮ್ಮ ಅಭಿಪ್ರಾಯವನ್ನು ಖಚಿತವಾಗಿ ಹೇಳುವುದಕ್ಕೆ ತೊಂದರೆಯೇನು ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದೇ ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತಿದ್ದೆ. ಯುದ್ಧ ಮಾರ್ಗವನ್ನು ಅನುಸರಿಸಬೇಕೇ ಅಥವಾ ಶಾಂತಿ ಹಾದಿಯನ್ನು ಅಥವಾ ಬೇರೆ ಹಾದಿಯನ್ನು ಅನುಸರಿಸಬೇಕೆ, ಎಂದು ತೀರ್ಮಾನಮಾಡುವವರು ಕೇಂದ್ರ ಸರ್ಕಾರದವರು ; ನಾವಲ್ಲ. ರಕ್ಷಣೆ, ಪರರಾಷ್ಟ್ರ ಸಂಬಂಧ ಮುಂತಾದುವೆಲ್ಲಾ ಅವರಿಗೇ ಸೇರಿರುವುದು.

**Sri H. B. GUNDAPPA GOWDA.**—You need not take shelter under the technicalities.

**Sri K. CHENGALARAYA REDDY.**—There is no technicality. It is a matter of high policy and a well-known constitutional position. ನಮ್ಮ ಸಂಸ್ಥಾನದಲ್ಲಿ ಏನು ಅಭಿವೃದ್ಧಿ ಕಾರ್ಯಗಳು ವಗ್ಗೈರೆ ಆಗಬೇಕೋ ಅದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರುವುದು ನಮ್ಮ ಜವಾಬ್ದಾರಿ. ಎರಡನೆಯದಾಗಿ, ಇಲ್ಲಿ ಶಾಂತಿಗೆ ಧಕ್ಕೆ ಬರುವ ಪ್ರಸಂಗ ವಿದ್ದರೆ ಅದನ್ನು ತಿಳಿದುಕೊಂಡು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಬೇಕಾದ್ದು ನಮ್ಮ ಜವಾಬ್ದಾರಿ ಮತ್ತು ಅದರ ಬಗ್ಗೆ ನಮ್ಮ ಅಭಿಪ್ರಾಯವನ್ನು ಕೇಂದ್ರಕ್ಕೆ ತಿಳಿಸುವುದೂ ನಮ್ಮ ಜವಾಬ್ದಾರಿ. ಇವೆಲ್ಲವನ್ನೂ ಗಮನಿಸಿ ಯಾವ ಕಾಲದಲ್ಲಿ ಏನು ಮಾಡಬೇಕೋ ಅದನ್ನು ಅವಶ್ಯಕವಾಗಿ ಕಣ್ಣಲ್ಲಿ ಕಣ್ಣಿಟ್ಟು ನೆರವೇರಿಸಿದ್ದೇವೆ. ಶಾಂತಿ ಮತ್ತು ಶಿಸ್ತಿನ ವಿಚಾರದಲ್ಲಿ ನಮ್ಮ ನೀತಿಯೇನೆಂಬುವನ್ನು ರಾಜಕೀಯ ಪ್ರಮುಖರು ಹೇಳಿದ್ದಾರೆ. ಶಾಂತಿ ಮತ್ತು ಶಿಸ್ತನ್ನು ಕಾಪಾಡಲು ಬಿಗಿಯಾದ ನೀತಿಯನ್ನು ಅನುಸರಿಸುತ್ತೇವೆ ಮತ್ತು ಧಕ್ಕೆ ಬರುವ ಯಾವ ಸಂದರ್ಭದಲ್ಲೂ ಹಿಂದು ಮುಂದೆ ನೋಡುವುದಿಲ್ಲ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಈ ಪ್ರಶ್ನೆಯನ್ನು ತೀವ್ರವಾಗಿ ಯೋಚನೆಮಾಡಿದ್ದೇವೆಂದು ಹೇಳಿದ್ದೀರಿ. ನಮ್ಮ ಹಿತದೃಷ್ಟಿಗೆ ಧಕ್ಕೆ ಬಾರದಹಾಗೆ ನೋಡಿಕೊಳ್ಳುವುದಾಗಿ ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿದ್ದಾರೆ. It is only a platitude.

**Sri K. CHENGALARAYA REDDY.**—It is no platitude.

**Sri K. T. BHASHYAM.**—Sir, I rise to a point of order. We cannot hear arguments and counter-arguments at this stage. I want a definite ruling from the Chair on the point of order.

**Mr. SPEAKER.**—Has the Hon'ble Member, Sri Gundappa Gowda, got any personal explanation to give?

**Sri H. B. GUNDAPPA GOWDA.**—If the Hon'ble Minister is in a mood to give reply to me, he can answer. Otherwise, I have no right to extract any answer from him.

**Mr. SPEAKER.**—But not in the middle of a speech.

**Sri H. B. GUNDAPPA GOWDA.**—It is not in the middle of the speech.

**Sri K. T. BHASHYAM.**—No, Sir.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—I want to make the position clear. ಇದುವರೆಗೆ ಹಾಗಿತ್ತು, ಶಾಂತಿಯಿದ್ದರೆ ಸಂತೋಷ, ಆದರೆ ಈಗ ಪರಿಸ್ಥಿತಿ ಇಷ್ಟೊಂದು ಹದಗೆಟ್ಟಿರುವಾಗ ಸುಮ್ಮನಿರುವುದಕ್ಕೆ ಸಾಧ್ಯವೆ ? ಅದನ್ನು ಸರಿಪಡಿಸಿ ಎಂದು ಹೇಳುವುದಕ್ಕೆ ಸಾಧ್ಯವಿಲ್ಲವೆ ?

**Sri K. CHENGALARAYA REDDY.**—Mr. Speaker, I think the Honourable Member has made his position quite clear. I have also made my position quite clear. And I want to reiterate that position lest there should be any doubt in the minds of the Hon'ble Members. So far as the overall India policy is concerned, what should be done or what should not be done is the sole responsibility of the Government of India. We are not to take upon ourselves more responsibility or initiative in the matter than what we are entitled to under the present constitutional set-up. I would like to say therefore this much for the consideration of the Hon'ble Member that even internally, any *prathikriye* (ಪ್ರತಿಕ್ರಿಯೆ) in the State by way of reaction to what is happening there, has to be

governed by the all-India policies and all-India considerations. Having said this, I want to sum up or wind up this part of my reply by saying that India is pledged to uphold the great ideal of secularism for which Mahatma Gandhi lived and died. (Loud Cheers.)

**Sri H. B. GUNDAPPA GOWDA.**—I agree. But in spite of it, we owe a duty to our brethren there.

**Sri K. CHENGALARAYA REDDY.**—And the present leaders who are at the helm of affairs in India have lost no opportunity to uphold this great ideal, to place this great ideal before their countrymen and exhort them in no unequivocal terms that whatever happens elsewhere, we must remain true to the ideals of Mahatma Gandhi. It may be that clouds are on the horizon. It may be that we have to go through a period of travail. But ultimately, remaining true to the ideals of Mahatma Gandhi will be conducive not only to the salvation of India but also of the whole world. I do not want to say anything more, Mr. Speaker. I am Isorry I have taken more time than I anticipated. It is true that for the time being we are in office and it may be that we may continue to be in office for sometime—whether for a short period or for a long period, it does not matter; it may be for a day or a month; it does not matter. But for the time that God has vouchsafed, that Providence has been pleased to vest, this responsibility and power in us, we will endeavour, every one of us, separately and all of us jointly, to be true to our conscience and uphold the cause of justice and righteousness and endeavour our utmost to provide equal opportunities for all and to raise the standard of living of the common man. (Loud cheers). To this we are pledged and we will try to do our utmost. I want to make an earnest appeal once again to every one in this country to help us to the extent they may be pleased in the discharge of this great responsibility. (Renewed claps).

**ಶ್ರೀ ಟಿ. ಸುಬ್ರಹ್ಮಣ್ಯರವರು.**—ಅಧ್ಯಕ್ಷರೇ, ನಾನು ಬಹಳವಾಗಿ ಹೇಳುವುದಿಲ್ಲ. ಈ ದಿವಸದ ಭಾಷಣಗಳನ್ನೆಲ್ಲಾ ಕೇಳಿದಮೇಲೆ ಮಹಾರಾಜರ ಭಾಷಣದಲ್ಲಿ ಅಡಕವಾಗಿರುವ ಮುಖ್ಯ ನೀತಿಗಳಿಗೆ ವಿರೋಧವಾದ ಯಾವ ಭಾವನೆಯೂ, ಎಲ್ಲೂ ಹೊರಬೀಳಲಿಲ್ಲವೆಂದು ಕಂಡುಬಂತು. ಇದುವರೆಗೆ ಯಾರು ಬಹಳ ಜೋರಾಗಿ ಟೀಕೆ ಮತ್ತು ಆಕ್ಷೇಪಣೆಗಳನ್ನು ಮಾಡುತ್ತಿದ್ದರೋ ಅವರು ಇನ್ನೂ ಜೋರಾಗಿ ಓಡಿ ಎಂದು ಹೇಳಿ ಆಶ್ಚರ್ಯಕರವಾಗಿ ಮಾತನಾಡಿದ್ದಾರೆ. ನ್ಯಾಯಾಂಗವನ್ನು ಪ್ರತ್ಯೇಕಿಸುವ ವಿಚಾರವನ್ನು ಹೇಳಿದರು. ಆದರೆ ನಮ್ಮ ಮಿತ್ರರು ಒಂದು ವಿಚಾರವನ್ನು ಜ್ಞಾಪಕದಲ್ಲಿಡಬೇಕು. ರೆಸಿಡೆನ್ಸಿಯಿಂದ ಬಂದ ತಿಳಿವಳಿಕೆಮೇಲೆ ಜಡ್ಜ್‌ಮೆಂಟ್ ಹಿಂದೆ ಆದಂತೆ ಈಗ ಬರೆಸುತ್ತಿಲ್ಲ. ಹೈಕೋರ್ಟಿನಲ್ಲಿ ತಿಮ್ಮಾರೆಡ್ಡಿಯವರ ಕೇಸಿನಲ್ಲಿ ಜಡ್ಜ್‌ಮೆಂಟ್ ಆದ ವಿಚಾರವನ್ನು ನಮ್ಮ ಮಿತ್ರರು ಜ್ಞಾಪಕದಲ್ಲಿಡಬೇಕು. ಆದ್ದರಿಂದ ನ್ಯಾಯಾಂಗ ಶಾಖೆಯನ್ನು ಪ್ರತ್ಯೇಕಪಡಿಸುವ ವಿಚಾರದಲ್ಲಿ ಮಾನ್ಯ ಮಂತ್ರಿಗಳಿಂದ ಅಧಿಕಾರಯುತವಾದ ವಾಣಿಯಲ್ಲಿ ಬಂದ ಸಮಜಾಯಿಷಿಯನ್ನೂ, ಬಾಕಿ ವಿಷಯದಲ್ಲಿ ಇತರ ಮಂತ್ರಿಗಳಿಂದ ಬಂದ ಸಮಜಾಯಿಷಿಯನ್ನೂ ಕೇಳಿ ಮಾನ್ಯ ಸದಸ್ಯರೆಲ್ಲರೂ ಒಮ್ಮುಖವಾಗಿ ಮನ್ನಣೆಯಿತ್ತಿದ್ದಾರೆ. ಆದ್ದರಿಂದ ನನ್ನ ನಿರ್ಣಯವನ್ನು ಓಟಿಗೆ ಹಾಕಬಹುದೆಂದು ಕೋರುತ್ತೇನೆ.

**Janab SYED ABDUR RAHMAN.**—I withdraw my amendment.

*The amendment was, by leave of the Assembly, withdrawn.*

**Janab J. MAHOMED IMAM.**—Because the Address is associated with His Highness, I withdraw my amendment.

*The amendment was, by leave of the Assembly, withdrawn.*

**Mr. SPEAKER.**—The question is:

> "That an Address be presented to His Highness the Maharaja in the following terms—
>
> "May It Please Your Highness,
>
> We, the members of the Mysore Legislative Assembly assembled in this Session, beg leave to thank Your Highness for the Address delivered to the Assembly."

*The motion was adopted.*

## Programme of Business for Tuesday 21st March 1950.

**ಜನಾಬ್ ಜೆ. ಮಹಮ್ಮದ್ ಇಮಾಂರವರು.**—21ನೆಯ ತಾರೀಖಿನ ದಿನ ಬಡ್ಜೆಟ್‌ನ ಒಂದೇ ಕೆಲಸವಿರುವುದರಿಂದ ಸಾಧ್ಯವಾದರೆ 3 ಗಂಟೆಗೆ ಆ ದಿವಸ ಪ್ರಾರಂಭಿಸಬೇಕೆಂದು ಕೋರುತ್ತೇನೆ.

**ಅಧ್ಯಕ್ಷರು.**—ಆ ವಿಷಯದಲ್ಲಿ ಮುಖ್ಯ ಮಂತ್ರಿಗಳ ಅಭಿಪ್ರಾಯವೇನು ?

**ಶ್ರೀ ಕೆ. ಚೆಂಗಲರಾಯರೆಡ್ಡಿಯವರು.**—ಆ ರೀತಿ ಮಾಡಬಹುದೆಂದು ಕಾಣುತ್ತದೆ.

**Sri K. T. BHASHYAM** (Minister for Law and Labour).—Sir, I want to suggest that 21st happens to be Tuesday there will be *Rahukulam* from 3 to 4-30 P.M.

ಜನಾಬ್ ಜೆ. ಮಹಮ್ಮದ್ ಇಮಾಂರವರು.—ಪ್ರತಿ ದಿನವೂ ನಾವು ರಾಹು ಕಾಲದಲ್ಲೇ ಪ್ರಾರಂಭಿಸುತ್ತೇವೆ.

**Sri K. CHENGALARAYA REDDY** (Leader of the House).—I suggest, Sir, definitely that we may meet at 2 p.m. on the 21st instant.

ಅಧ್ಯಕ್ಷರು.—ಮಂಗಳವಾರದ ದಿವಸ ಈ ಸಭೆಯು 2 ಘಂಟೆಗೆ ಸೇರುತ್ತದೆ. ಬುಧವಾರದಿಂದ ಸಭೆಯು ಮಧ್ಯಾಹ್ನ ಒಂದು ಗಂಟೆಗೆ ಪ್ರಾರಂಭವಾಗಿ ಸಾಯಂಕಾಲ ಆರು ಗಂಟೆಯುವರೆಗೆ ನಡೆಯುತ್ತದೆ. ಮುಂದಿನ ಕಾರ್ಯಕ್ರಮವು ಈ ರೀತಿಯಾಗಿದೆ :—

PROGRAMME OF BUSINESS FOR THE REST OF THE SESSION.

| | | | | |
|---|---|---|---|---|
| 21st | March 1950 | Tuesday | ... | Introduction of Bills. Presentation of the Budget. |
| 22nd | do | Wednesday | ... | Non-official Business—Resolutions. |
| 23rd | do | Thursday | ... | General Discussion on the Budget. |
| 24th | do | Friday | ... | General Discussion on the Budget. |
| 25th | do | Saturday | ... | General Discussion on the Budget. |
| 26th | do | Sunday | ... | ...... |
| 27th | do | Monday | ... | Voting of Demands for Grants |
| 28th | do | Tuesday | ... | Do do |
| 29th | do | Wednesday | ... | Do do |
| 30th | do | Thursday | ... | Do do |
| 31st | do | Friday | ... | Supplementary Demands for Grants, Appropriation Bill and Money Bills. |
| 1st | April 1950 | Saturday | ... | Legislative Business. |
| 2nd | do | Sunday | ... | ...... |
| 3rd | do | Monday | ... | Legislative Business. |
| 4th | do | Tuesday | ... | Non-official Business. |

**Non-official Bills and Resolutions.**

**Mr. SPEAKER.**—The House stands adjourned till 2 p.m. on 21st March 1950.

*The Assembly adjourned at Fifteen Minutes past Six of the Clock to meet again at Two of the Clock on Tuesday, 21st March 1950.*

---